ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 17 ಗುರುವಾರ 2022


ಸಂಪುಟ: 43 | ಸಂಚಿಕೆ: 210 | ಪುಟಗಳು: 10

43

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಒಳಪುಟಗಳಲ್ಲಿ

ಉರುಳಿಗೆ ಬಲಿಯಾದ ಹುಲಿಯ ಮರಿಗಳು ಸೇಫ್

● ಚಲನವಲನ ಕ್ಯಾಮರಾದಲ್ಲಿ ಸೆರೆ * ಜಿಂಕೆ ಬೇಟೆಯಾಡಿ, ಅದರ ಮಾಂಸ ಸೇವನೆ
● ಬೇಟೆಯಾಡುವ ಸಾಮರ್ಥ್ಯ ಸಾಬೀತಾದಂತಾಯ್ತು * ಸೆರೆ ಹಿಡಿಯುವ ಯತ್ನದಿಂದ ಹಿಂದೆ ಸರಿದ ಅರಣ್ಯ ಇಲಾಖೆ ● ಆದರೂ ಇನ್ನು ಕೆಲ ದಿನ ಹುಲಿ ಮರಿಗಳ ಚಲನ–ವಲನಗಳ ಮೇಲೆ ನಿಗಾ

ಮೈಸೂರು, ನ.16(ಎಂಟಿವೈ)– ಬೇಟೆಗಾರರ ಉರುಳಿಗೆ ಸಿಲುಕಿ ಮೃತಪಟ್ಟಿದ್ದ ಹುಲಿಯ ಮೂರು ಮರಿಗಳ ಚಲನ–ವಲನ ಮೂರು ದಿನದ ಹಿಂದೆ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಜಿಂಕೆಯೊಂದನ್ನು ಬೇಟೆಯಾಡಿ, ಅದರ ಮಾಂಸ ಸೇವಿಸುತ್ತಿರುವ ದೃಶ್ಯ ದಾಖಲಾಗಿದೆ. ಇದರಿಂದ ಮರಿಗಳು ಸುರಕ್ಷಿತವಾಗಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ನಿಟ್ಟುಸಿರು ಬಿಟ್ಟಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ವಲಯದ ಸರಹದ್ದಿನಲ್ಲಿ ನ.12 ರಂದು ಕೊಳೆತ ಸ್ಥಿತಿಯಲ್ಲಿ ದೊರೆತ ಹೆಣ್ಣು ಹುಲಿಯ ಮೂರು ಮರಿಗಳ ಬಗ್ಗೆ ಅರಣ್ಯ ಇಲಾಖೆ ಕಳವಳ ವ್ಯಕ್ತಪಡಿಸಿತ್ತು. ಸುಮಾರು 8 ತಿಂಗಳ ಮರಿಗಳಾಗಿದ್ದು, ಬೇಟೆಯಾಡಲು ಶಕ್ತವಾಗಿಲ್ಲದ ಕಾರಣ ಹಸಿವಿನಿಂದ ಕಂಗೆಟ್ಟಿರುವ ಅನುಮಾನ ವ್ಯಕ್ತವಾಗಿತ್ತು. ಈ ಮರಿಗಳ ರಕ್ಷಣೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಕೈಗೊಂಡಿತ್ತು.

ಅಂತರಸಂತೆ ವಲಯದ ಸಫಾರಿ ವಿಭಾಗದ ನಾಯಂತಿಕಟ್ಟೆ ಬಳಿ 2009ರಿಂದ 2022ರ ಆಗಸ್ಟ್ ವರೆಗೂ ನಿತ್ಯವೂ ಕಾಣಿಸಿಕೊಳ್ಳುತ್ತಿದ್ದ ಹೆಣ್ಣು ಹುಲಿ, ಅರಣ್ಯ ಗಡಿಯಿಂದ 300 ಮೀಟರ್ ಹೊರಗೆ ಬಂದು ಕೃಷಿ ಭೂಮಿಗೆ ಹೊಂದಿಕೊಂಡಂತೆ ಹಳ್ಳದಲ್ಲಿ ತನ್ನ ಮೂರು ಮರಿಗಳೊಂದಿಗೆ ಬೀಡು ಬಿಟ್ಟಿತ್ತು. ಬೇಟೆಗಾರರು ಹಂದಿ ಬೇಟೆಗೆ ಹಾಕಿದ್ದ ಉರುಳಿಗೆ ಸಿಲುಕಿ ತಾಯಿ ದಾರುಣವಾಗಿ ಮೃತಪಟ್ಟಿತ್ತು. 8 ದಿನಗಳ ಬಳಿಕ ▶ 8ನೇ ಪುಟಕ್ಕೆ




> " ನಮಗೆ ವಿಶ್ವಾಸ ಬರುವವರೆಗೂ ಅವುಗಳ ಚಲನ–ವಲನ ಗಮನಿಸುತ್ತಲೇ ಇರುತ್ತೇವೆ. ಈಗಾಗಲೇ ಹುಲಿ ಮರಿಗಳು ಸುರಕ್ಷಿತವಾಗಿರುವುದು ದೃಢಪಟ್ಟಿದೆ. ಬೇಟೆಯಾಡುವ ಸಾಮರ್ಥ್ಯವೂ ಮರಿಗಳಲ್ಲಿರುವುದು ಕಂಡು ಬಂದಿದೆ. ಹಾಗಾಗಿ ಇನ್ನು ಅವುಗಳ ಸೆರೆಗೆ ಮುಂದಾಗುವುದಿಲ್ಲ. ಅಲ್ಲದೆ ಅವುಗಳಿಗೆ ಯಾವುದೇ ರೀತಿಯಲ್ಲೂ ಅಡ್ಡಿ ಮಾಡುವುದಿಲ್ಲ. ಆದರೆ ಕೂಂಬಿಂಗ್ ಕಾರ್ಯಾಚರಣೆ ಮುಂದುವರೆಸುತ್ತೇವೆ.
>
> – ಹರ್ಷಕುಮಾರ್ ನರಗುಂದ, ನಿರ್ದೇಶಕರು, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ

ಮೈಸೂರು ಬಳಿ ಹೊಸ ನಗರ ನಿರ್ಮಾಣ

● ಮುಂದಿನ ಆರು ತಿಂಗಳಲ್ಲಿ ರೂಪು–ರೇಷೆ ನಿರ್ಧಾರ ● ಮೈಸೂರು ಅಲ್ಲದೆ ಕಲಬುರಗಿ, ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು ಸುತ್ತಮುತ್ತಲೂ ನವ ನಗರಗಳ ಸ್ಥಾಪನೆ ● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

ಬೆಂಗಳೂರು, ನ.16(ಕೆಎಂಶಿ)–ಮೈಸೂರು ಸೇರಿದಂತೆ ಆರು ನಗರಗಳ ಸುತ್ತಮುತ್ತ ಹೊಸ ನಗರಗಳ ನಿರ್ಮಾಣ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದಾರೆ. ಮೈಸೂರು ಅಲ್ಲದೆ ಕಲಬುರಗಿ, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಬೆಂಗಳೂರು ಸುತ್ತಮುತ್ತ ನಿರ್ಮಾಣವಾಗಲಿರುವ ಹೊಸ ನಗರಗಳು ವಿಭಿನ್ನ ಮಾದರಿಯವುಗಳಾಗಿರುತ್ತವೆ. ಇವುಗಳ ರೂಪು–ರೇಷೆಯನ್ನು ಮುಂದಿನ ಆರು ತಿಂಗಳಲ್ಲಿ ನಿರ್ಧರಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವರ್ಚುಯಲ್ ಆಗಿ ಉದ್ಘಾಟಿಸಿದ ಬೆಂಗಳೂರು ಟೆಕ್ ಸಮ್ಮಿಟ್ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು



ಅವರು ಮಾತನಾಡಿದರು. ಬೆಂಗಳೂರಿನ ಪಕ್ಕ ಹೊಸ ನಗರ ನಿರ್ಮಾಣ ಮಾಡಲಾಗುತ್ತದೆ. ಜ್ಞಾನ, ವಿಜ್ಞಾನ ಹಾಗೂ ಟೆಕ್ ಸಿಟಿ ನಿರ್ಮಾಣ ಮಾಡಲಾಗುತ್ತಿದ್ದು, ಇದು ವಿಮಾನ ನಿಲ್ದಾಣಕ್ಕೆ ಹತ್ತಿರವಿರಲಿದೆ. ಆರು ತಿಂಗಳೊಳಗೆ ಈ ನಗರಗಳ ನಿರ್ಮಾಣದ ಬಗ್ಗೆ ಘೋಷಣೆ ಮಾಡಲಿದ್ದು, ಯೋಜನೆಯನ್ನು ರೂಪಿಸಲಾಗುವುದು. ಸ್ಟಾರ್ಟ್ ಅಪ್‌ಗಳನ್ನು ಪ್ರೋತ್ಸಾಹಿಸಲು ಅನೇಕ ಕಾರ್ಯಕ್ರಮಗಳಿದ್ದು, ಸರ್ಕಾರದ ವತಿಯಿಂದ ಇನ್ನಷ್ಟು ಕಾರ್ಯಕ್ರಮ ರೂಪಿಸಬೇಕಿದೆ. ಸ್ಟಾರ್ಟ್ ಅಪ್ ಪಾರ್ಕ್ ನಿರ್ಮಾಣಕ್ಕೆ ತೀರ್ಮಾನಿಸಿದ್ದು ಇದೂ ಕೂಡ ಆರು ತಿಂಗಳಲ್ಲಿ ಸ್ಥಾಪಿಸಲಾಗುವುದು. ನಮ್ಮ ಪ್ರಧಾನಿಗಳು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ಟರ್ಮಿನಲ್ ಉದ್ಘಾಟನೆ ಮಾಡಿದ್ದಾರೆ. ಜಗತ್ತಿನಲ್ಲಿಯೇ ಅತ್ಯಂತ ಸುಂದರವಾದ ಟರ್ಮಿನಲ್ ಇದಾಗಿದೆ. ಬೆಂಗಳೂರಿನಲ್ಲಿ ಎಲ್ಲವೂ ಸಾಧ್ಯವಿದೆ. ತಂತ್ರಜ್ಞಾನಗಳೆಲ್ಲವೂ ವಿಶ್ವದ ಭವಿಷ್ಯಕ್ಕೆ ಮಾನವ ಅಭಿವೃದ್ಧಿ ಸಮಾವೇಶದ ಧ್ಯೇಯವಾಗಲಿ ಎಂದರು. ಉದ್ಯಮಿಗಳು ಅಭಿವೃದ್ಧಿಗೆ ಪೂರಕ ಸಾಧನೆ ಜೊತೆಗೆ ಸರ್ಕಾರಕ್ಕೂ ಆದಾಯ ತರುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು. ನಾವು ಜಾಗತಿಕವಾಗಿ ▶ 8ನೇ ಪುಟಕ್ಕೆ

ಬೆಂಗಳೂರು ತಂತ್ರಜ್ಞಾನ ಶೃಂಗಸಭೆಗೆ ವರ್ಚುಯಲ್ ಮೂಲಕ ಪ್ರಧಾನಿ ಚಾಲನೆ

ಮೂಲ ಸೌಕರ್ಯ ಅಭಿವೃದ್ಧಿಗೆ 100 ಟ್ರಿಲಿಯನ್ ಡಾಲರ್ ವಿನಿಯೋಗ



● ಪ್ರಧಾನಿ ಮೋದಿ ಘೋಷಣೆ
● ತಂತ್ರಜ್ಞಾನದಲ್ಲಿ ಕರ್ನಾಟಕದ ಸಾಧನೆಗೆ ಪ್ರಶಂಸೆ
● ಬಡತನದ ವಿರುದ್ಧ ಹೋರಾಟಕ್ಕೆ ಇದೇ ಸಮರ್ಥ ಅಸ್ತ್ರ

ಬೆಂಗಳೂರು, ನ.16(ಕೆಎಂಶಿ)– ಮೂಲಸೌಲಭ್ಯ ಅಭಿವೃದ್ಧಿಗೆ ಮುಂಬರುವ ದಿನಗಳಲ್ಲಿ 100 ಟ್ರಿಲಿಯನ್ ಡಾಲರ್‌ನಷ್ಟು ಅಗಾಧ ಮೊತ್ತವನ್ನು ವಿನಿಯೋಗಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.


25ನೇ ವರ್ಷದ ಪ್ರತಿಷ್ಠಿತ ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯನ್ನು ಉದ್ದೇಶಿಸಿ ವರ್ಚುಯಲ್ ಆಗಿ ಮಾತನಾಡಿದ ಅವರು, ದೇಶದಲ್ಲಿ ಬಂಡವಾಳ ಹೂಡಿಕೆದಾರರ ಪಾಲಿಗೆ ಹಿಂದಿನ ಕೆಂಪುಪಟ್ಟಿಯ ಸಮಸ್ಯೆ ಕೊನೆಗೊಂಡಿದ್ದು, ಈಗ ರತ್ನಗಂಬಳಿಯ ಸ್ವಾಗತವಿದೆ ಎಂದರು.

ಅದರಲ್ಲೂ ಕರ್ನಾಟಕ ತಂತ್ರಜ್ಞಾನ, ನಾವೀನ್ಯತೆ ಮತ್ತು ಸಮರ್ಥ ನಾಯಕತ್ವದ ತವರಾಗಿದೆ ಎಂದು ಬಣ್ಣಿಸಿದ ಪ್ರಧಾನಿಗಳು, ತಂತ್ರಜ್ಞಾನಕ್ಕೆ ಮಾನವೀಯ ಮತ್ತು ಪ್ರಜಾಸತ್ತಾತ್ಮಕ ಸ್ಪರ್ಶವನ್ನು ನೀಡುತ್ತಲೇ ಇರುವುದು ಭಾರತದ ಅನನ್ಯ ಸಾಧನೆಯಾಗಿದೆ. ಅದರಲ್ಲೂ ತಂತ್ರಜ್ಞಾನವು ನಮಗೆ ಬಡತನದ ವಿರುದ್ಧದ ಹೋರಾಟಕ್ಕೆ ಶಕ್ತಿಶಾಲಿ ಅಸ್ತ್ರವಾಗಿದೆ ಎಂದರು. ▶ 8ನೇ ಪುಟಕ್ಕೆ

ಡಿ.18ರಂದು ಮುಖ್ಯಮಂತ್ರಿಗಳಿಂದ ಮೈಸೂರಲ್ಲಿ ಡಾ. ವಿಷ್ಣುವರ್ಧನ್ ಸ್ಮಾರಕ ಉದ್ಘಾಟನೆ

ಎಸ್.ಟಿ. ರವಿಕುಮಾರ್

ಮೈಸೂರು,ನ.16–ಹಲವು ವರ್ಷಗಳಿಂದ ಲಕ್ಷಾಂತರ ಅಭಿಮಾನಿಗಳು ನಿರೀಕ್ಷಿಸುತ್ತಿದ್ದ ಕನ್ನಡ ಚಿತ್ರರಂಗದ ಸಾಹಸಸಿಂಹ, ಅಭಿನಯ ಭಾರ್ಗವ ದಿವಂಗತ ಡಾ. ವಿಷ್ಣುವರ್ಧನ್ ಸ್ಮಾರಕ ಕಾಮಗಾರಿ ಅವರ ಜನ್ಮಭೂಮಿ ಮೈಸೂರಲ್ಲಿ ಪೂರ್ಣಗೊಂಡಿದೆ.



ಬಸವರಾಜ ಬೊಮ್ಮಾಯಿ

ಬಹು ನಿರೀಕ್ಷಿತ ಹಾಗೂ ಕರ್ನಾಟಕದ ಅಸಂಖ್ಯಾತ ವಿಷ್ಣು ಅಭಿಮಾನಿಗಳ ಕನಸು ಕಡೆಗೂ ನನಸಾಗಿದೆ. ಮೈಸೂರು ತಾಲೂಕು ಹಾಲಾಳು ಗ್ರಾಮದ ಸರ್ವೆ ನಂಬರ್ 8ರ 5 ಎಕರೆ ಪ್ರದೇಶದಲ್ಲಿ ಸುಮಾರು 11 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಡಾ. ವಿಷ್ಣುವರ್ಧನ್ ಸ್ಮಾರಕ ಭವನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಡಾ.ವಿಷ್ಣುವರ್ಧನ್ ಅವರ ಧರ್ಮಪತ್ನಿ ಶ್ರೀಮತಿ ಭಾರತಿ ವಿಷ್ಣುವರ್ಧನ್, ಅಳಿಯ ಅನಿರುದ್ಧ್, ಸಂಸದ ಪ್ರತಾಪ್ ಸಿಂಹ, ಶಾಸಕ ಜಿ.ಟಿ. ದೇವೇಗೌಡ ಸೇರಿದಂತೆ ಕನ್ನಡ ಚಲನಚಿತ್ರ ನಟ–ನಟಿಯರು, ಸಿನೆಮಾ ರಂಗದ ದಿಗ್ಗಜರು, ಇನ್ನಿತರೆ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುವ ಡಾ. ವಿಷ್ಣುವರ್ಧನ್ ಪ್ರತಿಷ್ಠಾನ ಟ್ರಸ್ಟ್ ವತಿಯಿಂದ ಈ ಸ್ಮಾರಕ ನಿರ್ಮಾಣವಾಗಿದೆ. ಎರಡು ಎಕರೆ ಪ್ರದೇಶದಲ್ಲಿ ಡಾ. ವಿಷ್ಣುವರ್ಧನ್ ಅವರ ಸಮಾಧಿ ಹಾಗೂ 20 ಅಡಿ ಎತ್ತರದ ಪ್ರತಿಮೆ ನಿರ್ಮಿಸಲಾಗಿದೆ. ಅವರು ಬಳಸುತ್ತಿದ್ದ ಕೈ ಕಡಗ, ಟೋಪಿ, ಇನ್ನಿತರ ವಸ್ತುಗಳು, ಓದುತ್ತಿದ್ದ ಪುಸ್ತಕಗಳು, ಅವರು ಅಭಿನಯಿಸಿರುವ ಚಲನಚಿತ್ರಗಳ ದೃಶ್ಯ ಬಿಂಬಿಸುವ ಛಾಯಾಚಿತ್ರಗಳನ್ನೊಳಗೊಂಡ ವಸ್ತುಸಂಗ್ರಹಾಲಯವನ್ನು ಇಲ್ಲಿ ನಿರ್ಮಿಸಲಾಗಿದೆ.



ಹೆಚ್.ಡಿ.ಕೋಟೆ ರಸ್ತೆಯ ಉದ್ಬೂರು ಗೇಟ್ ಬಳಿ ನಿರ್ಮಿಸುತ್ತಿರುವ ದಿ. ಡಾ. ವಿಷ್ಣುವರ್ಧನ್ ಸ್ಮಾರಕ.

ಮುಂಬರುವ ಕಲಾವಿದರಿಗೆ ಸಿನಿಮಾ ಅಭಿನಯ, ನಿರ್ದೇಶನ, ಗೀತ ರಚನೆ, ಸಾಹಿತ್ಯ ಕುರಿತು ತರಬೇತಿ ನೀಡಲು ಸುಸಜ್ಜಿತ ಕೇಂದ್ರ ಕಟ್ಟಡ, ಯೋಗ ಮತ್ತು ಧ್ಯಾನ ಮಂದಿರ, ಪುಣೆಯಲ್ಲಿರುವ ಸಿನಿಮಾ ಮತ್ತು ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಮಾದರಿಯ ಕೇಂದ್ರವನ್ನೂ ವಿಷ್ಣು ಸ್ಮಾರಕ ಒಳಗೊಂಡಿದೆ.

ಆಡಿಯೋ ಅಂಡ್ ವಿಡಿಯೋ ಗ್ಯಾಲರಿ, ಭವ್ಯ ಸಭಾಂಗಣ, ಡಾ. ವಿಷ್ಣು ಸ್ಮಾರಕ ಉದ್ಯಾನವನ, ಶೌಚಾಲಯ, ವಿಶ್ರಾಂತ ಗೃಹ ಸೌಲಭ್ಯಗಳ ವ್ಯವಸ್ಥೆ ಮಾಡಿದ್ದು, 5 ಎಕರೆ ಪ್ರದೇಶದ ಸುತ್ತಲೂ ಕಾಂಪೌಂಡ್ ನಿರ್ಮಿಸಲಾಗಿದ್ದು, ಕುಡಿಯುವ ನೀರು, ವಿದ್ಯುತ್ ದೀಪಗಳು, ಎಲ್ಲೆಡೆ ಸಿಸಿ ಕ್ಯಾಮರಾಗಳನ್ನೂ ಅಳವಡಿಸಲಾಗುತ್ತಿದೆ. ಈಗಾಗಲೇ ಶೇ.94ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, 15 ದಿನದೊಳಗಾಗಿ ಸ್ಮಾರಕ ಉದ್ಘಾಟನೆಗೆ ಸಿದ್ಧಗೊಳ್ಳಲಿದೆ.

2009ರ ಡಿಸೆಂಬರ್ 30ರಂದು ಡಾ.ವಿಷ್ಣುವರ್ಧನ್ ಹುಟ್ಟೂರು ಮೈಸೂರಿನಲ್ಲಿ ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿದ್ದರು. 200ಕ್ಕೂ ಅಧಿಕ ಚಿತ್ರಗಳಲ್ಲಿ ವಿಭಿನ್ನ ಪಾತ್ರಾಭಿನಯ ಮಾಡಿದ್ದ ಅವರು, ತಮ್ಮ ಭಾವನಾತ್ಮಕ ನಟನೆ ಮೂಲಕ ಕರ್ನಾಟಕದ ಜನರ ಹೃದಯ ಗೆದ್ದಿದ್ದರು. ಸದ್ದಿಲ್ಲದೇ ಸಮಾಜ ಸೇವೆ ಮೂಲಕ ಸಾವಿರಾರು ಬಡ ಕುಟುಂಬಗಳಿಗೆ ನೆರವು ನೀಡುತ್ತಿದ್ದರೆಂಬುದು ವಿಷ್ಣು ನಮ್ಮನ್ನಗಲಿದ ನಂತರವಷ್ಟೇ ಬಯಲಾಗಿತ್ತು.





ಡಾ.ವಿಷ್ಣುವರ್ಧನ್ ಡಾ.ಭಾರತಿ ವಿಷ್ಣುವರ್ಧನ್

ಇಂತಹ ಸಹೃದಯ ನಟನ ಸ್ಮಾರಕ ನಿರ್ಮಾಣಕ್ಕೆ ಹಲವು ಅಡ್ಡಿ ಎದುರಾಗಿ, ಡಾ.ವಿಷ್ಣು ಅಭಿಮಾನಿಗಳು, ಕನ್ನಡಿಗರಿಗೆ ತೀವ್ರ ನೋವುಂಟು ಮಾಡಿತ್ತು. ಆರಂಭದಲ್ಲಿ ಸರ್ಕಾರವು ಬೆಂಗಳೂರಿನ ಉತ್ತರಹಳ್ಳಿಯ ಅಭಿಮಾನ್ ಸ್ಟುಡಿಯೋ (ವಿಷ್ಣುವರ್ಧನ್ ಅಂತ್ಯಕ್ರಿಯೆ ನಡೆದ ಸ್ಥಳ)ದಲ್ಲಿ ಸ್ಮಾರಕ ನಿರ್ಮಿಸಲು ಯೋಜಿಸಿತ್ತು. ನಂತರ ಕೆಂಗೇರಿಯ ಮೈಲಸಂದ್ರದಲ್ಲಿ ಭೂಮಿ ಮಂಜೂರು ಮಾಡಿತ್ತಾದರೂ, ಅದು ತುರಹಳ್ಳಿ ಅರಣ್ಯದ ಬಫರ್ ಜೋನ್ ಎಂದು ತಿಳಿದು, ಯೋಜನೆ ಕೈಬಿಡಲಾಗಿತ್ತು.

ಆರಂಭದಲ್ಲೇ ವಿಘ್ನಗಳು ಎದುರಾದ ಹಿನ್ನೆಲೆಯಲ್ಲಿ ಪತ್ನಿ ಭಾರತಿ, ವಿಷ್ಣು ಸ್ಮಾರಕವನ್ನು ಹುಟ್ಟೂರು ಮೈಸೂರಲ್ಲೇ ನಿರ್ಮಿಸುವ ಇಂಗಿತ ವ್ಯಕ್ತಪಡಿಸಿದ ಕಾರಣ, ಅಗತ್ಯ ಭೂಮಿ ಹಾಗೂ ಅನುದಾನ ಕಲ್ಪಿಸಿತ್ತು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಒಂದೂವರೆ ವರ್ಷದ ಹಿಂದೆ ವರ್ಚುಯಲ್ ಮೂಲಕ ಮೈಸೂರಿನ ಡಾ.ವಿಷ್ಣುವರ್ಧನ್ ಸ್ಮಾರಕ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಪ್ರತಿಷ್ಠಾನದ ಸದಸ್ಯರಾದ ಡಾ. ಭಾರತಿ ವಿಷ್ಣುವರ್ಧನ್ ಹಾಗೂ ಅಳಿಯ ಅನಿರುದ್ಧ್ ಅವರು ಆಸಕ್ತಿ ವಹಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಸ್ಮಾರಕ ಕಾಮಗಾರಿ ಕೈಗೊಳ್ಳಲಾಗಿತ್ತು.

ಪಾಲಿಕೆ ಅದಾಲತ್‌ನಲ್ಲಿ ಇದುವರೆಗೆ 111 ಅರ್ಜಿ ಸಲ್ಲಿಕೆ

ಮೈಸೂರು,ನ.16(ಆರ್‌ಕೆಬಿ)–ಮೈಸೂರು ನಗರಪಾಲಿಕೆ ಆಯೋಜಿಸಿರುವ ಆರು ದಿನಗಳ ಪಾಲಿಕೆ ಅದಾಲತ್‌ನ 3ನೇ ದಿನವಾದ ಮಂಗಳವಾರ ವಿವಿಧ ಶಾಖೆಗಳಲ್ಲಿ 56 ಅರ್ಜಿಗಳು ಸೇರಿ ಮೂರು ದಿನಗಳಲ್ಲಿ ಒಟ್ಟು 111 ಅರ್ಜಿಗಳು ಸ್ವೀಕೃತಗೊಂಡಿವೆ. ನಗರ ಪಾಲಿಕೆ ಮತ್ತು ವಲಯ ಕಚೇರಿಗಳಲ್ಲಿ ಅರ್ಜಿ ಸಲ್ಲಿಸಿ ಕೆಲಸ ಆಗದಿರುವವರಿಗಾಗಿ ಕುಂದುಕೊರತೆಗಳ ತ್ವರಿತ ಪರಿಹಾರ ಮತ್ತು ಮೈಸೂರಿನ ನಿವಾಸಿಗಳಿಗೆ ಸರ್ಕಾರಿ ಸೇವೆಗಳನ್ನು ತಲುಪಿಸುವ ಗುರಿಯೊಂದಿಗೆ ಈ ಅದಾಲತ್ ಆಯೋಜಿಸಿದೆ.



ವಿವಿಧ ಶಾಖೆಗಳಡಿ ತೆರೆಯಲಾದ ಐದು ಕೌಂಟರ್‌ಗಳಲ್ಲಿ ಮಂಗಳವಾರ ಕಂದಾಯ ಶಾಖೆಯಲ್ಲಿ ಖಾತೆಗಳಿಗೆ ಸಂಬಂಧಿಸಿದಂತೆ 25 ದೂರುಗಳು ದಾಖಲಾದವು. ನಗರಯೋಜನೆಯಡಿ ಪ್ಲಾನ್ ನೀಡಿಲ್ಲ ಎಂಬ 6 ಅರ್ಜಿ, ಮನೆ ಕೊಡುವಂತೆ ಆಶ್ರಯ ಶಾಖೆಯಲ್ಲಿ 5 ಅರ್ಜಿ, ಅಭಿವೃದ್ಧಿ ಮತ್ತು ತಾಂತ್ರಿಕ ಶಾಖೆಯಲ್ಲಿ ಕಟ್ಟಡ ಪೂರ್ಣಗಳಿಸಿದ ವರದಿಗಾಗಿ 2 ಅರ್ಜಿ, ಆರೋಗ್ಯ ಶಾಖೆಯಲ್ಲಿ ಟ್ರೇಡ್ ಲೈಸೆನ್ಸ್‌ಗಾಗಿ ಒಂದು ಅರ್ಜಿ, ಒಳಚರಂಡಿ ಮತ್ತು ವಾಣಿ ವಿಲಾಸ ನೀರು ಸರಬರಾಜು ವಿಭಾಗದಲ್ಲಿ ಒಳಚರಂಡಿಗೆ ಸಂಬಂಧಿಸಿದಂತೆ 3 ದೂರು, ಬಡತನ ನಿರ್ಮೂಲನಾ ಶಾಖೆಯಲ್ಲಿ 11 ಅರ್ಜಿ, ಇತರೆ 3 ಅರ್ಜಿಗಳು ಸೇರಿ 56 ಅರ್ಜಿಗಳು ಸಲ್ಲಿಕೆಯಾದವು. ಲೆಕ್ಕಪತ್ರ ಮತ್ತು ಆಡಳಿತ ಶಾಖೆಯಲ್ಲಿ ಇಂದು ಕೂಡ ಯಾವುದೇ ಅರ್ಜಿ ಸಲ್ಲಿಕೆಯಾಗಲಿಲ್ಲ. ನ.19ರವರೆಗೆ ಬೆಳಗ್ಗೆ 11ರಿಂದ ಸಂಜೆ 4.30ರವರೆಗೆ ನಗರ ಪಾಲಿಕೆ ಅದಾಲತ್ ನಡೆಯಲಿದೆ. ಅದಾಲತ್‌ನಲ್ಲಿ ಸ್ವೀಕರಿಸಿದ ಅರ್ಜಿಗಳಿಗೆ ನ.27ರೊಳಗೆ ಅರ್ಜಿದಾರರಿಗೆ ತೆಗೆದುಕೊಂಡ ಕ್ರಮ ಅಥವಾ ಸ್ಥಿತಿ, ಸಮಸ್ಯೆಯ ಪರಿಹಾರದ ಕುರಿತು ಪತ್ರಗಳನ್ನು ಕಳುಹಿಸಲಾಗುವುದು. ಅರ್ಜಿದಾರರು ತಮ್ಮ ದೂರು ಪರಿಹಾರಗಳ ಬಗ್ಗೆ ತೃಪ್ತರಾಗದಿದ್ದರೆ, ನ.30ರಂದು ನಡೆಯುವ ಅಂತಿಮ ಅದಾಲತ್‌ನಲ್ಲಿ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ.



ಮಂಗಳವಾರ ಮೈಸೂರಲ್ಲಿ ನಡೆದ ಸಿದ್ದರಾಮಯ್ಯ@75 ಎಂಬ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರನ್ನು ವಿಚಾರವಾದಿ ಬಳಗದ ಎಚ್.ವಿ.ಚಂದನ್ ಮತ್ತು ಕೆ.ಚೇತನ್ ಆತ್ಮೀಯವಾಗಿ ಸನ್ಮಾನಿಸಿದರು. ಅಲ್ಲದೆ, ನೂಲಿನಿಂದ ಹೆಣೆದ ಸಿದ್ದರಾಮಯ್ಯನವರ ಭಾವಚಿತ್ರವನ್ನು ಕೊಡುಗೆಯಾಗಿ ನೀಡಿದರು. ಈ ವೇಳೆ ಹಿರಿಯ ಸಮಾಜವಾದಿ ಚಿಂತಕ ಪ.ಮಲ್ಲೇಶ್, ವಿಧಾನಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ, ಮಾಜಿ ಸಚಿವ ಎಚ್.ಸಿ.ಮಹದೇವಪ್ಪ, ಡಾ.ಹರೀಶ್‌ಕುಮಾರ್, ಹಿನಕಲ್ ಪ್ರಕಾಶ್, ಗೋಪಾಲಕೃಷ್ಣ ಶಿವರಾಮ್, ವಿಚಾರವಾದಿ ಬಳಗದ ಸದಸ್ಯರಿದ್ದರು.

ಹೆಚ್‌ಆರ್ ದಸರಾ–2022ರ ಪ್ರಯುಕ್ತ
ನ.18ರಂದು ಹೆಚ್‌ಆರ್–ಟಿಪಿಓ ಸಮಾವೇಶ

ಮೈಸೂರು,ನ.16(ಪಿಎಂ)– ಮೈಸೂರು ಹೆಚ್‌ಆರ್ ಫೋರಮ್ ಹಾಗೂ ಎಡಿನ್ ಬ್ರಿಡ್ಜ್ ಫೌಂಡೇಷನ್ ಸೇರಿದಂತೆ ವಿವಿಧ ಕಂಪನಿಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಹೆಚ್‌ಆರ್ ದಸರಾ–2022ರ ಭಾಗವಾಗಿ ನ.18ರಂದು ಹೆಚ್‌ಆರ್–ಟಿಪಿಓ (ಮಾನವ ಸಂಪನ್ಮೂಲ ಅಧಿಕಾರಿಗಳು ಮತ್ತು ತರಬೇತಿ–ಉದ್ಯೋಗ ನಿಯೋಜನಾಧಿಕಾರಿಗಳ ಸಮಾವೇಶ) ಸಮಾವೇಶ ಆಯೋಜಿಸಲಾಗಿದೆ ಎಂದು ಎಡಿನ್ ಬ್ರಿಡ್ಜ್ ಫೌಂಡೇಷನ್‌ನ ಎಡಿನ್ ಸಿನರ್ಜಿ ಮುಖ್ಯಸ್ಥ ಎಂ.ಫಣೀಶ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್‌ಆರ್ ದಸರಾ–2022ರ ಪ್ರಯುಕ್ತ ಒಟ್ಟು 9 ಕಾರ್ಯಕ್ರಮಗಳಲ್ಲಿ 5 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಯಿತು. ಇದೀಗ ಹೆಚ್‌ಆರ್ ಮತ್ತು ಟಿಪಿಓ ಸಮಾವೇಶವನ್ನು ಅಂದು ಮಧ್ಯಾಹ್ನ 2ಕ್ಕೆ ಹೆಬ್ಬಾಳು ಕೈಗಾರಿಕಾ ಪ್ರದೇಶದ ನಾರ್ತ್ ಅವೆನ್ಯೂ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದರು.

ಸಮಾವೇಶದಲ್ಲಿ ಕೈಗಾರಿಕಾ ಕ್ಷೇತ್ರದ ಬೆಳವಣಿಗೆ, ಉದ್ಯೋಗಾವಕಾಶ ಕುರಿತು ಚರ್ಚೆ ನಡೆಯಲಿದೆ. ಇದರಲ್ಲಿ ಹಲವು ಕಂಪನಿಗಳ ಹೆಚ್‌ಆರ್ ಅಧಿಕಾರಿಗಳು ಹಾಗೂ ಕಾಲೇಜುಗಳ ಟಿಪಿಓ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಅತಿಥಿಗಳಾಗಿ ವಿವಿಧ ಕಂಪನಿಗಳಲ್ಲಿ ಉನ್ನತ ಹುದ್ದೆಗಳಲ್ಲಿರುವ ಇ.ಎಸ್.ಚಕ್ರವರ್ತಿ, ಕೆ.ಪ್ರವೀಣ್ ಕಾಮತ್, ಜಿ.ಬಿ.ಪ್ರಶಾಂತ್, ಪ್ರಶಾಂತ್ ಭಟ್, ಎಸ್.ರಮೇಶ್ ಶಂಕರ್, ಶಶಿಧರ ಡೋಂಗ್ರೆ, ಅಚ್ಯುತನ್ ಪಾಂಡುರಂಗ, ಸುಪ್ರಿಯಾ ಸಾಲಿಯಾನ್, ಎ.ಡಬ್ಲ್ಯೂ. ಹ್ಯಾರೀಸ್, ಎಸ್.ಹೇಮಲತಾ, ವೀರಪ್ಪಾಜಿ, ಎಸ್.ಪಿ. ಪೂರ್ಣಿಮಾ, ಅಮೋಘ್ ಸಿಂಗ್ ಭಾಗವಹಿಸಿ, ವಿವಿಧ ವಿಚಾರಗಳನ್ನು ಮಂಡಿಸಲಿದ್ದಾರೆ ಎಂದರು. ಎಡಿನ್ ಬ್ರಿಡ್ಜ್ ಮುಖ್ಯಸ್ಥ ಪ್ರತಾಪ್ ಹಾಸನ್, ಎನ್‌ಐಇ ಕಾಲೇಜಿನ ಟಿಪಿಓ ಅಧಿಕಾರಿ ಹರ್ಷಿತ್ ದಿವಾಕರ್, ಎಂಐಟಿ ಕಾಲೇಜಿನ ಟಿಪಿಓ ಅಧಿಕಾರಿ ಶಿವಸಾಗರ್, ವಿವಿಸಿಇ ಕಾಲೇಜಿನ ಟಿಪಿಓ ಅಧಿಕಾರಿ ಮ್ಯಾಥೀವ್ ಗೋಷ್ಠಿಯಲ್ಲಿದ್ದರು.

ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ನೀಡಲು ಒತ್ತಾಯ

ಮೈಸೂರು,ನ.16(ಪಿಎಂ)– ಕಳೆದ 34 ವರ್ಷಗಳಿಂದ ಪಕ್ಷಕ್ಕಾಗಿ ದುಡಿಯುತ್ತಿರುವ ಬಿಜೆಪಿ ಮುಖಂಡ ಎನ್.ಎಂ.ಜಗದೀಶ್‌ಗೌಡ ಅವರಿಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರಲ್ಲಿ ಎನ್.ಎಂ.ಜಗದೀಶ್‌ಗೌಡರ ಅಭಿಮಾನಿ ಬಳಗ ಒತ್ತಾಯಿಸಿದೆ.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಳಗದ ಅಧ್ಯಕ್ಷೆ ಯಶೋಧರಾಜ್, ಮೈಸೂರು ತಾಲೂಕು ನಾಗನಹಳ್ಳಿ ನಿವಾಸಿ ಮೂರ್ತಿಗೌಡ ಮತ್ತು ಸಾವಿತ್ರಮ್ಮ ದಂಪತಿ ಪುತ್ರ ಜಗದೀಶ್‌ಗೌಡ 1988ರಲ್ಲಿ ಬಿಜೆಪಿಗೆ ಸೇರ್ಪಡೆಯಾದರು. ಅಂದಿನಿಂದ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ ದುಡಿಯುತ್ತಿದ್ದಾರೆ. 4 ಬಾರಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷರು ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಟಿಕೆಟ್ ನೀಡುವಂತೆ ಆಗ್ರಹಿಸಿದರು. ಬಳಗದ ಉಪಾಧ್ಯಕ್ಷೆ ಅರ್ಚನಾ, ಸಂಘಟನಾ ಕಾರ್ಯದರ್ಶಿ ಮೂರ್ತಿ, ಕಾರ್ಯದರ್ಶಿ ಶಾಂತಾ, ಸದಸ್ಯ ಶಿವಣ್ಣ ಗೋಷ್ಠಿಯಲ್ಲಿದ್ದರು.

ನಿಧನ

ದೈಹಿಕ ಶಿಕ್ಷಕ ಮಾದೇಶ್



ಮೈಸೂರು, ನ.16– ಸರ್ಕಾರಿ ಶಾಲೆಯೊಂದರಲ್ಲಿ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದ ಮದನ್ (ಮಾದೇಶ್–55) ಅವರು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ಮೃತರು ಮೈಸೂರಿನ ಅಶೋಕಪುರಂನ ಸರ್ಕಾರಿ ಶಾಲೆಯಲ್ಲಿ ಹಲವಾರು ವರ್ಷ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು, ಪ್ರಸ್ತುತ ಕೊಳ್ಳೇಗಾಲ ತಾಲೂಕಿನ ಮುಳ್ಳೂರು ಗ್ರಾಮದ ಸರ್ಕಾರಿ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಹೃದಯ ಸಂಬಂಧಿ ಕಾಯಿಲೆಯಿಂದಾಗಿ ಕಳೆದ ಒಂದು ವಾರದಿಂದ ಮೈಸೂರಿನ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರ ಅಂತ್ಯಕ್ರಿಯೆಯು ಸ್ವಗ್ರಾಮವಾದ ಕೊಳ್ಳೇಗಾಲ ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಣಪತಪ್ಪನ ಬಸಪ್ಪ



ಜಯಪುರ ಹೋಬಳಿ ದಾರಿಪುರ ಗ್ರಾಮದ ಗಣಪತಪ್ಪನ ಬಸಪ್ಪ(70) ಬುಧವಾರ ನಿಧನರಾದರು. ಮೃತರು ಪತ್ನಿ ಗೌರಮ್ಮ, ಮಕ್ಕಳಾದ ಬಸವಣ್ಣ ಗಣೇಶ, ನರ್ಸರಿ ಗುರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ದಾರಿಪುರದಲ್ಲಿರುವ ಅವರ ಜಮೀನಿನಲ್ಲಿ ಗುರುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದುರುದ್ದೇಶದಿಂದ ಹಿಂದೂ ವಿರೋಧಿ ಎಂದು ತಪ್ಪಾಗಿ ಬಿಂಬಿಸಲಾಗಿದೆ



ಮೈಸೂರು,ನ.16(ಪಿಎಂ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಟಿಪ್ಪು ನಿಜ ಕನಸುಗಳು' ನಾಟಕ ಕೃತಿಯಲ್ಲಿ ಟಿಪ್ಪುವನ್ನು ದುರುದ್ದೇಶಪೂರ್ವಕವಾಗಿ ಹಿಂದೂ ವಿರೋಧಿ ಎಂದು ತಪ್ಪಾಗಿ ಬಿಂಬಿಸಲಾಗಿದೆ ಎಂದು ಮೈಸೂರು ನಗರದ ಯುವಕರ ಬಳಗ ಆರೋಪಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಳಗದ ರಫೀಕ್ ಅಲಿ, ಶುದ್ಧ ಸುಳ್ಳುಗಳಿಂದ ಕೂಡಿದ ಟಿಪ್ಪು ನಿಜ ಕನಸುಗಳು' ಕೃತಿ ಆಧಾರಿತ ನಾಟಕ ಪ್ರದರ್ಶನಕ್ಕೆ ಸಿದ್ಧತೆಗಳು ನಡೆದಿವೆ. ಯಾವುದೇ ಕಾರಣಕ್ಕೂ ಈ ನಾಟಕ ಪ್ರದರ್ಶನಕ್ಕೆ ಅವಕಾಶ ನೀಡಬಾರದು. ಈ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಗಳು ಹಾಗೂ ನಗರ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಶಾಂತಿಯುತ ಮೈಸೂರು ನಗರದಲ್ಲಿ ಕೋಮುಗಲಭೆ ಸೃಷ್ಟಿಸಿ, ರಾಜಕೀಯ ಲಾಭ ಪಡೆಯುವ ದುರುದ್ದೇಶ ಇಲ್ಲಿ ಅಡಗಿದೆ. ಇದರ ವಿರುದ್ಧ ಕಾನೂನು ಸುವ್ಯವಸ್ಥೆಗೆ ಭಂಗಬಾರದ ರೀತಿಯಲ್ಲಿ ನಾವು ಹೋರಾಟ ಮಾಡಲಿದ್ದೇವೆ ಎಂದು ಹೇಳಿದರು. ಬಳಗದ ಮಜೀದ್, ಇನಾಯತ್ ಖಾನ್, ಸೈಯದ್ ರಿಜ್ವಾನ್, ಮೊಹಮ್ಮದ್, ರಜತ್, ಮಣಿಕಂಠ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಡಾ.ಎಂ.ಬಿ.ಮಂಜೇಗೌಡರಿಗೆ ಸಹಕಾರ ರತ್ನ ಪ್ರಶಸ್ತಿ



ಮೈಸೂರು,ನ.16–ಮೈಸೂರು–ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ನಿರ್ದೇಶಕ ಡಾ. ಎಂ.ಬಿ.ಮಂಜೇಗೌಡ ಅವರಿಗೆ 'ಸಹಕಾರ ರತ್ನ' ಪ್ರಶಸ್ತಿ ಪ್ರಕಟಿಸಲಾಗಿದೆ. ನ.20ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನ.19, ಸರ್ಪ ಸಂಸ್ಕಾರ, 20ರಂದು ಆಶ್ಲೇಷಾ ಬಲಿ

ಮೈಸೂರು, ನ. 16– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಾಲಯದಲ್ಲಿ ನ.19ರಂದು ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಮತ್ತು ನ. 20ರಂದು ಬೆಳಗ್ಗೆ 7.30ಕ್ಕೆ ಸಂಸ್ಕಾರಾಂಗ ಹೋಮ ಮತ್ತು ಆಶ್ಲೇಷಾ ಬಲಿ ಪೂಜೆ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಜಾತಕ ವಿಮರ್ಶಕರಾದ ಮೈ. ಕುಮಾರ್ ಅವರನ್ನು 98451–83399 ಅಥವಾ 93421–83392 ಸಂಖ್ಯೆಗಳಲ್ಲಿ ಸಂಪರ್ಕಿಸಬಹುದು.

ಜಾಗೃತ ಗ್ರಾಹಕ ಸಮಾಜದ ಪ್ರಗತಿಗೆ ದಿಕ್ಸೂಚಿ: ಗೀತಾ ಪ್ರಸನ್ನ

ಮೈಸೂರು, ನ.16–ಜಾಗೃತ ಗ್ರಾಹಕರು ಸಮಾಜದ ಪ್ರಗತಿಯ ಮಾನದಂಡ ಎಂಬುದನ್ನು ಎಲ್ಲರೂ ನೆನಪಿಡಬೇಕು ಎಂದು ಮೈಸೂರು ನಗರ ಉಪ ಪೊಲೀಸ್ ಆಯುಕ್ತರಾದ (ಡಿಸಿಪಿ) ಗೀತಾ ಪ್ರಸನ್ನ ಅಭಿಪ್ರಾಯಪಟ್ಟರು

ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ವತಿಯಿಂದ ಶೇಷಾದ್ರಿ ಅಯ್ಯರ್ ರಸ್ತೆ, ಹಳೆ RMC ಹತ್ತಿರ ಇರುವ ವಿದ್ಯಾವರ್ಧಕ ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಗ್ರಾಹಕ ಜಾಗೃತಿ ಸಮಾವೇಶವನ್ನು ಡಿಸಿಪಿ ಗೀತಾ ಪ್ರಸನ್ನ ಹಾಗೂ ಕೇಂದ್ರೀಯ ಮಹಿಳಾ ಜಾಗರಣ ಪ್ರಮುಖರಾದ ಆಶಾ ಸಿಂಗ್ ಉದ್ಘಾಟಿಸಿದರು

ಬಳಿಕ ಪೊಲೀಸ್ ಉಪಆಯುಕ್ತೆ ಗೀತಾ ಪ್ರಸನ್ನ ಮಾತನಾಡಿ, ಗ್ರಾಹಕರು ಪ್ರತಿ ಖರೀದಿ ಮೇಲೆ ರಸೀದಿ ಪಡೆಯುವುದನ್ನು ರೂಢಿ ಮಾಡಿಕೊಳ್ಳಬೇಕು. ಈ ಹಿಂದೆ ಕಿರಾಣಿ ಅಂಗಡಿ, ಸೀಮೆಎಣ್ಣೆಯ ಅಳತೆ ವಿಷಯದಲ್ಲಿ ಮಾತ್ರ ಜಾಗೃತರಾಗಿದ್ದ ಗ್ರಾಹಕರು ಇತ್ತೀಚೆಗೆ ಮೊದಲಿಗಿಂತಲೂ ಹೆಚ್ಚು ಜಾಗೃತರಾಗಿದ್ದಾರೆ. ಇದರಿಂದ ಸಮಾಜದ ಪ್ರಗತಿಯೂ ಸುಲಭವಾಗುತ್ತದೆ ಎಂದರು.



ಹುಟ್ಟಿನಿಂದಲೂ ಸಾಯುವ ಕೊನೆ ಕ್ಷಣದವರೆಗೆ ಪ್ರತಿ ವ್ಯಕ್ತಿಯೂ ಗ್ರಾಹಕನಾಗಿರುತ್ತಾನೆ. ಸಮಯ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಆತ ಗ್ರಾಹಕನ ಪಾತ್ರ ನಿರ್ವಹಿಸುತ್ತಿರುತ್ತಾನೆ. ಹಾಗಾಗಿ, ಹೊಣೆಗಾರಿಕೆ ಅರಿತು ಗ್ರಾಹಕರ ಕಾಯಿದೆಯ ಜಾಗೃತಿ ಪಡೆಯಬೇಕು ಎಂದು ಕಿವಿ ಮಾತು ಹೇಳಿದರು.

ಕೇಂದ್ರೀಯ ಮಹಿಳಾ ಜಾಗರಣ ಪ್ರಮುಖರಾದ ಆಶಾಸಿಂಗ್ ಮಾತನಾಡಿ, ಸಂಘಟನಾ ದೃಷ್ಟಿಯಿಂದ ಗ್ವಾಲಿಯರ್‌ನಿಂದ ಬಂದು ಕರ್ನಾಟಕದಲ್ಲಿ ಪ್ರವಾಸ ಮಾಡುತ್ತಿದ್ದು, ಮೈಸೂರಿನಲ್ಲಿ ಗ್ರಾಹಕ ಜಾಗೃತಿ ಸಮಾವೇಶಕ್ಕೆ ಬಂದಿರುವುದು ಸಂತೋಷವಾಗುತ್ತಿದೆ. ಗ್ರಾಹಕ ಹಕ್ಕುಗಳನ್ನು ಸಾರ್ಥಕವಾಗಿ ಗ್ರಾಹಕರು ಉಪಯೋಗಿಸಿಕೊಳ್ಳುತ್ತಾ ತಮ್ಮ ಸಮಸ್ಯೆಗಳನ್ನು ಸೂಕ್ತವಾಗಿ ಬಗೆಹರಿಸಿಕೊಳ್ಳಬೇಕು ಎಂದು ತಿಳಿಸಿದರು.

ವಿದ್ಯಾವರ್ಧಕ ಕಾನೂನು ಕಾಲೇಜಿನ ಖಜಾಂಚಿಗಳಾದ ಶ್ರೀಶೈಲ ರಾಮಣ್ಣ, ಪ್ರೊ. ವಾಸುದೇವ, ಪ್ರಿನ್ಸಿಪಾಲರಾದ ದೀಪು, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ರಾಜ್ಯ ಮಹಿಳಾ ಪ್ರಮುಖ ಗಾಯತ್ರಿ ನಾಡಿಗ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷರಾದ ಡಾ.ಜಿ.ವಿ.ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಮೈಸೂರು ವಲಯದ ಮಹಿಳಾ ಪ್ರಮುಖ ವಾಣಿ ಭಾಸ್ಕರ್, ಕಾರ್ಯದರ್ಶಿ ರಾಘವೇಂದ್ರ, ರವಿಶಂಕರ್, ರಂಗನಾಥ, ವಕೀಲರಾದ ಶಿವರಾಜ್ ಇನ್ನಿತರರಿದ್ದರು.

ನಿರುದ್ಯೋಗಿ ಮಹಿಳೆಯರಿಗೆ 45 ದಿನಗಳ ಉಚಿತ ತರಬೇತಿ ಶಿಬಿರ

ಮೈಸೂರು,ನ.16–ಕೌಶಲ್ಯ ಕರ್ನಾಟಕದ ಯೋಜನೆಯಡಿ ಪರಿವರ್ತನಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ಜೆ.ಪಿ.ನಗರ ಮೈಸೂರು ಇಲ್ಲಿ ನಿರುದ್ಯೋಗಿ ಮಹಿಳೆಯರಿಗೆ ಫ್ಯಾಷನ್ ವಿನ್ಯಾಸ, ಟೈಲರಿಂಗ್, ಹೊಲಿಗೆ ಯಂತ್ರ ಆಪರೇಟರ್, ಕೈ ಕಸೂತಿ, ಹೇರ್ ಸ್ಟೈಲಿಸ್ಟ್, ಡೊಮೆಸ್ಟಿಕ್ ಡೇಟಾ ಎಂಟ್ರಿ ಕೋರ್ಸ್‌ಗಳ 45 ದಿನಗಳ ಉಚಿತ ತರಬೇತಿಯನ್ನು ನ.21ರಿಂದ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಕೆ.ಎಸ್.ಮಾಲೇಗೌಡ ಮೊ.ಸಂ: 9964487523 ಸಂಪರ್ಕಿಸಬಹುದು.

ಪಿಹೆಚ್.ಡಿ ಪದವಿ



ಮೈಸೂರು,ನ.16–ಡಾ. ಬಿ.ಎಸ್.ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಕೆ.ಎನ್.ಚಂದ್ರಶೇಖರ ಅವರು ಸಹಕಾರಿ (ಕೋ–ಆಪರೇಷನ್) ವಿಷಯದಲ್ಲಿ ಸಂಶೋಧಿಸಿ ಸಾದರ ಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.11.2022 ಗುರುವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ನವಮಿ, ನಕ್ಷತ್ರ : ಮಖೆ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, 9.00 ಕನ್ನಡ ಕಜ್ಜಾಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 1.20 ಭಾವ ಗೀತೆಗಳು–ಸಿದ್ಧರಾಮು, 4.00 ಜನಪದ ಸಂಗೀತ– ದೊಡ್ಡರಾಜಪ್ಪ ಮತ್ತು ತಂಡ, 4.30 ವಿಜ್ಞಾನ ಭಾರತಿ–ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿಯ ಅಣು ಜೀವ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ವಿಜ್ಞಾನಿ ಡಾ.ಸಿ.ಡಿ. ಮೋಹನ್ ಅವರೊಂದಿಗೆ ಸಂದರ್ಶನ, 6.50 ಕೃಷಿರಂಗ– ಕಿಸಾನ್‌ವಾಣಿ–ನೈಸರ್ಗಿಕವಾಗಿ ತೋಟಗಾರಿಕೆ ಹಾಗೂ ಮೌಲ್ಯವರ್ಧನೆಯಲ್ಲಿನ ಅನುಭವ ಕುರಿತು ಬಿ.ಸಿ. ಮೋಹನ್ ಕುಮಾರ್ ಅವರೊಂದಿಗೆ ಸಂದರ್ಶನ, 9.00 ಯುವವಾಣಿ–ಹಲೋ ಯುವವಾಣಿ– ವಿಶೇಷ ರಸಪ್ರಶ್ನೆ ಕಾರ್ಯಕ್ರಮ, ಪ್ರಸ್ತುತಿ– ನಿವೇದಿತಾ ಎಚ್, 10.00 ನಾಟಕ 'ನಿರುತ್ತರ ಕುಮಾರ', ಮೂಲ– ಶ್ರೀರಂಗ, ನಿರ್ಮಾಣ– ಸುನಂದಾಮೂರ್ತಿ, 10.30 ಸವಿನೆನಪು

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಔಷಧ ವಿಜ್ಞಾನ ಮಹಾವಿದ್ಯಾಲಯ :** 61ನೇ ರಾಷ್ಟ್ರೀಯ ಔಷಧ ಸಪ್ತಾಹ ಪ್ರಯುಕ್ತ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಸಸಿ ನೆಡುವ ಕಾರ್ಯಕ್ರಮ, ಬನ್ನಿಮಂಟಪ, ಶ್ರೀ ಶಿವರಾತ್ರೀಶ್ವರನಗರ ಮತ್ತು ಹನುಮಂತನಗರದಲ್ಲಿ ಸಾರ್ವಜನಿಕರಿಗೆ ಔಷಧಿಗಳ ಸುರಕ್ಷಿತ ಬಳಕೆ ಕುರಿತು ಜಾಗೃತಿ ಕಾರ್ಯಕ್ರಮ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೈಗ್ರೇನ್ ಮತ್ತು ತಲೆನೋವಿನ ಬಗ್ಗೆ ವೈದ್ಯಕೀಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಗ್ರಂಥಾಲಯ ಸಪ್ತಾಹ ಮತ್ತು ಪುಸ್ತಕ ಪ್ರದರ್ಶನ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಸಾರ್ವಜನಿಕ ಗ್ರಂಥಾಲಯ ಇಲಾಖೆ ಉಪನಿರ್ದೇಶಕ ಡಾ.ಬಿ.ಮಂಜುನಾಥ್, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿಗಳು ಪ್ರೊ. ಎಸ್.ಶಿವರಾಜಪ್ಪ, ಉಪಸ್ಥಿತರು : ಡಾ.ಎಂ.ಶಾರದಾ, ಡಾ.ಬಿ.ಪ್ರಸಾದಮೂರ್ತಿ, ಶ್ರೀಮತಿ ಬಿ.ಆರ್.ಶುಭಾ ಅರಸ್, ಸ್ಥಳ: ಶ್ರೀ ನಟರಾಜ ಸಭಾಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ನಗರ ಪೊಲೀಸ್:** ವಾರ್ಷಿಕ ಕ್ರೀಡಾಕೂಟ, ಉದ್ಘಾಟನೆ: ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಸ್ಥಳ: ಪೊಲೀಸ್ ಕವಾಯತು ಮೈದಾನ, ನಗರ ಸಶಸ್ತ್ರ ಮೀಸಲು ಪಡೆ, ಸಂಜೆ 4ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಕೃಷಿಕ್ ಸರ್ವೋದಯ ಫೌಂಡೇಷನ್ :** ಸ್ಪರ್ಧಾತ್ಮಕ ತರಬೇತಿಯ ಉಚಿತ ಸಂವಾದ ಕಾರ್ಯಕ್ರಮ, ಉಪಸ್ಥಿತರು : ಕೆನರಾ ಬ್ಯಾಂಕ್ ನಿವೃತ್ತ ಜನರಲ್ ಮ್ಯಾನೇಜರ್ ಡಾ.ಎಸ್.ಟಿ. ರಾಮಚಂದ್ರ, ಸ್ಥಳ: ಕೃಷಿಕ್ ಸರ್ವೋದಯ ಫೌಂಡೇಷನ್, ವಿಜಯನಗರ 2ನೇ ಹಂತ, ಸಂಜೆ 6ಕ್ಕೆ.

■ **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್ :** ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ, ಸ್ಥಳ: 510, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.

■ **ಶ್ರೀ ಉತ್ತರಾದಿ ಮಠ :** ಪಂಡಿತ್ ಶ್ರೀ ಪ್ರದ್ಯುಮ್ನಾಚಾರ್ಯ ಜೋಷಿ ಅವರಿಂದ ಭಗವದ್ಗೀತೆ ಅಧ್ಯಾಯ–1 ಕುರಿತು ಪ್ರವಚನ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಅಗ್ರಹಾರ, ಸಂಜೆ 6.30ರಿಂದ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಮಂಡಲ ಪೂಜಾ ಮಹೋತ್ಸವ, ಮಹಾಗಣಪತಿ ಹೋಮ, ಉಷಪೂಜೆ, ಪಂಚಗವ್ಯಂ, ಪಂಚಕಂ, ಕಳಸಪೂಜಾ, ಶಿವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ, ಕಳಸಾಭಿಷೇಕ, ಉದಯಾಸ್ತಮಾನ ಪೂಜ, ದೀಪರಾಧನೆ, ಅತ್ತಾಳಪೂಜ, ಶ್ರೀ ಭೂತ ಬಲಿ ವಿಳಕ್ಕು, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, ಬೆಳಗ್ಗೆ 10ರಿಂದ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಮಿತ್ರ

ಗುರುವಾರ 17 ನವೆಂಬರ್ 2022

ಮೈಸೂರು ಅರಮನೆ ವಿನ್ಯಾಸದಂತೆ ಬಸ್ ತಂಗುದಾಣ ನಿರ್ಮಾಣ

ಶಾಸಕ ಎಸ್.ಎ.ರಾಮದಾಸ್ ಸ್ಪಷ್ಟನೆ



ಮೈಸೂರು, ನ.16 (ಆರ್‌ಕೆ)– ಮೈಸೂರಿನ ಅರಮನೆ ವಿನ್ಯಾಸದಂತೆ ಪಾರಂಪರಿಕ ಶೈಲಿಯಲ್ಲಿ ಊಟಿ ರಸ್ತೆಯಲ್ಲಿರುವ ಬಸ್ ತಂಗುದಾಣವನ್ನು ನಿರ್ಮಿಸಲಾಗಿದೆ ಎಂದು ಶಾಸಕ ಎಸ್.ಎ.ರಾಮದಾಸ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಗುಂಬಜ್ ಮಾದರಿಯಲ್ಲಿ ಬಸ್ ತಂಗುದಾಣ ನಿರ್ಮಿಸಲಾಗಿದೆ ಎಂದು ಸಂಸದ ಪ್ರತಾಪ್ ಸಿಂಹ ಆರೋಪ ಮಾಡಿರುವುದರಿಂದ ಉಂಟಾಗಿರುವ ವಿವಾದ ಸಂಬಂಧ ಪ್ರತಿಕ್ರಿಯಿಸಿರುವ ಅವರು, ಸಾರ್ವಜನಿಕರ ಅನುಕೂಲಕ್ಕಾಗಿ ಶಾಸಕರ ಅನುದಾನದಲ್ಲಿ ಬಸ್ ತಂಗುದಾಣಕ್ಕೆ 10 ಲಕ್ಷ ರೂ. ಬಿಡುಗಡೆಯಾಗಿತ್ತು ಎಂದು ತಿಳಿಸಿದ್ದಾರೆ.

ಮೈಸೂರು ಅರಮನೆಯ ಪಾರಂಪರಿಕ ಶೈಲಿಯಂತೆ ವಿನ್ಯಾಸ ಮಾಡಿ ನಿರ್ಮಿಸಿರುವ ಬಸ್ ತಂಗುದಾಣವನ್ನು ಗುಂಬಜ್ ಮಾದರಿ ಎಂದು ಹೇಳಿರುವುದು ಸಾಮಾಜಿಕ ಜಾಲತಾಣದಲ್ಲಿ ಬಿಂಬಿತವಾಗುತ್ತಿದೆ. ಅಲ್ಲದೆ ಗುತ್ತಿಗೆಯನ್ನು ಮುಸ್ಲಿಂ ವ್ಯಕ್ತಿಗೆ ನೀಡಲಾಗಿದೆ ಎಂದು ತಪ್ಪಾಗಿ ಅರ್ಥೈಸಲಾಗಿದೆ. ಈ ಬಗ್ಗೆ ತಾವು ಪಾಲಿಕೆ ಆಯುಕ್ತರಿಗೆ ಪತ್ರ ಬರೆದು ಈ ರೀತಿಯ ಸುಳ್ಳು ವದಂತಿ ಹಬ್ಬಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದೇನೆ ಎಂದು ರಾಮದಾಸ್ ತಿಳಿಸಿದ್ದಾರೆ.

ದಂತಿ ಕನ್‌ಸ್ಟ್ರಕ್ಷನ್ಸ್‌ನ ಮಹದೇವ್ ಎಂಬುವರು ಕಾಮಗಾರಿ ಕೈಗೊಂಡಿದ್ದು, ಈಗಾಗಲೇ ಶೇ.60ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಸಾಂಪ್ರದಾಯಿಕ ಮಾದರಿಯನ್ನು ಬಸ್ ತಂಗುದಾಣದಲ್ಲಿ ಅನುಸರಿಸಲಾಗಿದೆಯೇ ಹೊರತು, ಯಾವುದೇ ಧರ್ಮವನ್ನು ಅನುಕರಣೆ ಮಾಡಿಲ್ಲ. ತಾಂತ್ರಿಕ ತಜ್ಞರ ಸಮಿತಿಯೊಂದನ್ನು ರಚಿಸಲಾಗಿದ್ದು, ಸದಸ್ಯರು ಅಧ್ಯಯನ ಮಾಡಿ ವಿನ್ಯಾಸದಲ್ಲಿ ಬದಲಾವಣೆ ಮಾಡಬೇಕೆಂದು ಅಭಿಪ್ರಾಯಪಟ್ಟಲ್ಲಿ ಅದರಂತೆ ಕ್ರಮ ವಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಈ ಬಗ್ಗೆ ಪಾರಂಪರಿಕ ತಜ್ಞ ಪ್ರೊ.ಎನ್.ಎಸ್.ರಂಗರಾಜು ಪ್ರತಿಕ್ರಿಯಿಸಿದ್ದು, ಊಟಿ ರಸ್ತೆಯಲ್ಲಿ ನಿರ್ಮಿಸಿರುವ ಬಸ್ ತಂಗುದಾಣದ ಗೋಪುರ ಮೊಹಮದನ್ ಶೈಲಿಯದ್ದಲ್ಲ. ಅದು ಭಾರತೀಯ ಶೈಲಿ. ಅದನ್ನು ತಪ್ಪಾಗಿ ಇಸ್ಲಾಮಿಕ್ ಶೈಲಿ ಎನ್ನಲಾಗುತ್ತಿದೆ. ಮೌರ್ಯರ ಕಾಲದಲ್ಲಿ ಅಂತಹ ಶೈಲಿಯ ಹಲವು ಕಟ್ಟಡ ನಿರ್ಮಿಸಿರುವ ಉದಾಹರಣೆಗಳಿವೆ ಎಂದಿದ್ದಾರೆ. ನಗರ ಯೋಜನಾ ಕಾಯ್ದೆ ಪ್ರಕಾರ ಮೈಸೂರು ಅರಮನೆ ಸುತ್ತಲಿನ ಪ್ರದೇಶದಲ್ಲಿನ ಎಲ್ಲಾ ನಿರ್ಮಾಣಗಳೂ ಪಾರಂಪರಿಕ ಶೈಲಿಯಲ್ಲಿರಬೇಕು. ಅದರ ವಿನ್ಯಾಸ ಬದಲಿಸಿದಲ್ಲಿ ನಿಯಮ ಉಲ್ಲಂಘಿಸಿದಂತಾಗುತ್ತದೆ ಎಂದು ಶಾಸಕ ಎಸ್.ಎ.ರಾಮದಾಸ್ ತಿಳಿಸಿದ್ದಾರೆ.

ಜಿ-20 ಅಧ್ಯಕ್ಷ ಸ್ಥಾನ ಭಾರತಕ್ಕೆ ಹಸ್ತಾಂತರ



ಬಾಲಿ: ಕಳೆದ ಎರಡು ದಿನಗಳಿಂದ ಇಂಡೋನೇಷ್ಯಾದ ಬಾಲಿಯಲ್ಲಿ ನಡೆದ ಜಿ–20 ಶೃಂಗಸಭೆ ಮುಗಿದಿದ್ದು, ಕೊನೆಯ ದಿನವಾದ ಇಂದು ಇಂಡೋನೇಷ್ಯಾದಿಂದ ಭಾರತ ಜಿ–20 ಅಧ್ಯಕ್ಷ ಸ್ಥಾನದ ಹೊಣೆಗಾರಿಕೆಯನ್ನು ಸ್ವೀಕರಿಸಿದೆ.

ಇಂಡೋನೇಷ್ಯಾ ಅಧ್ಯಕ್ಷ ಜೋಕೊ ವಿಡೋಡೋ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಬ್ಯಾಟನ್ ಹಸ್ತಾಂತರಿಸಿದರು. ಇದು ಭಾರತೀಯರು ಹೆಮ್ಮೆಪಡಬೇಕಾದ ಕ್ಷಣ ಎಂದು ಮೋದಿ ವ್ಯಾಖ್ಯಾನಿಸಿದ್ದಾರೆ. ಜಿ–20 ಶೃಂಗಸಭೆಯ ನಿರ್ಣಯವನ್ನು ಪ್ರಕಟಿಸಲಾಗಿದ್ದು ಅದರಲ್ಲಿ ಪ್ರಮುಖವಾಗಿ ಶಾಂಘೈ ಶೃಂಗಸಭೆಯಲ್ಲಿ ಮೋದಿ ಭಾಷಣದ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

ಅಣ್ವಸ್ತ್ರ ಬೆದರಿಕೆಯನ್ನು ಯಾವುದೇ ಕಾರಣಕ್ಕೆ ಒಪ್ಪಲ್ಲ. ಮಾತುಕತೆಯ ಮೂಲಕವೇ ಸಮಸ್ಯೆ ಬಗೆಹರಿಸಿಕೊಳ್ಳಿ. ಇದು ಯುದ್ಧದ ಕಾಲವಲ್ಲ ಎಂದು ಶಾಂಘೈ ಶೃಂಗಸಭೆಯಲ್ಲಿ ಹೇಳಿದ್ದರು.

ಶೃಂಗಸಭೆಯಲ್ಲಿ ಮೋದಿ ಹಾಗೂ ಬ್ರಿಟನ್ ಪ್ರಧಾನಿ ರಿಶಿ ಸುನಾಕ್ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಇದರ ಫಲವಾಗಿ ಬ್ರಿಟನ್ ಭಾರತೀಯರಿಗೆ ಅನುಕೂಲವಾಗುವಂತೆ ಹೊಸ ವೀಸಾ ನೀತಿ ಪ್ರಕಟಿಸಿದೆ. ಇದರ ಪ್ರಕಾರ ಪ್ರತಿ ವರ್ಷ 3 ಸಾವಿರ ಭಾರತೀಯರಿಗೆ ಬ್ರಿಟನ್ ವೀಸಾ ನೀಡಲಿದೆ. ದೆಹಲಿಯ ಪ್ರಗತಿ ಮೈದಾನದಲ್ಲಿ 2023ರ ಜಿ20 ಶೃಂಗಸಭೆ ಸೆ.9 ಮತ್ತು 10ರಂದು ನಡೆಯಲಿದೆ. 2008ರಲ್ಲಿ ಜಿ20 ಶೃಂಗಸಭೆ ಆರಂಭಗೊಂಡಿದ್ದು ಮೊದಲ ಬಾರಿಗೆ ಭಾರತಕ್ಕೆ ಅಧ್ಯಕ್ಷ ಸ್ಥಾನ ಹಸ್ತಾಂತರವಾಗಿದೆ. ಶೃಂಗಸಭೆಯನ್ನು ಆಯೋಜಿಸುವ 18ನೇ ನಗರ ದೆಹಲಿಯಾಗಲಿದೆ. ಮೊದಲ ಮತ್ತು 3ನೇ ಶೃಂಗಸಭೆ ಅಮೆರಿಕದಲ್ಲಿ ನಡೆದಿತ್ತು.

ಚಿಂತಕ ಪ.ಮಲ್ಲೇಶ್ ಅವಹೇಳನಕಾರಿ ಹೇಳಿಕೆ ಆರೋಪ

ನ.21ರಿಂದ ಬ್ರಾಹ್ಮಣ ಸಮುದಾಯ ಉಗ್ರ ಹೋರಾಟ



ಮೈಸೂರು,ನ.16(ಎಸ್‌ಪಿಎನ್)–ಬ್ರಾಹ್ಮಣರ ವಿಚಾರದಲ್ಲಿ ಅವಹೇಳನಕಾರಿ ಹೇಳಿಕೆ ನೀಡಿದ ಚಿಂತಕ ಪ.ಮಲ್ಲೇಶ್ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದಲ್ಲದೆ, ಅವರ ಬಂಧಿಸುವವರೆಗೂ ನ.21ರಿಂದ ನಗರದ ವಿವಿಧೆಡೆ ಬೃಹತ್ ಪ್ರತಿಭಟನೆ ನಡೆಸಲು ಬ್ರಾಹ್ಮಣ ಸಮುದಾಯದ ವಿವಿಧ ಸಂಘಟನೆಗಳು ನಿರ್ಧರಿಸಿವೆ.

ನಗರದ ಮೂಗೂರು ಕರ್ನಾಟಕ ಸಂಘದಲ್ಲಿ ಬುಧವಾರ ಸಭೆ ಸೇರಿದ ನೂರಾರು ಮಂದಿ ಬ್ರಾಹ್ಮಣ ಮುಖಂಡರು ಬ್ರಾಹ್ಮಣ ಸಮುದಾಯದ ಬಗ್ಗೆ ಕೀಳು ಮಟ್ಟದಲ್ಲಿ ಮಾತನಾಡಿದ ವ್ಯಕ್ತಿಗೆ ಬುದ್ಧಿ ಕಲಿಸುವವರೆಗೂ ಹೋರಾಟ ನಡೆಸುವ ಕರೆ ನೀಡಲಾಯಿತು. ಈ ವೇಳೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ನ.21ರ ಬೆಳಗ್ಗೆ 10.30ಕ್ಕೆ ಶಂಕರಮಠದಿಂದ ಕಾಲ್ನಡಿಗೆಯಲ್ಲಿ ಚಾಮರಾಜ ಜೋಡಿ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿಗಳಿಗೆ ದೂರು ನೀಡುವುದು. ಪ್ರತಿಭಟನೆಗೆ ಪುರೋಹಿತರು, ಮಹಿಳೆಯರು, ಮಕ್ಕಳು ಸೇರಿದಂತೆ ಬ್ರಾಹ್ಮಣ ಸಮುದಾಯದ ಪ್ರತಿಯೊಬ್ಬರು ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ಸೂಚಿಸಿದರು.

ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ ಬಳಿಕ ಮೈಸೂರಿನ ಪ್ರಮುಖ ಸ್ಥಳಗಳಲ್ಲಿಯೂ ಪ್ರತಿಭಟನೆ ನಡೆಸಲಾಗುವುದು. ಇದಕ್ಕೆ ಅಗತ್ಯ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗಿದೆ. ಬ್ರಾಹ್ಮಣ ಸಮುದಾಯದ ಪ್ರತೀ ಮನೆ ಮನೆಗೂ ಕರಪತ್ರಗಳನ್ನು ಹಂಚಿ ಪ್ರತಿಭಟನೆಯಲ್ಲಿ ಭಾಗವಹಿಸುವಂತೆ ತಿಳಿಸಬೇಕು. ಸಂಘ–ಸಂಸ್ಥೆಗಳಲ್ಲಿ ನಿರಂತರ ಸಭೆ ನಡೆಸಿ ಎಲ್ಲರೂ ಭಾಗಿಯಾಗುವಂತೆ ನೋಡಿಕೊಳ್ಳಬೇಕು. ಪ್ರತಿಭಟನೆಗೂ ಮುನ್ನ ಪೊಲೀಸ್ ಠಾಣೆಗೆ ದೂರು ನೀಡುವುದು ಸೇರಿದಂತೆ ಪ್ರತಿಭಟನೆಯ ರೂಪುರೇಷೆಗಳನ್ನು ತಿಳಿಸಿದರು. ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ ಪ್ರಕಾಶ್, ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ನಟರಾಜ್ ಜೋಯಿಸ್, ಮುಖಂಡರಾದ ಶ್ರೀಕಾಂತ್ ಕುಮಾರ್, ಶ್ರೀಹರಿ, ಕೆ.ಆರ್.ಸತ್ಯನಾರಾಯಣ್, ನಗರ ಪಾಲಿಕೆ ಸದಸ್ಯ ಮಾ.ವಿ.ರಾಮ್‌ಪ್ರಸಾದ್, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಕೆ.ಎಂ.ನಿಶಾಂತ್, ಎಂ.ಆರ್.ಬಾಲಕೃಷ್ಣ, ಶಂಕರ್‌ನಾರಾಯಣ ಶಾಸ್ತ್ರಿ, ಸಿ.ವಿ.ಪಾರ್ಥಸಾರಥಿ, ಜಿ.ಆರ್.ನಾಗರಾಜ್, ಮುಳ್ಳೂರು ಸುರೇಶ್, ಶ್ರೀನಿವಾಸ್ ಮತ್ತಿತರರಿದ್ದರು.

ಕಾಂಗ್ರೆಸ್ ಟಿಕೆಟ್‌ಗಾಗಿ ಎಸ್.ನಾರಾಯಣ್ ಅರ್ಜಿ ಸಲ್ಲಿಕೆ



ಬೆಂಗಳೂರು: ಚಲನಚಿತ್ರ ನಿರ್ದೇಶಕ ಎಸ್.ನಾರಾಯಣ್ ಅವರು ಈಗಾಗಲೇ ರಾಜಕೀಯ ಅಖಾಡಕ್ಕೆ ಧುಮುಕಿದ್ದು, ಇದೀಗ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ಮುಂದಾಗಿದ್ದಾರೆ. ಕಾಂಗ್ರೆಸ್ ಸೇರಿದ ಆರೇ ತಿಂಗಳಿಗೆ ಬೆಂಗಳೂರಿನ ರಾಜಾಜಿನಗರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯಲು ಅರ್ಜಿ ಸಲ್ಲಿಸಿದರು.

ಎಸ್.ನಾರಾಯಣ್ ಕೆಪಿಸಿಸಿ ಕಚೇರಿಯಲ್ಲಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಮ್ಮುಖದಲ್ಲಿ ಮಾ.16ರಂದು ಸೇರ್ಪಡೆಯಾಗಿದ್ದರು. ರಾಜಾಜಿನಗರ ಕ್ಷೇತ್ರದಲ್ಲಿ ಬಿಜೆಪಿಯಿಂದ ಸುರೇಶ್‌ಕುಮಾರ್ ಕಣಕ್ಕಿಳಿಯುತ್ತಿದ್ದರೆ, ಕಾಂಗ್ರೆಸ್‌ನಿಂದ ಎಸ್.ನಾರಾಯಣ್ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಆದರೆ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ನೀಡುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಒತ್ತುವರಿ ತೆರವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಪಾಲಿಕೆಗೆ ನೋಟೀಸ್

ಮೈಸೂರು, ನ.16(ಆರ್‌ಕೆಬಿ)– ಮೈಸೂರು–ನಂಜನಗೂಡು ರಸ್ತೆಯ ರಾಷ್ಟ್ರೀಯ ಹೆದ್ದಾರಿ 766ರ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ಒತ್ತುವರಿಗಳ ತೆರವುಗೊಳಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮೈಸೂರು ನಗರಪಾಲಿಕೆಗೆ ನೋಟೀಸ್ ನೀಡಿದೆ.

ಅನಧಿಕೃತ ಕೇರಳ ಗಡಿಯಿಂದ ಕೊಳ್ಳೇಗಾಲ ಸೆಕ್ಷನ್ ಎನ್‌ಹೆಚ್–766ರಲ್ಲಿ ಪ್ರಾಧಿಕಾರಕ್ಕೆ ಬಂದಿರುವ ಮಾಹಿತಿ ಪ್ರಕಾರ ಕಿ.ಮೀ 208_700ರಲ್ಲಿ 245 ಕ್ಯುಎಂ ಪ್ರದೇಶ ಒಳಗೊಂಡಿರುವ ಹೆದ್ದಾರಿಯಲ್ಲಿನ ಸ್ಥಳ ಮತ್ತು ಅನಧಿಕೃತ ಒತ್ತುವರಿಗೆ ನೀವು ಜವಾಬ್ದಾರರಾಗಿರುತ್ತೀರಿ. ಹಾಗಾಗಿ ಕೆಆರ್‌ಐಡಿಎಲ್ ಮತ್ತು ಮೈಸೂರು ಮಹಾ ನಗರಪಾಲಿಕೆ ಆಯುಕ್ತರು ಈ ನೋಟೀಸ್ ತಲುಪಿದ ಏಳು ದಿನದೊಳಗಾಗಿ ಅಂತಹ ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸಬೇಕು. ಈ ಸಂಬಂಧ ಮೂರು ದಿನದೊಳಗೆ ಎನ್‌ಹೆಚ್ ಪ್ರಾಜೆಕ್ಟ್ ಡೈರೆಕ್ಟರ್ ಅವರಿಗೆ ವರದಿ ಸಲ್ಲಿಸುವುದೆಂದು ನೋಟೀಸ್‌ನಲ್ಲಿ ತಿಳಿಸಲಾಗಿದೆ. ಈ ನೋಟೀಸ್ ಅನ್ನು ಅನುಸರಿಸಲು ವಿಫಲವಾದರೆ ರಾಷ್ಟ್ರೀಯ ಹೆದ್ದಾರಿಗಳ ನಿಯಂತ್ರಣ ಕಾಯಿದೆ ಅಡಿಯಲ್ಲಿ ದಂಡ ವಿಧಿಸಲಾಗುವುದು ಎಂದು ತಿಳಿಸಲಾಗಿದೆ.

ನಕ್ಷೆ ಉಲ್ಲಂಘಿಸಿ ವಾಣಿಜ್ಯ ಕಟ್ಟಡ ನಿರ್ಮಾಣ ಆರೋಪ

ಕೋರ್ಟ್‌ಗೆ ಪಾಲಿಕೆ ವಕೀಲರಿಂದ ದಾಖಲೆ ಸಲ್ಲಿಕೆಯಾಗಿದೆ: ಕಮಿಷ್ನರ್

ಮೈಸೂರು,ನ.16(ಆರ್‌ಕೆ)–ಮೈಸೂರಿನ ಸರಸ್ವತಿಪುರಂ 1ನೇ ಮುಖ್ಯ ರಸ್ತೆ, 5ನೇ ಕ್ರಾಸ್ ನಿವೇಶನ ಸಂಖ್ಯೆ 2961/52, ಸಿಹೆಚ್–28ರಲ್ಲಿ ನಕ್ಷೆ ಉಲ್ಲಂಘಿಸಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗುತ್ತಿದೆ ಎನ್ನಲಾದ ಮಾಲೀಕರಿಗೆ ಪಾಲಿಕೆಯಿಂದ 3 ನೋಟಿಸ್ ನೀಡಿದ್ದು, ಅದರ ವಿರುದ್ಧ ನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಿರುವುದರಿಂದ ನಮ್ಮ ವಕೀಲರು ದಾಖಲೆ ಸಲ್ಲಿಸಿ ತಡೆಯಾಜ್ಞೆ ತೆರವಿಗೆ ವಾದ ಮಂಡಿಸಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ ತಿಳಿಸಿದ್ದಾರೆ.



ಕಟ್ಟಡದ ನಕ್ಷೆ, ನಿಯಮಾವಳಿಗಳ ಪ್ರತಿಗಳು ಹಾಗೂ ಇನ್ನಿತರ ದಾಖಲೆಗಳನ್ನು ಪಾಲಿಕೆ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿ ವಿಚಾರಣೆ ವೇಳೆ ಸಲ್ಲಿಸಿ ನಿಯಮ ಉಲ್ಲಂಘಿಸಿ ವಾಣಿಜ್ಯ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದು ವಾದ ಮಾಡಿದ್ದಾರೆ. ನವೆಂಬರ್ 21ಕ್ಕೆ ಆದೇಶ ಬರುವ ಸಾಧ್ಯತೆ ಇದೆ ಎಂದ ಆಯುಕ್ತರು, ತಡೆಯಾಜ್ಞೆ ತೆರವಾದಲ್ಲಿ ನಿಯಮಾನುಸಾರ ಕಟ್ಟಡದ ಭಾಗವನ್ನು ತೆರವುಗೊಳಿಸುತ್ತೇವೆ ಎಂದರು.

ನಾನು ಇಂದು ವಲಯ ಕಚೇರಿಯಿಂದ ಕಡತ ತರಿಸಿ ಪರಿಶೀಲಿಸಿದಾಗ ಈ ಪ್ರಕರಣದಲ್ಲಿ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿ ವಾದಿಸಿರುವುದು ಹಾಗೂ ತಡೆಯಾಜ್ಞೆ ತೆರವಿಗೆ ಪ್ರಯತ್ನಿಸಿರುವುದು ತಿಳಿಯಿತು. ಆದರೆ ಡಾ. ಸಿ.ಕೃಷ್ಣ ಅವರು ಪಾಲಿಕೆ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದು ಹೇಳಿಕೆ ನೀಡಿರುವುದು ಅಚ್ಚರಿ ಮೂಡಿಸಿದೆ ಎಂದು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಮೈಸೂರಲ್ಲಿ ನಾಲ್ಕು ತ್ಯಾಜ್ಯ ವಿಲೇವಾರಿ, ಸಂಸ್ಕರಣ ಘಟಕ ಸ್ಥಾಪನೆಗೆ ಒತ್ತಾಯ



ಮೈಸೂರು,ನ.16(ಪಿಎಂ)–ಮೈಸೂರು ನಗರದ 4 ಭಾಗಗಳಲ್ಲಿ ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣ ಘಟಕಗಳನ್ನು ಸ್ಥಾಪಿಸುವಂತೆ ಕರ್ನಾಟಕ ಪ್ರಜಾ ಪಾರ್ಟಿ ಒತ್ತಾಯಿಸಿದೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಾರ್ಟಿಯ ಸಂಸ್ಥಾಪಕ ಅಧ್ಯಕ್ಷ ಡಾ.ಬಿ.ಶಿವಣ್ಣ, ಮೈಸೂರು ನಗರದಲ್ಲಿ ಜನಸಂಖ್ಯೆ ಹೆಚ್ಚಾದಂತೆ ಹೊಸ ಹೊಸ ಬಡಾವಣೆಗಳು ನಿರ್ಮಾಣಗೊಳ್ಳುತ್ತಿವೆ. ಪರಿಣಾಮ ತ್ಯಾಜ್ಯದ ಉತ್ಪಾದನೆಯೂ ದುಪ್ಪಟ್ಟಾಗುತ್ತಿದೆ. ನಗರದಲ್ಲಿ ತ್ಯಾಜ್ಯದ ವಿಲೇವಾರಿಯನ್ನು ವ್ಯವಸ್ಥಿತವಾಗಿ ನಿರ್ವಹಿಸಲು ನಗರದ 4 ಭಾಗಗಳಲ್ಲಿ ಈಸ್ಟ್, ವೆಸ್ಟ್, ನಾರ್ತ್ ಮತ್ತು ಸೌತ್ ಎಂಬ ನಾಲ್ಕು ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣ ಘಟಕಗಳನ್ನು ಸ್ಥಾಪಿಸಲು ಸರ್ಕಾರ ಕ್ರಮ ವಹಿಸಬೇಕು ಎಂದು ಆಗ್ರಹಿಸಿದರು. ಪಾರ್ಟಿ ಮುಖಂಡರಾದ ಹೆಚ್.ಜಿ.ರಾಮಚಂದ್ರರಾವ್, ಮೋಹನ್, ನಾಗರಾಜ್, ತೇಜಸ್ವಿ ಪಾಟೀಲ್, ಎನ್.ಹರೀಶ್ ಗೋಷ್ಠಿಯಲ್ಲಿದ್ದರು.

ಚಿರತೆಗಾಗಿ ಅಳವಡಿಸಿದ ಕ್ಯಾಮರಾದಲ್ಲಿ ಸೀವೆಟ್ ಕ್ಯಾಟ್ ಸೆರೆ!



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಬೃಂದಾವನದಲ್ಲಿ ಕಳೆದ ಕೆಲವು ದಿನಗಳಿಂದ ಕಾಣಿಸಿಕೊಳ್ಳುತ್ತಿರುವ ಚಿರತೆ ಚಲನವಲನ ಪತ್ತೆಗೆ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಸೀವೆಟ್ ಕ್ಯಾಟ್ ಚಲನ–ವಲನದ ದೃಶ್ಯ ಸೆರೆಯಾಗಿದೆ. ಕ್ಯಾಮರಾದಲ್ಲಿ ಸೆರೆ ಸಿಕ್ಕ ದೃಶ್ಯ ಪರಿಶೀಲಿಸುವ ವೇಳೆ ನ.14ರಂದು ರಾತ್ರಿ 10.15ರ ವೇಳೆಯಲ್ಲಿ ಗೋಡೆಯ ಮೇಲೆ ಸೀವೆಟ್ ಕ್ಯಾಟ್ ದೃಶ್ಯ ಪತ್ತೆಯಾಗಿದೆ.

330 ಲಕ್ಷ ರೂ. ವಿವಿಧ ಕಾಮಗಾರಿಗೆ ಚಾಲನೆ



ಮೈಸೂರು,ನ.16–ಮೈಸೂರು ಮಹಾನಗರಪಾಲಿಕೆ ವತಿಯಿಂದ 15ನೇ ಹಣಕಾಸು ಯೋಜನೆಯಡಿ 290 ಲಕ್ಷ ರೂ. ವೆಚ್ಚದ ಭೂ ಮಟ್ಟದ ಜಲ ಸಂಗ್ರಹಾಗಾರ ನಿರ್ಮಾಣ ಕಾಮಗಾರಿ ಹಾಗೂ ಕುಕ್ಕರಹಳ್ಳಿಯ ನಗರ ವಿಕಾಸ ಯೋಜನೆಯ 40 ಲಕ್ಷ ರೂ ವೆಚ್ಚದ ಚರಂಡಿ, ರಸ್ತೆ ನಿರ್ಮಾಣ ಸೇರಿದಂತೆ 330 ಲಕ್ಷ ರೂ. ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು. ಚಾಮರಾಜ ಕ್ಷೇತ್ರದ ವ್ಯಾಪ್ತಿಯ ಜಯಲಕ್ಷ್ಮಿಪುರಂ 4ನೇ ಮೇನ್‌ನಲ್ಲಿರುವ ರಾಘವೇಂದ್ರ ಸ್ವಾಮಿ ಮಠದ ಹಿಂಭಾಗದಲ್ಲಿರುವ ಜಲ ಸಂಗ್ರಹಾಗಾರ ನಿವೇಶನದಲ್ಲಿ ಕೈಗೊಂಡಿರುವ ಭೂ ಮಟ್ಟದ ಜಲ ಸಂಗ್ರಹಾಗಾರ ನಿರ್ಮಾಣ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು. ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯ 40 ಲಕ್ಷ ಅನುದಾನದಲ್ಲಿ ಕುಕ್ಕರಹಳ್ಳಿ ವಿವಿಧ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ನಗರ ಪಾಲಿಕೆ ಸದಸ್ಯರಾದ ಭಾಗ್ಯ ಮಾದೇಶ್, ವೇದಾವತಿ ಅವರ ಸಹಕಾರದೊಂದಿಗೆ ಶಾಸಕ ಎಲ್.ನಾಗೇಂದ್ರ ಭೂಮಿಪೂಜೆ ನೆರವೇರಿಸಿದರು.

ಕುಕ್ಕರಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಿಕೆ ಉಪ ಆಯುಕ್ತ (ಅಭಿವೃದ್ಧಿ) ಮಹೇಶ್, ಅಭಿವೃದ್ಧಿ ಅಧಿಕಾರಿ ಯೋಗಾನಂದ, ಪ್ರಧಾನ ಕಾರ್ಯದರ್ಶಿ ಪುನೀತ್, ಪಾಲಿಕೆ ಮಾಜಿ ಸದಸ್ಯ ರಮೇಶ್, ಮುಖಂಡರಾದ ಶಿವಶಂಕರ್, ನವೀನ್, ಚಲುವ, ಯಜಮಾನರಾದ ಅಂದಾನಿ, ನಾರಾಯಣ, ಶಿವಣ್ಣ, ಪುರುಷೋತ್ತಮ, ಮಹದೇವು, ಸುನಿಲ್, ಮಾದೇಶ್, ನಂಜುಂಡಸ್ವಾಮಿ ಮುಂತಾದವರು ಹಾಜರಿದ್ದರು. ಜಯಲಕ್ಷ್ಮಿಪುರಂ ಭೂಮಿ ಪೂಜೆ ವಾಣಿ ವಿಲಾಸ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಅಶ್ವಿನ್, ಮುದ್ದು ಮಲ್ಲೇಗೌಡ, ಗಿರೀಶ್ ಇನ್ನಿತರರು ಹಾಜರಿದ್ದರು.

‘ಟಿಪ್ಪು ನಿಜ ಕನಸುಗಳು’ ಕೃತಿ, ನಾಟಕ ರದ್ದುಗೊಳಿಸಿ ಸರ್ಕಾರಕ್ಕೆ ದಲಿತ ಮಹಾಸಭಾ ಒತ್ತಾಯ



ಮೈಸೂರು,ನ.16(ಪಿಎಂ)– ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರ ‘ಟಿಪ್ಪು ನಿಜ ಕನಸುಗಳು’ ನಾಟಕ ಕೃತಿಯಲ್ಲಿ ಟಿಪ್ಪು ಬಗೆಗಿನ ನೈಜ ಸಂಗತಿಗಳನ್ನು ತಿರುಚಲಾಗಿದ್ದು, ಸರ್ಕಾರ ಮಧ್ಯ ಪ್ರವೇಶಿಸಿ, ಸದರಿ ಕೃತಿ ಮತ್ತು ನಾಟಕ ಪ್ರದರ್ಶನ ರದ್ದುಗೊಳಿಸಬೇಕು ಎಂದು ಮೈಸೂರಿನ ಗಾಂಧಿನಗರದ ದಲಿತ ಮಹಾಸಭಾ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಎಸ್.ರಾಜೇಶ್, ಈ ಕೃತಿ ಮತ್ತು ನಾಟಕ ದುರುದ್ದೇಶದಿಂದ ಕೂಡಿದೆ. ಟಿಪ್ಪು ಅವರ ನೈಜ ಸಂಗತಿಗಳನ್ನು ಸದರಿ ಕೃತಿಯಲ್ಲಿ ಉದ್ದೇಶಪೂರ್ವಕವಾಗಿ ತಿರುಚಲಾಗಿದೆ. ಟಿಪ್ಪು ಹೊರದೇಶದವರೆಂದು ತಪ್ಪು ಮಾಹಿತಿ ನೀಡಲಾಗಿದೆ. ಕೃತಿ ಮತ್ತು ಈ ಕೃತಿ ಆಧಾರಿತ ನಾಟಕ ಪ್ರದರ್ಶನವನ್ನು ಮುಖ್ಯಮಂತ್ರಿಗಳು ಕೂಡಲೇ ರದ್ದುಗೊಳಿಸಬೇಕು. ಇಲ್ಲವಾದರೆ ನಾಟಕ ಪ್ರದರ್ಶನದ ಸಂದರ್ಭದಲ್ಲಿ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕೃತಿಯಲ್ಲಿ ಟಿಪ್ಪು ಕೊಡುಗೆ, ಅಭಿವೃದ್ಧಿ ಕಾರ್ಯ ಎಲ್ಲವನ್ನೂ ಮರೆಮಾಚಲಾಗಿದೆ. ಟಿಪ್ಪು ಪ್ರತಿಮೆ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸುವ ಮೂಲಕ ಪ್ರಮೋದ್ ಮುತಾಲಿಕ್ ಒಬ್ಬ ಉಗ್ರಗಾಮಿಯಂತೆ ವರ್ತಿಸಿದ್ದಾರೆ. ನಂಜನಗೂಡು ರಸ್ತೆಯಲ್ಲಿರುವ ಬಸ್ ತಂಗುದಾಣದ ಗುಮ್ಮಟಾಕಾರ ಹೊಡೆಯುತ್ತೇನೆ ಎಂದು ಸಂಸದ ಪ್ರತಾಪ್ ಸಿಂಹ ಹೇಳಿಕೆ ನೀಡಿರುವುದು ಖಂಡನೀಯ. ಮೈಸೂರು ಅರಮನೆ, ಮಹಾನಗರ ಪಾಲಿಕೆ, ವಿಧಾನಸೌಧ, ಸರ್ಕಾರಿ ಕಚೇರಿಗಳ ಕಟ್ಟಡಗಳಲ್ಲೂ ಗುಮ್ಮಟಾಕಾರ ಇದ್ದು, ಇವೆಲ್ಲವನ್ನೂ ಪ್ರತಾಪ್ ಸಿಂಹ ತೆರವುಗೊಳಿಸುತ್ತಾರೆಯೇ? ಎಂದು ಪ್ರಶ್ನಿಸಿದರು. ಅಜೀಜ್ ಸೇಟ್ ಬ್ಲಾಕ್ ಅಧ್ಯಕ್ಷ ಸೈಯದ್ ಇಕ್ಬಾಲ್, ಮುಖಂಡರಾದ ಸೈಯದ್ ಫಾರೂಕ್, ಶೌಕತ್, ರಸೂಲ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಮಕ್ಕಳ ದಿನಾಚರಣೆ



ಮೈಸೂರು,ನ.16(ಪಿಎಂ)–ಮಕ್ಕಳ ಆರೋಗ್ಯ ಕಾಪಾಡುವ ಬಗ್ಗೆ ಪೋಷಕರಿಗೆ ಸಲಹೆ ಜೊತೆಗೆ ಮಕ್ಕಳಿಗೆ ಮನರಂಜನೆ, ಆಟೋಟ ಚಟುವಟಿಕೆಗಳೊಂದಿಗೆ ಅಪೋಲೋ ಬಿಜಿಎಸ್ ಆಸ್ಪತ್ರೆಯಲ್ಲಿ ಮಕ್ಕಳ ದಿನವನ್ನು ವಿಶೇಷವಾಗಿ ಆಚರಿಸಲಾಯಿತು.

ವೈದ್ಯರು, ನರ್ಸ್‌ಗಳು ಮತ್ತು ಸಿಬ್ಬಂದಿ ಆಸ್ಪತ್ರೆಯಲ್ಲಿ ವಿಶೇಷವಾಗಿ ಅಲಂಕರಿಸಿದ್ದ ಆವರಣಕ್ಕೆ ಮಕ್ಕಳನ್ನು ಸ್ವಾಗತಿಸುವುದರೊಂದಿಗೆ ಮಕ್ಕಳ ದಿನಾಚರಣೆ ಚಾಲನೆ ಪಡೆಯಿತು. ನಂತರ ವಿವಿಧ ಮನರಂಜನಾ ಕಾರ್ಯಕ್ರಮಗಳು ಹಾಗೂ ಆಟೋಟಗಳಲ್ಲಿ ಮಕ್ಕಳ ಜೊತೆಗೆ ವೈದ್ಯರು, ನರ್ಸ್‌ಗಳು ಹಾಗೂ ಸಿಬ್ಬಂದಿ ಭಾಗವಹಿಸಿ, ವಿಶೇಷ ಮೆರಗು ನೀಡಿದರು.

ಮಕ್ಕಳ ದಿನಾಚರಣೆ ಹಿನ್ನೆಲೆಯಲ್ಲಿ ಅಲಂಕೃತಗೊಂಡಿದ್ದ ಆಸ್ಪತ್ರೆಯ ವಿವಿಧ ವಿಭಾಗಗಳನ್ನು ಪೋಷಕರೊಂದಿಗೆ ಮಕ್ಕಳು ವೀಕ್ಷಿಸಿದರು. ಅಲ್ಲದೆ, ‘ನಿಮ್ಮ ಅಂಗಾಂಗಗಳನ್ನು ತಿಳಿಯಿರಿ’ ಎಂಬ ಆಟದ ಮೂಲಕ ದೇಹದ ನಾನಾ ಭಾಗಗಳ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡಲಾಯಿತು. ಜೊತೆಗೆ ಮಕ್ಕಳ ಆರೋಗ್ಯ ಕಾಪಾಡುವ ಬಗ್ಗೆ ಪೋಷಕರಿಗೆ ವೈದ್ಯರು ಸಲಹೆ–ಸೂಚನೆಗಳನ್ನು ನೀಡಿದರು. ಇದಲ್ಲದೆ, ಮಕ್ಕಳಿಗೆ ಗಿಫ್ಟ್ ಹ್ಯಾಂಪರ್‌ಗಳನ್ನು ನೀಡಲಾಯಿತು.

ಇದೇ ವೇಳೆ ಹೊಸದಾಗಿ ನವೀಕರಿಸಲಾದ ಹೆರಿಗೆ ವಾರ್ಡ್ ‘ಜನನಿ’ಗೆ ಚಾಲನೆ ನೀಡಲಾಯಿತು. ಇದೇ ಸಂದರ್ಭದಲ್ಲಿ ಆಸ್ಪತ್ರೆ ಉಪಾಧ್ಯಕ್ಷ ಎನ್.ಜಿ.ಭರತೀಶ ರೆಡ್ಡಿ ಮಾತನಾಡಿ, ನಮ್ಮ ಮಕ್ಕಳು ನಮ್ಮ ಭವಿಷ್ಯವನ್ನು ಪ್ರತಿನಿಧಿಸುತ್ತಾರೆ. ನಮ್ಮ ಮಕ್ಕಳು ಆರೋಗ್ಯಕರ ವಯಸ್ಕರಾಗಿ ಬೆಳೆದರೆ ಅವರು ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಲ್ಲರು. ಈ ನಿಟ್ಟಿನಲ್ಲಿ ಮಕ್ಕಳಿಗೆ ಎಲ್ಲಾ ರೀತಿಯ ಅವಕಾಶ ಸಿಗುವಂತೆ ನೋಡಿಕೊಳ್ಳುವುದು ಪೋಷಕರ ಜವಾಬ್ದಾರಿ ಎಂದು ಹೇಳಿದರು.

ಶಿಕ್ಷಕಸ್ನೇಹಿ ವರ್ಗಾವಣೆ ನೀತಿ: ಕರಡು ಅಧಿಸೂಚನೆ ಪ್ರಕಟ

ಬೆಂಗಳೂರು: ಶಿಕ್ಷಕರ ವರ್ಗಾವಣೆಗೆ ಇದ್ದ ಹಲವು ನಿರ್ಬಂಧಗಳನ್ನು ರದ್ದುಪಡಿಸಿ, ಶಿಕ್ಷಕಸ್ನೇಹಿ ವರ್ಗಾವಣೆ ನೀತಿ ಜಾರಿಗೊಳಿಸಲು ಮುಂದಾಗಿರುವ ಸರ್ಕಾರ, ಈ ಸಂಬಂಧ ಬುಧವಾರ ಕರಡು ಅಧಿಸೂಚನೆ ಹೊರಡಿಸಿದೆ. ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020ಕ್ಕೆ ತಿದ್ದುಪಡಿ ಮಾಡಿ, ಸಚಿವ ಸಂಪುಟ ಸಭೆ ಅನುಮೋದನೆ ಪಡೆಯಲಾಗಿತ್ತು. ನಂತರ ಅಧಿವೇಶನದಲ್ಲಿ ಮಂಡಿಸಲಾಗಿತ್ತು. ಈಗ ಕರಡು ಅಧಿಸೂಚನೆ ಹೊರಡಿಸಲಾಗಿದ್ದು, ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ದಿನದಿಂದ 15 ದಿನಗಳ ನಂತರ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ವಿವರಿಸಲಾಗಿದೆ. ಪರಸ್ಪರ ವರ್ಗಾವಣೆಗೆ ಒಂದು ಬಾರಿ ಮಾತ್ರ ಅವಕಾಶ ಇತ್ತು. ಇನ್ನು ಮುಂದೆ ಆ ನಿರ್ಬಂಧ ಇರುವುದಿಲ್ಲ. ಕೆಲಸಕ್ಕೆ ಸೇರಿದ ಮೊದಲ ಐದು ವರ್ಷ ಹಾಗೂ ನಿವೃತ್ತಿಗೆ ಮೊದಲಿನ 5 ವರ್ಷ ವರ್ಗಾವಣೆಗೆ ಅವಕಾಶ ಇರುವುದಿಲ್ಲ. ಆದರೆ, ಒಮ್ಮೆ ವರ್ಗಾವಣೆಯಾದ ಬಳಿಕ ಮತ್ತೆ ಮೂರು ವರ್ಷ ಅರ್ಜಿ ಸಲ್ಲಿಸುವಂತಿಲ್ಲ.

ಬಾಂಧವ್ಯ ಶೀರ್ಷಿಕೆಯಡಿ ರೋಟರಿ ಮೈಸೂರು ಮಿಡ್‌ಟೌನ್‌ನಿಂದ

ನ.19ರಂದು ಮಾನಸಿಕ ಭಿನ್ನ ಸಾಮರ್ಥ್ಯವುಳ್ಳ ವಿಶೇಷ ಮಕ್ಕಳು, ಯುವ ಜನರ ಕ್ರೀಡಾಕೂಟ

ಅಂತಾರಾಷ್ಟ್ರೀಯ ಪ್ಯಾರಾ ಕ್ರೀಡಾಪಟು ಆರ್.ಟಿ.ಪ್ರಸನ್ನಕುಮಾರ್ ಅತಿಥಿಯಾಗಿ ಭಾಗಿ



ಮೈಸೂರು, ನ.16(ಪಿಎಂ)– ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ನ.19ರಂದು ‘ಬಾಂಧವ್ಯ–2022–23’ ಶೀರ್ಷಿಕೆಯಡಿ ಮಾನಸಿಕ ಭಿನ್ನ ಸಾಮರ್ಥ್ಯವುಳ್ಳ ವಿಶೇಷ ಮಕ್ಕಳು, ಯುವ ಜನರ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಎಂ.ಎಸ್.ನವೀನ್‌ಚಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿವಿಯ ಓವಲ್ ಮೈದಾನದಲ್ಲಿ ಕ್ರೀಡಾಕೂಟ ನಡೆಯಲಿದೆ. ಕಳೆದ 15 ವರ್ಷಗಳಿಂದ ಈ ಕ್ರೀಡಾಕೂಟ ಹಮ್ಮಿಕೊಳ್ಳಲಾಗುತ್ತಿದೆ. ಕೋವಿಡ್ ಕಾರಣಕ್ಕೆ 2 ವರ್ಷಗಳು ಆಯೋಜನೆ ಸಾಧ್ಯವಾಗಿರಲಿಲ್ಲ. ಇದೀಗ ಮತ್ತೆ ಈ ಸಾಲಿನಲ್ಲಿ ಕ್ರೀಡಾಕೂಟ ಹಮ್ಮಿಕೊಳ್ಳಲಾಗಿದೆ. ಸ್ಪೆಷಲ್ ಒಲಂಪಿಕ್ಸ್‌ಗೆ ಇಂತಹ ಮಕ್ಕಳನ್ನು ತಯಾರುಗೊಳಿಸುವ ಉದ್ದೇಶದಡಿ ಈ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ ಎಂದರು.

ಈ ಬಾರಿಯ ಕ್ರೀಡಾಕೂಟದಲ್ಲಿ 600 ಮಂದಿ ಭಾಗವಹಿಸಲು ಅವಕಾಶವಿದ್ದು, ಈಗಾಗಲೇ 550 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ನೋಂದಣಿ ಉಚಿತವಾಗಿದ್ದು, ಆಸಕ್ತರು ಸ್ಥಳದಲ್ಲೂ ನೋಂದಣಿ ಮಾಡಿಕೊಳ್ಳಬಹುದು. ಮಾನಸಿಕ ಭಿನ್ನ ಸಾಮರ್ಥ್ಯದ ದೈಹಿಕವಾಗಿ ಹೆಚ್ಚು ಹಾಗೂ ಕಡಿಮೆ ಸಾಮರ್ಥ್ಯವುಳ್ಳವರ ಎರಡು ಪ್ರತ್ಯೇಕ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಇದರಲ್ಲಿ ಬಾಲಕ–ಬಾಲಕಿಯರು ಹಾಗೂ ಯುವಕ–ಯುವತಿಯರು ಎಂಬ ಪ್ರತ್ಯೇಕ ವಿಭಾಗಗಳೂ ಇರಲಿವೆ. ಇದರೊಂದಿಗೆ 8ರಿಂದ 11 ವರ್ಷ, 12ರಿಂದ 15 ವರ್ಷ, 16ರಿಂದ 21 ವರ್ಷ, 22ರಿಂದ 29 ವರ್ಷ ಹಾಗೂ 30 ವರ್ಷ ವಯೋಮಾನದವರ ವಿಭಾಗಗಳಲ್ಲಿ ಸ್ಪರ್ಧೆಗಳು ನಡಯಲಿವೆ ಎಂದರು.

ಬೊಸ್ಸೆ ಎಂಬ ಟೀಮ್ ಗೇಮ್ ಸೇರಿದಂತೆ ದೂರ ಜಿಗಿತ, ಎತ್ತರ ಜಿಗಿತ, ಶಾಟ್‌ಪುಟ್, ಟೆನ್ನಿಸ್ ಬಾಲ್ ಎಸೆಯುವುದು, ಸಾಫ್ಟ್ ಬಾಲ್, ಥ್ರೋ ಬಾಲ್ ಸ್ಪರ್ಧೆಗಳು ನಡೆಯಲಿವೆ. ವಿಜೇತರಿಗೆ ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ನೀಡಲಾಗುವುದು ಎಂದರು.

ಅಂದು ಬೆಳಗ್ಗೆ 9ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ರೋಟರಿ ಜಿಲ್ಲೆ 3181ರ ನಿಯೋಜಿತ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ್, ಅಂತಾರಾಷ್ಟ್ರೀಯ ಪ್ಯಾರಾ ಕ್ರೀಡಾಪಟು ಆರ್.ಟಿ.ಪ್ರಸನ್ನಕುಮಾರ್ ಪಾಲ್ಗೊಳ್ಳಲಿದ್ದಾರೆ ಎಂದರು. ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಅತಿಥಿಗಳಾಗಿ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಉಪವಿಭಾಗದ ಉಪಪೊಲೀಸ್ ಅಧೀಕ್ಷಕ ಎಸ್.ಎನ್.ಸಂದೇಶ್‌ಕುಮಾರ್, ರೋಟರಿ ವಲಯ–7ರ ಸಹಾಯಕ ಗೌರ್ನರ್ ಆರ್.ವೆಂಕಟೇಶ್, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಪಾಲ್ಗೊಳ್ಳಲಿದ್ದಾರೆ. ಭಾಗವಹಿಸಲಿಚ್ಛಿಸುವವರು ನೋಂದಣಿಗಾಗಿ ಮೊ.ಸಂ. 98801 65946 ಅಥವಾ 99807 82008 ಸಂಪರ್ಕಿಸಬಹುದು ಎಂದರು. ರೋಟರಿ ಮೈಸೂರು ಮಿಡ್‌ಟೌನ್ ಕಾರ್ಯದರ್ಶಿ ಎಸ್.ಕುಮಾರ್‌ಸ್ವಾಮಿ, ಪದಾಧಿಕಾರಿಗಳಾದ ಹೆಚ್.ಎಸ್.ವೀರೇಶ್, ಎಲಿಜ್ಹಾರ್ ವಿಲ್ಸನ್, ಎ.ಎನ್.ಅಯ್ಯಣ್ಣ, ಬಾಂಧವ್ಯ–2022ರ ಅಧ್ಯಕ್ಷ ಜಯಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.

ವಿಮಾನ ಪ್ರಯಾಣದ ವೇಳೆ ಮಾಸ್ಕ್ ಕಡ್ಡಾಯವಲ್ಲ



ನವದೆಹಲಿ: ವಿಮಾನ ಪ್ರಯಾಣದ ವೇಳೆ ಇನ್ನು ಮುಂದೆ ಮಾಸ್ಕ್ ಕಡ್ಡಾಯವಲ್ಲ ಎಂದು ಪ್ರಯಾಣಿಕ ವಿಮಾನ ಯಾನ ಸಚಿವಾಲಯ ಆದೇಶ ಪ್ರಕಟಿಸಿದೆ.

ಮಾಸ್ಕ್ ಧರಿಸುವುದು ಕಡ್ಡಾಯವಲ್ಲ ಆದರೆ ಆದ್ಯತೆಯಾಗಿ ಪ್ರಯಾಣಿಕರೇ ಅದನ್ನು ಬಳಕೆ ಮಾಡಬೇಕು ಎಂದು ಕೊರೊನಾ ಸೋಂಕು ಸಂಖ್ಯೆ ಕಡಿಮೆಯಾಗುತ್ತಿರುವ ಬೆನ್ನಲ್ಲೇ ಸರ್ಕಾರ ಹೇಳಿದೆ.

ಈ ವರೆಗೂ ವಿಮಾನಗಳಲ್ಲಿ ಪ್ರಯಾಣಿಸಲು ಮಾಸ್ಕ್ ಹಾಗೂ ಫೇಸ್ ಕವರ್‌ಗಳು ಕಡ್ಡಾಯವಾಗಿತ್ತು. ಪ್ರಯಾಣಕ್ಕೆ ನಿಗದಿಯಾಗಿರುವ ವಿಮಾನಗಳ ಸಂಸ್ಥೆಗಳಿಗೆ ಕಳಿಸಲಾಗಿರುವ ಪ್ರಕಟಣೆಯಲ್ಲಿ, ಮಾಸ್ಕ್ ಕಡ್ಡಾಯಗೊಳಿಸುವುದನ್ನು ಹಿಂಪಡೆಯುತ್ತಿರುವ ನಿರ್ಧಾರವನ್ನು ಕೋವಿಡ್–19 ನಿರ್ವಹಣೆಯ ಪ್ರತಿಕ್ರಿಯೆಗೆ ಸರ್ಕಾರದ ಶ್ರೇಣೀಕೃತ ವಿಧಾನದ ನೀತಿಯ ಭಾಗವಾಗಿ ಕೈಗೊಳ್ಳಲಾಗಿದೆ. ಆದ್ದರಿಂದ ವಿಮಾನದ ಒಳಗಿನ ಪ್ರಕಟಣೆಯಲ್ಲಿ, ಪ್ರಯಾಣಿಕರು ತಮ್ಮ ಆಯ್ಕೆಯಿಂದ ಮಾಸ್ಕ್ ಧರಿಸುವುದು ಸೂಕ್ತ ಎಂಬುದಾಗಿ ಹೇಳಬೇಕೆಂದು ತಿಳಿಸಿದೆ.

ನಕ್ಕರೆ ಅದೇ ಸ್ವರ್ಗ

ಆತ : ನನ್ನಲ್ಲಿರುವ ದುಶ್ಚಟಗಳನ್ನೆಲ್ಲಾ ಬಿಟ್ಟರೆ ನಮ್ಮಪ್ಪ. 10,000 ರೂಪಾಯಿ ಬಹುಮಾನ ಕೊಡ್ತಾರಂತೆ.

ಈತ : ಹೌದೇ? ಪರವಾಗಿಲ್ಲ... ಆದರೂ ನೀನು ನಿನ್ನ ದುಶ್ಚಟಗಳನ್ನು ಬಿಟ್ಟಂತೆ ಕಾಣೋಲ್ಲ

ಆತ : ಇನ್ನೇನು ಮಾಡಲಿ ಹೇಳು. ದುಶ್ಚಟಗಳನ್ನು ತ್ಯಾಗ ಮಾಡಿದ ಬಳಿಕ ಆ ಹಣ ಇಟ್ಟುಕೊಂಡು ನಾನೇನು ಮಾಡಲಿ...

ಮೈಸೂರು ಮಿತ್ರ

ಗುರುವಾರ, 17 ನವೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ವಿಘ್ನ ಭಯದಿಂದ ಕೆಲಸವನ್ನೇ ಆರಂಭ ಮಾಡದವರು ನೀಚರು. ಕೆಲಸ ಆರಂಭಿಸಿ ವಿಘ್ನ ಬಂದಾಗ ಸುಮ್ಮನಾಗುವವರು ಮಧ್ಯಮರು. ಗಳಿಗೆ ಗಳಿಗೆಗೂ ವಿಘ್ನ ಎದುರಿಸಿದರೂ ಪ್ರಯತ್ನ ಬಿಡದೆ ಸಾಧಿಸುವವರು ಉತ್ತಮರು – ಭರ್ತೃಹರಿ

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು

{ ಉಣ್ಣಕ್ಕಿಲ್ಲದಿದ್ದರೂ ಸಣ್ಣಕ್ಕಿ ಅನ್ನ,
ಉಡೋಕೆ ಇಲ್ದಿದ್ರೂ ಪಟ್ಟೆ ಸೀರೆ

ನಿಮ್ಮ ಪತ್ರಗಳು

ನಿಲ್ಲದ ಖಾಸಗಿ ಕ್ಲಿನಿಕ್‌ಗಳ ಹಗಲು ದರೋಡೆ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಹೋಬಳಿಯಲ್ಲಿ ನೆಲೆಗೊಂಡಿರುವ ಸುಮಾರು ಆರು ಖಾಸಗಿ ಕ್ಲಿನಿಕ್‌ಗಳ ದರೋಡೆಗೆ ಕಡಿವಾಣ ಹಾಕಲು ಮೇಲಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಇನ್ನೂ ಸಾಧ್ಯವಾಗಿಲ್ಲ. ಈ ಹಿಂದೆ ಪತ್ರಿಕೆಯಲ್ಲಿ ಇದರ ಬಗ್ಗೆ ಸವಿವರವಾಗಿ ಬರೆದು ಇವುಗಳ ಬಗ್ಗೆ ಪರಿಶೀಲಿಸಿ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಲು ಆಗ್ರಹಿಸಲಾಗಿತ್ತು. ಆದರೆ ಈವರೆಗೂ ಯಾವುದೇ ಕಠಿಣ ಕ್ರಮ ಕೈಗೊಳ್ಳಲು ತಾಲೂಕು ಮತ್ತು ಜಿಲ್ಲಾ ಆರೋಗ್ಯ ಅಧಿಕಾರಿಗಳು ಮುಂದಾಗೇ ಇಲ್ಲ. ಇದು ಸಾರ್ವಜನಿಕರಲ್ಲಿ ಸಾಕಷ್ಟು ಅನುಮಾನ ಮೂಡಿಸುತ್ತದೆಯಲ್ಲವೇ...?!

ಡಿ ಫಾರ್ಮಾ ಸರ್ಟಿಫಿಕೇಟ್ ಹೊಂದಿರದ ಜನರು ಮೆಡಿಕಲ್ ಶಾಪ್ ನಡೆಸುವುದು. ಇಲ್ಲವೇ ಯಾರದೋ ಡಿ ಫಾರ್ಮಾ ಸರ್ಟಿಫಿಕೇಟ್ ಕೊಂಡು ತಾವೇ ಶಾಪ್ ನಡೆಸೋದು. ಅಲ್ಲದೆ ಎಂಬಿಬಿಎಸ್ ಓದಿರದ ಬರೇ ಜಿಎನ್‌ಎಂ ನರ್ಸಿಂಗ್ ತರಬೇತಿ ಪಡೆದ ಕೆಲ ಜನರು ಶ್ರೀಸಾಮಾನ್ಯರ ಆರೋಗ್ಯದ ಮೇಲೆ ಚೆಲ್ಲಾಟವಾಡುವ ಸಂಗತಿ ಸಾಮಾನ್ಯವಾಗಿದೆ. ಅದೂ ಹೇಗೆ ಎಂದರೆ ಕೆಲವರು ತಮಗೆ ಕಮಿಷನ್ ಕೊಡುವ ಮೆಡಿಕಲ್ ಶಾಪ್‌ಗಳಿಗೆ ಔಷಧಿ ಬರೆದು ಕಳಿಸೋದು, ಇಲ್ಲವೇ ತಾವೇ ಮೆಡಿಷಿನ್ ಕೊಟ್ಟು ದುಪ್ಪಟ್ಟು ಹಣ ಸುಲಿಗೆ ಮಾಡೋದು. ಇದು ಅವ್ಯಾಹತವಾಗಿ ನಡೆದುಕೊಂಡು ಬರುತ್ತಿದೆ. ಕೆಲವರು ಇದು ಕಂಡರೂ ಕಾಣದಂತೆ ಇರುವುದನ್ನು ನೋಡಿದರೆ ದಿಗಿಲು ಹುಟ್ಟಿಸುತ್ತಿದೆ.

ಕೊನೆಯದಾಗಿ ಹೇಳೋಣವೆಂದರೆ ಸಣ್ಣಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆಗಂತ ರಾವಂದೂರಿನ ಸರ್ಕಾರಿ ಆರೋಗ್ಯ ಮತ್ತು ಕ್ಷೇಮ ಕೇಂದ್ರಕ್ಕೆ ಹೋದರೆ ಅಲ್ಲಿಯ ವೈದ್ಯರು ನಡೆದುಕೊಳ್ಳುವ ಒಂದು ಬಗೆಯ ತಾತ್ಸಾರ ಮನೋಭಾವಕ್ಕೆ ಬೇಸತ್ತ ಜನರು ಖಾಸಗಿ ಕ್ಲಿನಿಕ್‌ಗಳ ಮೊರೆಹೋದರೆ ಅಲ್ಲಿಯೂ ಅವ್ಯವಸ್ಥೆ, ಅಂದರೆ ಬೆಂಕಿಯಿಂದ ಬಾಣಲೆಗೆ ಎಂಬ ತ್ರಿಶಂಕು ಸ್ಥಿತಿ. ಯಾರಿಗ್ ಹೇಳನ ನಮ್ ಪ್ರಾಬ್ಲಮ್ಮೂ ಅನ್ನುವಂಥ ಅಸಹಾಯಕ ವಾತಾವರಣ. ಸರ್ಕಾರಿ ವೈದ್ಯರ ಈ ಕೆಲಸ ಕೆಲ ಖಾಸಗಿ ಮಂದಿಗೆ ಹಾಲು ಜೇನಿನಂತೆ ಬೆರೆತಿದೆ... ಹೇಳಲು ಹೋದರೆ ಇನ್ನೂ ಇದೆ, ಸದ್ಯಕ್ಕೆ ಇಷ್ಟು ಸಾಕು. ಮುಂದೆ ಯಾರದಾದರೂ ಪ್ರಾಣ ಕಳೆದುಕೊಂಡಾಗ ಓಡಿಬಂದು ಕ್ರಮ ಕೈಗೊಳ್ಳುವ ಬದಲಿಗೆ ಪ್ರಾಣ ಉಳಿಸುವಂತೆ ಈಗಲೇ ಕ್ರಮ ಕೈಗೊಳ್ಳಲು ತುರ್ತಾಗಿ ಮುಂದಾಗಬೇಕು ಎಂಬುದು ನೊಂದ ರೋಗಿಗಳ ಅಳಲು...

–ಎ.ಎಸ್.ಗೋವಿಂದೇಗೌಡ, ಕನ್ನಡ ಉಪನ್ಯಾಸಕರು, ಅರೇನಹಳ್ಳಿ ಗ್ರಾಮ, ಪಿರಿಯಾಪಟ್ಟಣ ತಾ.

ಹೆಚ್.ಡಿ.ದೇವೇಗೌಡರ ಕಡೆಗಣನೆ ಸರಿಯಲ್ಲ

ಮಾನ್ಯರೆ.

ಬೆಂಗಳೂರಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಲೋಹದ ಪ್ರತಿಮೆಯನ್ನು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸ್ಥಾಪಿಸಿರುವುದು ನಾಡಿನ ಹಿರಿಮೆ ಮತ್ತು ಹೆಮ್ಮೆಯ ಸಂಕೇತ. ಪ್ರತಿಮೆ ಶಂಕುಸ್ಥಾಪನೆ ಸಂದರ್ಭದಲ್ಲಿ ಹೆಚ್.ಡಿ. ದೇವೇಗೌಡರಿಗೆ ಸರ್ಕಾರವು ಆಮಂತ್ರಣ ನೀಡಿತ್ತು. ಆದರೆ ಕೆಂಪೇಗೌಡರ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡರನ್ನು ಆಹ್ವಾನಿಸದೆ ಇರುವುದು ಕನ್ನಡಿಗರಿಗೆ ಮಾಡಿದ ಅವಮಾನ. ಇಂತಹ ಘಟನೆಗಳು ಮರುಕಳಿಸದಿರಲೆಂದು ಮನವಿ.

–ಕಂಗಾಣಿಸೋಮು ಪಿ, ಕ್ಯಾತಮಾರನಹಳ್ಳಿ, ಮೈಸೂರು

ಇದೇನು ನಗರ ಬಸ್ ನಿಲ್ದಾಣವೋ ಕಳ್ಳರ ಆಶ್ರಯ ತಾಣವೋ

ಮಾನ್ಯರೆ,

ಇತ್ತೀಚೆಗೆ ಮೈಸೂರು ನಗರ ಸಾರಿಗೆ ನಿಲ್ದಾಣದಲ್ಲಿ ಮೊಬೈಲ್, ಪರ್ಸ್ ಕಳ್ಳರ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ಕಾಲೇಜು ವಿದ್ಯಾರ್ಥಿನಿಯೊಬ್ಬರ ಬೆಲೆ ಬಾಳುವ ಮೊಬೈಲ್ ಕಳ್ಳತನವಾಯಿತು. ಪಾಪ ಮೊಬೈಲ್ ಕಳೆದುಕೊಂಡ ವಿದ್ಯಾರ್ಥಿನಿ ರೋದಿಸುತ್ತಿದ್ದರು. ಮೈಸೂರು ನಗರ ಪೊಲೀಸ್ ಆಯುಕ್ತರು ಇದರ ಬಗ್ಗೆ ಗಮನಹರಿಸಿ ಇಂತಹ ಪ್ರಕರಣಗಳು ನಡೆಯದಂತೆ ಗಮನಹರಿಸಲು ಮನವಿ.

– ನೊಂದ ಪ್ರಯಾಣಿಕರು, ಮೈಸೂರು.

ಪಾಲಿಕೆಯ ಅಧಿಕಾರಿಗಳು ಕಾನೂನು ರೀತಿ ಕ್ರಮ ಕೈಗೊಳ್ಳುವುದನ್ನು ಬಿಟ್ಟು ಬೇರೆಲ್ಲಾ ಮಾಡುತ್ತಾರೆ!

ಮಾನ್ಯರೆ,

ಪಾಲಿಕೆಯಿಂದಲೇ ತೆರವು ಸಾಧ್ಯತೆ (ಮೈ ಮಿತ್ರ 14.11.22) ಎಂಬುದು ಸಾಧ್ಯವಾಗುತ್ತಿರುವುದು ಎರಡು ಕಾರಣಗಳಿಂದ. ಒಂದು ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿಯವರ ಕೊಲೆಯಿಂದ, ಮತ್ತೊಂದು ಸದರಿ ಅಧಿಕಾರಿ ಹೈಕೋರ್ಟಿನಲ್ಲಿ ಪಾಲಿಕೆಯವರಿಗೆ ದೂರು ಕೊಟ್ಟರೂ ಯಾವುದೇ ಕ್ರಮ ಕೈಗೊಳ್ಳದೆ ಇರುವುದು. ಅದಕ್ಕಾಗಿ ಕಟ್ಟಡ ನಿರ್ಮಿಸದಂತೆ "ಸ್ಟೇ ಆರ್ಡರ್" ಗಾಗಿ ಹೈಕೋರ್ಟಿನಲ್ಲಿ ದಾವಾ ಹಾಕಿರುವುದು. ಪಾಲಿಕೆಯ ನಿರ್ಲಿಪ್ತತೆಯಿಂದಾಗಿ, ಕೋರ್ಟ್ ಛೀಮಾರಿ ಹಾಕಬಹುದು ಎಂಬ ಹೆದರಿಕೆಯಿಂದಾಗಿ ಈಗ ಸದರಿ ಅಕ್ರಮ ಕಟ್ಟಡ ಕೆಡವಲು ಕ್ರಮ ತೆಗೆದುಕೊಳ್ಳಲು ಹೊರಟಿರುವುದು. ಮೈಸೂರಿನಲ್ಲಿ ಬಹುತೇಕ ಕಟ್ಟಡಗಳು ನಿಯಮದಂತೆ ಕಟ್ಟಿಲ್ಲ. ಸದರಿ ಕಟ್ಟಡಗಳ ಅಕ್ಕಪಕ್ಕದ ಮನೆಯವರು ಅದರ ಬಗ್ಗೆ ಪಾಲಿಕೆಗೆ ದೂರು ಕೊಟ್ಟರೆ ಕೇವಲ ನೋಟೀಸ್ ಕೊಟ್ಟು ಸುಮ್ಮನಾಗುವ ಪಾಲಿಕೆ, ಒಂದು ವೇಳೆ ಒತ್ತಡ ಜಾಸ್ತಿ ಇದ್ದಲ್ಲಿ ಸದರಿ ಕಟ್ಟಡ ವೀಕ್ಷಣೆ ಮಾಡುವಂತೆ ಬಂದು, ದೂರುದಾರರ ಮನೆಗಳಿಗೆ ತೆರಳಿ, ಅವರೊಂದಿಗೆ ಮಾತನಾಡುತ್ತಾ ಹಾಗೆಯೇ ಅವರ ಮನೆಯನ್ನು ವೀಕ್ಷಿಸಿ, ನೀವೇ ನಿಯಮದಂತೆ ಮನೆ ಕಟ್ಟಿಲ್ಲ, ಬೇರೆಯವರ ಮೇಲೆ ದೂರು ಕೊಡ್ತೀರಲ್ಲ. ಮುಂಚೆ ನಿಮ್ಮ ಮನೆಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಹೆದರಿಸಿ, ಅಕ್ಕಪಕ್ಕದವರೆಲ್ಲಾ ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡು ಹೋಗಿ ಎಂದು ದೂರುದಾರರಿಗೇ ಬುದ್ಧಿ ಹೇಳುವ ರೀತಿಯಲ್ಲಿ ಹೆದರಿಸಿ ಹೋಗುತ್ತಾರೆ. ಅಲ್ಲಿಗೆ ದೂರುದಾರನ ದೂರು ಕಸದ ಬುಟ್ಟಿಗೆ ಸೇರಿದಂತೆ. ಇದರ ಹಿಂಬದಿಯ ಕಾರಣ ಎಲ್ಲರಿಗೂ ತಿಳಿದಿರುವುದೇ ಆಗಿರುತ್ತದೆ. ನಾನು ಹುಟ್ಟಿದಾರಭ್ಯ ಮೈಸೂರಿನವನೇ ಆಗಿದ್ದು ಇದುವರೆಗೂ ತಾವೇ ಖುದ್ದಾಗಿ ಬಂದು ಕಟ್ಟಡ ನೆಲಸಮ ಮಾಡಿರುವುದನ್ನು ಕಂಡಿಲ್ಲ, ಕೇಳಿಲ್ಲ. ಹಾಗೆಯೇ ಇದು ಸ್ವಂಯಂ ಅನುಭವ ಕೂಡ, ಆದರೇನು ಮಾಡುವುದು ಎಲ್ಲರೂ ಕೋರ್ಟು, ಕಚೇರಿಯೆಂದು ಅಲೆಯಲು ಸಾಧ್ಯವಾಗದೇ ಇರುವುದು, ಪಾಲಿಕೆಯವರಿಗೆ ವರವಾಗಿರುತ್ತದೆ. ಒಟ್ಟಾರೆ ವ್ಯವಸ್ಥೆ ಲಂಚಮಯವಾಗಿದೆ. ಆದರೆ ಇದಕ್ಕಾಗಿ ವ್ಯಕ್ತಿಯೊಬ್ಬರ ಕೊಲೆ ಮಟ್ಟಕ್ಕೆ ಹೋದದ್ದು ಮಾತ್ರ ಶೋಚನೀಯ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ.

– ತಮ್ಮವ, ಬ್ಯಾಂಕ್ ಶಿವಕುಮಾರ್, ಜೆ.ಪಿ. ನಗರ ,ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಹೆಚ್ಚುತ್ತಿರುವ ವಿಶ್ವವಿದ್ಯಾಲಯಗಳ ಸಂಖ್ಯೆ ತರಬಲ್ಲದೇ ಉನ್ನತ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆಗಳನ್ನು?

ಕರ್ನಾಟಕ ರಾಜ್ಯದಲ್ಲಿ ಎಂಟು ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಸರ್ಕಾರದ ನಿರ್ಧಾರ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಇತ್ತೀಚಿನ ದಿನಗಳಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗುತ್ತಿರುವ ವಿಚಾರ. ಈ ಸಾಲಿಗೆ ಹಾಸನ, ಮಂಡ್ಯ, ಚಾಮರಾಜನಗರ(ಮೈಸೂರು ವಿಶ್ವವಿದ್ಯಾನಿಲಯದಿಂದ), ಕೊಡಗು (ಮಂಗಳೂರು ವಿಶ್ವವಿದ್ಯಾನಿಲಯದಿಂದ), ಬೀದರ್ (ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ), ಹಾವೇರಿ (ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದಿಂದ, ಕೊಪ್ಪಳ(ಬಳ್ಳಾರಿಯಲ್ಲಿರುವ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಿಂದ) ಮತ್ತು ಬಾಗಲಕೋಟೆ(ಬೆಳಗಾವಿಯಲ್ಲಿರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಿಂದ)– ಈ 8 ಹೊಸ ವಿಶ್ವವಿದ್ಯಾಲಯಗಳು ಸೇರುತ್ತವೆ. ಇವುಗಳೆಲ್ಲ ಹಾಲಿ ಮೂಲ ವಿಶ್ವವಿದ್ಯಾಲಯಗಳ ಸ್ನಾತಕೋತ್ತರ ಕೇಂದ್ರಗಳಾಗಿದ್ದು ಆಯಾ ಜಿಲ್ಲಾ ಕೇಂದ್ರಗಳಲ್ಲಿ ತಮ್ಮ ಕ್ಯಾಂಪಸ್‌ಗಳನ್ನು ಹೊಂದಿರುವುದರಿಂದ, ಅವುಗಳು ಅಲ್ಲಿಯೇ ಕಾರ್ಯಾರಂಭ ಮಾಡಲಿವೆ. ಈಗಾಗಲೇ ಅಲ್ಲಿ ಕಾರ್ಯ ನಿರ್ವಹಿಸುತ್ತಿರುವವರು ಈ ಹೊಸ ವಿಶ್ವವಿದ್ಯಾಲಯಗಳಲ್ಲಿ ಸರ್ಕಾರಿ ಸೇವಾ ನಿಯಮಗಳಿಗನುಸಾರವಾಗಿ ಮುಂದುವರೆಯುತ್ತಾರೆ. ಪ್ರತಿ ಹೊಸ ವಿಶ್ವವಿದ್ಯಾಲಯಕ್ಕೂ ನಿಗದಿಯಾಗಿರುವ ಮರುಕಳಿಸುವ ವೆಚ್ಚವಾಗಿ ವಾರ್ಷಿಕ ಎರಡು ಕೋಟಿ ಹಣವನ್ನು ರಾಜ್ಯ ಸರ್ಕಾರ ಮಂಜೂರು ಮಾಡಿದೆ ಎಂದು ಮಾಧ್ಯಮ ವರದಿಗಳು ತಿಳಿಸಿವೆ .

ರಾಜ್ಯದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ 65 ವಿಶ್ವವಿದ್ಯಾಲಯಗಳ ಜೊತೆ ಈ ಎಂಟು ಹೊಸ ವಿಶ್ವವಿದ್ಯಾಲಯಗಳೂ ಸೇರಿದರೆ ರಾಜ್ಯದಲ್ಲಿರುವ ಒಟ್ಟು ವಿಶ್ವವಿದ್ಯಾಲಯಗಳ ಸಂಖ್ಯೆ 73ಕ್ಕೆ ಏರುತ್ತದೆ. ಇವುಗಳನ್ನು ಸರ್ಕಾರಿ ಮತ್ತು ಖಾಸಗಿ ಎಂಬ ಎರಡು ವರ್ಗಗಳಲ್ಲಿ ವಿಭಜಿಸಿದಾಗ ಸರ್ಕಾರಿ ಸ್ವಾಮ್ಯದಲ್ಲಿರುವ ಸಂಸ್ಥೆಗಳು (ಹೊಸ ವಿಶ್ವವಿದ್ಯಾಲಯಗಳೂ ಸೇರಿದಂತೆ) ನಲವತ್ತಾದರೆ ಖಾಸಗಿ ವಲಯಕ್ಕೆ ಸೇರುವ ಸಂಸ್ಥೆಗಳು 33 ಆಗುತ್ತವೆ. ಕರ್ನಾಟಕದ ಮೊದಲ ರಾಜ್ಯ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯ ಪ್ರಾರಂಭವಾದದ್ದು 1916ರಲ್ಲಿ, ಅಂದರೆ ಒಂದು ಶತಮಾನಕ್ಕೂ ಹಿಂದೆ. ಖಾಸಗಿ ವಿಶ್ವವಿದ್ಯಾಲಯಗಳ ಇತಿಹಾಸ ಹೆಚ್ಚು–ಕಡಿಮೆ ಎರಡು ದಶಕಗಳಿಗೆ ಸೀಮಿತವಾದದ್ದು. ಆದರೂ ಅವುಗಳ ಸಂಖ್ಯೆ ರಾಜ್ಯದ ಒಟ್ಟು ವಿಶ್ವವಿದ್ಯಾಲಯಗಳ ಸಂಖ್ಯೆಯಲ್ಲಿ ಶೇಕಡಾ 45ರಷ್ಟು, ಭಾರತದ ಚಿತ್ರಣ ಇದಕ್ಕಿಂತ ತೀರಾ ಭಿನ್ನವಾಗೇನಿಲ್ಲ. ದೇಶದ ಒಟ್ಟು ವಿಶ್ವವಿದ್ಯಾಲಯಗಳಲ್ಲಿ ಖಾಸಗಿ ಸಂಸ್ಥೆಗಳು ಶೇಕಡಾ 40ರಷ್ಟಿವೆ. ಕರ್ನಾಟಕ ರಾಜ್ಯದ 31 ಜಿಲ್ಲೆಗಳಲ್ಲಿ ಈಗಾಗಲೇ ಹಾಲಿ 25 ಜಿಲ್ಲೆಗಳಲ್ಲಿ ಹೊಸ ವಿಶ್ವವಿದ್ಯಾಲಯಗಳೂ ಸೇರಿದಂತೆ ಒಂದಾದರೂ ವಿಶ್ವವಿದ್ಯಾಲಯವಿದ್ದು ಇನ್ನುಳಿದ 6 ಜಿಲ್ಲೆಗಳಲ್ಲಿ ಮಾತ್ರ ಹೊಸ ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಬೇಕಿದೆಯಷ್ಟೇ. ಈ ಪರಿಯಲ್ಲಿ ವಿಶ್ವವಿದ್ಯಾಲಯಗಳ ಸಂಖ್ಯಾತ್ಮಕ ಹೆಚ್ಚಳವಾಗುತ್ತಾ



ಹೋದಾಗ ಉನ್ನತ ಶಿಕ್ಷಣದಲ್ಲಿ ಒಟ್ಟು ದಾಖಲಾತಿ ಅನುಪಾತ ಹೆಚ್ಚಾಗುತ್ತದೆ ಎಂಬ ವಾದವೊಂದಿದೆ. ಒಟ್ಟು ದಾಖಲಾತಿ ಅನುಪಾತ ಎಂದರೆ ಒಂದು ಜನಸಂಖ್ಯಾ ಗುಂಪಿನಲ್ಲಿ 18–23 ವಯೋಗುಂಪಿನಲ್ಲಿರುವವರಲ್ಲಿ ಎಷ್ಟು ಮಂದಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ದಾಖಲಾಗುತ್ತಾರೆ ಎನ್ನುವುದನ್ನು ತೋರಿಸುವ ಒಂದು ಮಾಪಕ. ಕರ್ನಾಟಕದಲ್ಲಿ ಈ ಪ್ರಮಾಣ ಶೇಕಡಾ 32ರಷ್ಟು ಇದ್ದು, 2035ರ ವೇಳೆಗೆ ಶೇಕಡಾ 50 ಅನ್ನು ತಲುಪಬೇಕು ಎನ್ನುವುದು ರಾಜ್ಯದ ಗುರಿ.

ಭಾರತ ಇಡೀ ಜಗತ್ತಿನಲ್ಲೇ ಉನ್ನತ ಶಿಕ್ಷಣವನ್ನು ಪಡೆಯಬೇಕಾದ ಅತೀ ಹೆಚ್ಚು ಸಂಖ್ಯೆಯ ಯುವ ಜನತೆಯನ್ನು ಹೊಂದಿರುವುದರಿಂದ ಒಟ್ಟು ದಾಖಲಾತಿ ಅನುಪಾತವನ್ನು ಹೆಚ್ಚಿಸಬೇಕಾದರೆ ದೇಶದಲ್ಲಿ ಮುಂದಿನ 7–10 ವರ್ಷಗಳಲ್ಲಿ 1500 ವಿಶ್ವವಿದ್ಯಾಲಯಗಳ ಅವಶ್ಯಕತೆ ಇರುತ್ತದೆ. ದೇಶದಲ್ಲಿ ಈಗಾಗಲೇ 1050 ರಷ್ಟು ವಿಶ್ವವಿದ್ಯಾಲಯಗಳಿದ್ದು ಈ ಸಂಖ್ಯೆ ಮತ್ತಷ್ಟು ವೃದ್ಧಿಸಬೇಕಾಗಿದೆ. ಆದ್ದರಿಂದ ಹೊಸ ವಿಶ್ವವಿದ್ಯಾಲಯಗಳನ್ನು ತೆರೆದು ಉನ್ನತ ಶಿಕ್ಷಣಾವಕಾಶಗಳನ್ನು ಹೆಚ್ಚಿಸಬೇಕಾಗಿದೆ ಎನ್ನುವುದು ಕರ್ನಾಟಕವೂ ಸೇರಿದಂತೆ ದೇಶದೆಲ್ಲೆಡೆ ಹೊಸ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ನೀಡುತ್ತಿರುವ ಸಮರ್ಥನೆ.

ವಿಶ್ವವಿದ್ಯಾಲಯಗಳ ಸಂಖ್ಯೆಯಲ್ಲಿ ಏರಿಕೆಯಾದಾಗ ವಿದ್ಯಾರ್ಥಿಗಳ ಸಂಖ್ಯೆಯೂ ಏರಿಕೆಯಾಗುವ ಸಾಧ್ಯತೆಯಿದೆ ಎನ್ನುವುದು ಒಂದು ದೃಷ್ಟಿಕೋನ. ಜಿಲ್ಲಾ ಕೇಂದ್ರಗಳಲ್ಲಿ ಉನ್ನತ ಶಿಕ್ಷಣಾವಕಾಶಗಳು ದೊರೆತಾಗ, ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿರುವವರು, ಹೆಣ್ಣು ಮಕ್ಕಳು, ದೊಡ್ಡ–ದೊಡ್ಡ ನಗರಗಳಲ್ಲಿರುವ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿನಿಲಯಗಳು ಅಥವಾ ಖಾಸಗಿ ವಸತಿ ಸೌಕರ್ಯದ ಅನುಕೂಲಗಳನ್ನು ಪಡೆಯಲು ಅವಶ್ಯವಾದ ಆರ್ಥಿಕ ಬೆಂಬಲವಿಲ್ಲದಿರುವವರು ಅಥವಾ ತಮ್ಮ ಊರುಗಳಿಂದ ದಿನವೂ ಪ್ರಯಾಣ ಮಾಡಲು ಸಾರ್ವಜನಿಕ ಸಾರಿಗೆಯ ಸೌಕರ್ಯವಿಲ್ಲದಿರುವವರಿಗೆ ಈ ಅವಕಾಶಗಳನ್ನು ಬಳಸಿಕೊಳ್ಳುವುದು ಸಾಪೇಕ್ಷವಾಗಿ ಸುಲಭವಾಗಬಹುದು. ಯುವ ಜನತೆಯ ಕನಸುಗಳನ್ನು ಸಾಕಾರ ಮಾಡುವ ಶಕ್ತಿ ವಿಶ್ವವಿದ್ಯಾಲಯಗಳಿಗೆ ಇದೆ ಎಂಬ ನಂಬಿಕೆ ಇಂದಿಗೂ ಭದ್ರವಾಗಿರುವುದರಿಂದ, ಅನೇಕರಿಗೆ ಅವರ ವಾಸಸ್ಥಾನಗಳ ಸನಿಹದಲ್ಲೇ ಇಂಥ ಸಂಸ್ಥೆಗಳು ಇರುವುದು ಕೂಡ ಒಂದು ಧನಾತ್ಮಕ ಪ್ರಭಾವವೇ ಎಂದು ಹೇಳಬಹುದು.

ಆದರೆ ಉನ್ನತ ಶಿಕ್ಷಣದ ವಯೋ ಗುಂಪಿನಲ್ಲಿರುವ ಯುವ ಜನತೆ ಕಾಲೇಜುಗಳಿಗೆ ಅಥವಾ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ವಿಭಾಗಗಳಿಗೆ ಪ್ರವೇಶ ಪಡೆದು ಬಿಟ್ಟರೆ ಸಾಕೆ? ಅವರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ, ಅವರಲ್ಲಿ ಹೊಸ

> **ನಮ್ಮ ದೇಶದ ಅನೇಕ ಶೈಕ್ಷಣಿಕ ನಿರ್ಧಾರಗಳಿಗೆ ಮಾದರಿ ಎಂದು ಬಿಂಬಿಸಲ್ಪಡುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020 ವಿಶ್ವವಿದ್ಯಾಲಯಗಳು ಅಥವಾ ಕಾಲೇಜುಗಳನ್ನು ಬಹು–ಶಿಸ್ತೀಯ ಜ್ಞಾನವನ್ನು ನೀಡುವ ಕೇಂದ್ರಗಳನ್ನಾಗಿ ಪರಿವರ್ತಿಸಿ, ಪ್ರತಿ ಕೇಂದ್ರದಲ್ಲೂ ಕನಿಷ್ಠ 3000 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಒದಗಿಸಬೇಕು ಎಂದು ಹೇಳುತ್ತದೆ. ಉನ್ನತ ಶಿಕ್ಷಣ ವಯೋಗುಂಪಿನಲ್ಲಿರುವವರ ದಾಖಲಾತಿಯ ಪ್ರಮಾಣವನ್ನು 2035ರ ವೇಳೆಗೆ ಶೇಕಡಾ 50ಕ್ಕೆ ಏರಿಸಬೇಕೆಂಬ ಆಶಯವನ್ನು ಒಂದೆಡೆ ವ್ಯಕ್ತಪಡಿಸಿದರೆ ಮತ್ತೊಂದೆಡೆ ಗುಣಮಟ್ಟದ ಸಂಶೋಧನೆಗೆ ಪ್ರಾಶಸ್ತ್ಯ ನೀಡಬೇಕು ಎಂದು ಕೂಡ ಶಿಕ್ಷಣ ನೀತಿ ಸೂಚಿಸಿದೆ.**

ಕೌಶಲಗಳನ್ನು ಬೆಳೆಸಿ ಅಥವಾ ಈಗಾಗಲೇ ಇರುವ ಆಸಕ್ತಿ–ಕೌಶಲಗಳನ್ನು ವೃದ್ಧಿಸಿ ಅವರ ಬದುಕನ್ನು ಕಟ್ಟಿಕೊಳ್ಳಲು ಪೂರಕವಾದ ಪರಿಸರವನ್ನು ನಿರ್ಮಾಣ ಮಾಡುವಂಥ ಜವಾಬ್ದಾರಿಯನ್ನು ಈ ಸಂಸ್ಥೆಗಳು ತೆಗೆದುಕೊಳ್ಳಬೇಕಲ್ಲವೇ? ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ನಾವು ಇಂದು ಆಡಬೇಕಾಗಿರುವುದು ಸಂಖ್ಯೆಗಳ ಆಟವಲ್ಲ. ಬದಲಾಗುತ್ತಿರುವ ಉದ್ಯೋಗ ಜಗತ್ತಿಗೆ ನಮ್ಮ ಮಕ್ಕಳನ್ನು ತಯಾರು ಮಾಡಬೇಕಾದಂಥ ಪಠ್ಯಕ್ರಮದ ತಯಾರಿ, ಉದ್ಯೋಗ ಕೇಂದ್ರಿತ ಪ್ರಾಯೋಗಿಕ ತರಬೇತಿ ಹಾಗೂ ಹೊಸ ಉದ್ಯೋಗಗಳ ಬಗ್ಗೆ ಅವರಿಗೆ ಮಾಹಿತಿಯನ್ನು ನೀಡುವುದು, ಎಲ್ಲಕಿಂತ ಮಿಗಿಲಾಗಿ ವಾಸ್ತವ ಬದುಕಿನಲ್ಲಿ ಯಶಸ್ಸನ್ನು ಪಡೆಯಲು ಅವಶ್ಯವಾದ ಕೌಶಲಗಳನ್ನು ಕಲಿಸುವುದು–ಇವುಗಳತ್ತ ಎಷ್ಟು ಉನ್ನತ ಶಿಕ್ಷಣ ಸಂಸ್ಥೆಗಳು ಗಮನಹರಿಸುತ್ತಿವೆ?

ಹೊಸ ವಿಶ್ವವಿದ್ಯಾಲಯಗಳನ್ನು ಆರಂಭಿಸುವುದರಿಂದ ಮೂಲ ಸಂಸ್ಥೆಗಳ ಆಡಳಿತಾತ್ಮಕ ಹೊರೆ ಕಡಿಮೆಯಾಗುತ್ತದೆ. ಆದ್ದರಿಂದ ಇರುವ ಕಾಲೇಜುಗಳು ಮತ್ತು ವಿಭಾಗಗಳತ್ತ ಹೆಚ್ಚು ಗಮನಹರಿಸಿ ಅವುಗಳ ಬಲವರ್ಧನೆ ಮಾಡಬಹುದು ಎನ್ನುವ ಒಂದು ವಾದವೂ ಇದೆ. ಈಗ ಹೊಸದಾಗಿ ಸ್ಥಾಪನೆಯಾಗಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಬೀದರ್‌ಗೆ 140, ಬಾಗಲಕೋಟೆಗೆ 71, ಹಾಸನಕ್ಕೆ 36, ಕೊಡಗಿಗೆ 24, ಕೊಪ್ಪಳಕ್ಕೆ 40, ಚಾಮರಾಜನಗರಕ್ಕೆ 18 ಮತ್ತು ಮಂಡ್ಯಗೆ ಜಿಲ್ಲೆಯಲ್ಲಿರುವ ಎಲ್ಲ ಪ್ರಥಮ ದರ್ಜೆ ಕಾಲೇಜುಗಳು ವರ್ಗಾವಣೆಯಾಗಲಿವೆ. ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು, ಶೈಕ್ಷಣಿಕ ಮೂಲಸೌಕರ್ಯಗಳು ಹಾಗೂ ಇತರ ವಿಚಾರಗಳ ನಿರ್ವಹಣೆಯ ಪ್ರಕ್ರಿಯೆಗೆ ಏನಾದರೂ ಮಾನದಂಡಗಳು–ಮಾದರಿಗಳು ಇವೆಯೇ? ಆರು ನೂರಕ್ಕೂ ಹೆಚ್ಚಿನ ಸಂಖ್ಯೆಯ ಕಾಲೇಜುಗಳನ್ನು ತನ್ನ ವ್ಯಾಪ್ತಿಯಲ್ಲಿ ಹೊಂದಿದ್ದ ಬೆಂಗಳೂರು ವಿಶ್ವವಿದ್ಯಾನಿಲಯದ ತ್ರಿವಿಭಜನೆ ತಂದ ಧನಾತ್ಮಕ ಮತ್ತು ನಕಾರಾತ್ಮಕ ಬದಲಾವಣೆಗಳ ಬಗ್ಗೆ ಸೂಕ್ಷ್ಮ ಅಧ್ಯಯನಗಳನ್ನು ಕೈಗೊಳ್ಳಲಾಗಿದೆಯೇ? ಹಾಗೆ ಆಗಿದ್ದರೆ ಅವುಗಳ ವರದಿಗಳು ಸಾರ್ವಜನಿಕ ಮತ್ತು ಶೈಕ್ಷಣಿಕ ವಲಯಗಳಲ್ಲಿ ಚರ್ಚೆಗಳಿಗೆ ಒಳಗಾಗಿವೆಯೇ? ಈ ಪ್ರಶ್ನೆಗಳಿಗೆ ಉತ್ತರಗಳು ಎಲ್ಲಿ ದೊರೆಯುತ್ತದೆ.

ರಾಜ್ಯದ ಬಹುತೇಕ ವಿಶ್ವವಿದ್ಯಾನಿಲಯಗಳ ಬಹುತೇಕ ವಿಭಾಗಗಳಲ್ಲಿ ಮತ್ತು ಬಹುತೇಕ ಕಾಲೇಜುಗಳಲ್ಲಿ ಇಂದು ಖಾಯಂ ಅಧ್ಯಾಪಕರ ತೀವ್ರ ಕೊರತೆ ಎದ್ದು ಕಾಣುತ್ತಿದೆ. ಅನೇಕ ಸಂಸ್ಥೆಗಳಲ್ಲಿ ಎಲ್ಲ ಅಧ್ಯಾಪಕರೂ ಅತಿಥಿ ಉಪನ್ಯಾಸಕರೇ ಆಗಿದ್ದು ಬಹು ವರ್ಷಗಳಿಂದ ನೇಮಕಾತಿಗಳೇ ಆಗಿಲ್ಲ. ಇದಕ್ಕೆ ಕೋವಿಡ್‌ನಿಂದ ಹಿಡಿದು ಆರ್ಥಿಕ ಮುಗ್ಗಟ್ಟಿನವರೆಗೆ ನಾನಾ ಕಾರಣಗಳನ್ನು ನೀಡಲಾಗುತ್ತಿದೆ. ಆದರೆ ಹೊಸ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದಾಗ ಸೃಷ್ಟಿಯಾಗುವ ಆಡಳಿತಾತ್ಮಕ ಹುದ್ದೆಗಳಿಗೆ ಮಾತ್ರ ಇದು ಅನ್ವಯಿಸುವುದಿಲ್ಲ. ಏಕೆಂದರೆ ಈ ಸಂಸ್ಥೆಗಳ ಆಡಳಿತ ನಡೆಯಬೇಕಲ್ಲವೇ? ಈಗ ರಾಜ್ಯದಲ್ಲಿ ಸ್ಥಾಪನೆಯಾಗಲಿರುವ ಎಂಟು ಹೊಸ ವಿಶ್ವವಿದ್ಯಾಲಯಗಳಲ್ಲಿ(ಮಂಡ್ಯ ಹೊರತುಪಡಿಸಿ), ಕುಲಪತಿ, ಕುಲಸಚಿವ (ಆಡಳಿತ), ಕುಲಸಚಿವ (ಪರೀಕ್ಷಾಂಗ) ಮತ್ತು ಹಣಕಾಸು ಅಧಿಕಾರಿ– ಈ ನಾಲ್ಕು ಹುದ್ದೆಗಳಂತೂ ಸೃಷ್ಟಿಯಾಗಲೇಬೇಕಲ್ಲ? ಸಮಯಕ್ಕೆ ಸರಿಯಾಗಿ ವೇತನವನ್ನು ನೀಡುವುದರಿಂದ ಹಿಡಿದು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಪನ್ಮೂಲಗಳನ್ನು ತೊಡಗಿಸುವವರೆಗೆ ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ತೀವ್ರ ಸ್ವರೂಪದ ಆರ್ಥಿಕ ಹಿಂಬೀಳಿಕೆಯಾಗಿದೆ. ಈ ಪರಿಸ್ಥಿತಿಯಲ್ಲಿ ಶಿಕ್ಷಣದ ಗುಣಮಟ್ಟವನ್ನು ಕಾಪಾಡುವುದು ಹೇಗೆ ಎಂಬ ಪ್ರಶ್ನೆಗೆ ಉತ್ತರವಿದೆಯೇ?

ನಮ್ಮ ದೇಶದ ಅನೇಕ ಶೈಕ್ಷಣಿಕ ನಿರ್ಧಾರಗಳಿಗೆ ಮಾದರಿ ಎಂದು ಬಿಂಬಿಸಲ್ಪಡುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿ 2020 ವಿಶ್ವವಿದ್ಯಾಲಯಗಳು ಅಥವಾ ಕಾಲೇಜುಗಳನ್ನು ಬಹು– ಶಿಸ್ತೀಯ ಜ್ಞಾನವನ್ನು ನೀಡುವ ಕೇಂದ್ರಗಳನ್ನಾಗಿ ಪರಿವರ್ತಿಸಿ, ಪ್ರತಿ ಕೇಂದ್ರದಲ್ಲೂ ಕನಿಷ್ಠ 3000 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಒದಗಿಸಬೇಕು ಎಂದು ಹೇಳುತ್ತದೆ. ಉನ್ನತ ಶಿಕ್ಷಣ ವಯೋಗುಂಪಿನಲ್ಲಿರುವವರ ದಾಖಲಾತಿಯ ಪ್ರಮಾಣವನ್ನು 2035ರ ವೇಳೆಗೆ ಶೇಕಡಾ 50ಕ್ಕೆ ಏರಿಸಬೇಕೆಂಬ ಆಶಯವನ್ನು ಒಂದೆಡೆ ವ್ಯಕ್ತಪಡಿಸಿದರೆ ಮತ್ತೊಂದೆಡೆ ಗುಣಮಟ್ಟದ ಸಂಶೋಧನೆಗೆ ಪ್ರಾಶಸ್ತ್ಯ ನೀಡಬೇಕು ಎಂದು ಕೂಡ ಶಿಕ್ಷಣ ನೀತಿ ಸೂಚಿಸಿದೆ. ಆದರೆ ಈ ಗುರಿಗಳ ಸಾಧನೆ ಸೂಕ್ತ ತಯಾರಿಗಳನ್ನು ಮಾಡಿಕೊಳ್ಳದೆ, ಅರಿತ ಅನುಭವಿ ಶಿಕ್ಷಣ ತಜ್ಞರನ್ನು ಒಳಗೊಳ್ಳದೆ, ಆಯಾ ಪ್ರದೇಶಗಳ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ವಾಸ್ತವಗಳನ್ನು ಗಣನೆಗೆ ತೆಗೆದುಕೊಳ್ಳದೆ ಕೇವಲ ವಿಶ್ವವಿದ್ಯಾಲಯಗಳ ಸಂಖ್ಯೆಯನ್ನು ಹೆಚ್ಚಿಸುವುದರಿಂದ ಸಾಧ್ಯವಿಲ್ಲ ಎಂಬುದನ್ನು ಮನ ಗಾಣದಿದ್ದರೆ ಉನ್ನತ ಶಿಕ್ಷಣದ ಗುಣಮಟ್ಟದಲ್ಲಿ ಯಾಗಲೀ, ಹಾಲಿ ಈಗಾಗಲೇ ಇರುವ ಪರಿಸ್ಥಿಯಲ್ಲಿಯಾಗಲೀ ಗಮನಾರ್ಹವಾದ ಯಾವ ಬದಲಾವಣೆಯೂ ಕಂಡು ಬರುವುದಿಲ್ಲ.

ನ.20, 21ರಂದು ಟಿಪ್ಪು ನಿಜಕನಸುಗಳು ನಾಟಕ ಪ್ರದರ್ಶನ

● ಶೇ.70ರಷ್ಟು ಟಿಕೆಟ್ ಮಾರಾಟ ● ಪೂರ್ಣ ಪ್ರಮಾಣದಲ್ಲಿ ಕಲಾವಿದರಿಗೆ ತರಬೇತಿ

ಮೈಸೂರು, ನ.16(ಜಿಎ)–ಇಡೀ ರಾಜ್ಯವೇ ಕುತೂಹಲದಿಂದ ಕಾದು ಕುಳಿತಿರುವ 'ಟಿಪ್ಪು ನಿಜಕನಸುಗಳು' ನಾಟಕಕ್ಕೆ ಈಗಾಗಲೇ ಶೇ.70 ರಷ್ಟು ಟಿಕೆಟ್‌ಗಳು ಮಾರಾಟವಾಗಿದ್ದು, ನಾಟಕದ ತರಬೇತಿ ಭರದಿಂದ ಸಾಗಿದೆ.

ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಬರೆದಿರುವ 'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಇಡೀ ರಾಜ್ಯಾದ್ಯಂತ ಸುದ್ದಿಯಾಗಿದ್ದು, ನ.20 ರಂದು ನಡೆಯುವ ನಾಟಕ ಪ್ರದರ್ಶನ ಇನ್ನೂ ಕುತೂಹಲ ಮೂಡಿಸಿದೆ. ಈ ನಾಟಕ ತರಬೇತಿಯಲ್ಲಿ ಕಲಾವಿದರ ತಂಡ ಸಂಪೂರ್ಣ ತೊಡಗಿಸಿಕೊಂಡಿದೆ.

ನಾಟಕಕ್ಕೆ ರಂಗಾಯಣದ ಹೊಸ 30 ಕಲಾವಿದರು ಆಯ್ಕೆಯಾಗಿದ್ದು, ಎಲ್ಲರೂ ತಮ್ಮ ತಮ್ಮ ಪಾತ್ರಗಳನ್ನು ಕರಗತ ಮಾಡಿಕೊಳ್ಳುತ್ತಿದ್ದಾರೆ. ಅದರಲ್ಲಿ ಟಿಪ್ಪು, ಹೈದರಾಲಿ, ದಿವಾನ್ ಪೂರ್ಣಯ್ಯ, ಮೀರ್ ಸಾದಿಕ್, ಲಾರ್ಡ್ ವೆಲ್ಲೆಸ್ಲಿ, ಟಿಪ್ಪು ಪತ್ನಿ, ಕೊಡವರು, ಮರಾಠರು ಸೇರಿದಂತೆ 25 ಕಲಾವಿದರು ಮುಖ್ಯ ಭೂಮಿಕೆಯಲ್ಲಿ ಕಾಣಿಸಿಕೊಳ್ಳಲಿದ್ದು, ಐವರು ಸಂಗೀತ, ಬೆಳಕು, ಬಣ್ಣ, ರಂಗಸಜ್ಜಿಕೆ ಸೇರಿದಂತೆ ವಿವಿಧ ವಿಭಾಗಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ.

ಪೂರ್ವ ಮಾನಸಿಕ ತಯಾರಿಗಾಗಿ ಎಲ್ಲಾ ಕಲಾವಿದರನ್ನು ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಹೋಗಿ ಟಿಪ್ಪು ಸುಲ್ತಾನ್ ಕುರಿತು ಕೃತಿಯಲ್ಲಿರುವ ಇಂಚಿಂಚು ಮಾಹಿತಿಯನ್ನು ದಾಖಲೆ ಸಮೇತ ತೋರಿಸಿದ್ದಾರೆ. ಅದರಲ್ಲೂ ಟಿಪ್ಪು ಪಾತ್ರಧಾರಿಯಲ್ಲಿ ಉದ್ಭವಿಸಿದ ಟಿಪ್ಪು ಬಗೆಗಿನ ಅನೇಕ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾರೆ.

ನಾಟಕಕ್ಕಾಗಿ ಪೂರ್ವ ಸಿದ್ಧತೆಯನ್ನು ಆರಂಭಿಸಿರುವ ಕಲಾವಿದರು ಬೆಳಗ್ಗೆ 9 ಗಂಟೆಯಿಂದ ರಾತ್ರಿ 10 ಗಂಟೆವರೆಗೂ ಎಲ್ಲಾ ವಿಭಾಗಗಳಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಪ್ರತ್ಯೇಕ ಪ್ರಚಾರ ಕಮಿಟಿ ನೇಮಿಸಿದ್ದು, ಅವರು ಜನರ ಬಳಿ ತೆರಳಿ ನಾಟಕದ ವಿಚಾರವಾಗಿ ತಿಳಿಸುತ್ತಿದ್ದಾರೆ. ಹಾಗೇ ಮೈಸೂರು ಹೊರತುಪಡಿಸಿ ಬೇರೆ ಜಿಲ್ಲೆಗಳಿಂದಲೂ ರಂಗಾಸಕ್ತರು ಈ ನಾಟಕ ನೋಡಲು ಮುಂದಾಗಿದ್ದು, ಈ ಹಿನ್ನೆಲೆಯಲ್ಲಿ ಆನ್‌ಲೈನ್‌ನಲ್ಲಿ ಟಿಕೆಟ್ ಮಾರಾಟ ವ್ಯವಸ್ಥೆಯ ಬಗ್ಗೆಯೂ ಮೇಲ್ವಿಚಾರಣೆ ನಡೆಸುತ್ತಿದ್ದಾರೆ. ಈಗಾಗಲೇ ನ.20, 21ರಂದು ಪ್ರದರ್ಶನಗೊಳ್ಳಲಿರುವ ನಾಟಕಕ್ಕೆ ಶೇ.70 ರಷ್ಟು ಟಿಕೆಟ್ ಬಿಕರಿಯಾಗಿವೆ.



ಸತ್ಯದ ಅನಾವರಣ: ಎಲ್ಲಾ ಕಲಾವಿದರು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದ್ದಾರೆ. ಹೊರಗಿನ ಕೆಲವರು ನೀಡುವ ಹೇಳಿಕೆ ನಮಗೆ ಸಂಬಂಧವಿಲ್ಲ. ನಾಟಕ ನೋಡಿ ವಿಮರ್ಶೆ ಮಾಡಿಕೊಳ್ಳಲಿ. ನಮಗೆ ನಾಟಕವೇ ಮುಖ್ಯ. ಈ ನಾಟಕ ಕಟ್ಟುವ ಮೂಲಕ ಸತ್ಯದ ಅನಾವರಣ ಮಾಡಲಿದ್ದೇವೆ ಎಂದು ರಂಗಾಯಣ ನಿರ್ದೇಶಕ ಹಾಗೂ 'ಟಿಪ್ಪು ನಿಜಕನಸುಗಳು' ನಾಟಕದ ನಿರ್ದೇಶಕರು ಆದ ಅಡ್ಡಂಡ ಸಿ. ಕಾರ್ಯಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾಟಕಕ್ಕಾಗಿ ಆಯ್ಕೆಗೊಂಡಿರುವ ಎಲ್ಲರೂ ಹೊಸ ಕಲಾವಿದರಾಗಿದ್ದು, ಅವರಿಗೆ ಪ್ರತಿ ಒಂದು ಅಂಶವನ್ನು ಕಲಿಸಿಕೊಂಡು ಹೋಗಲಾಗುತ್ತಿದೆ. ಇದರೊಟ್ಟಿಗೆ ಹಣಕಾಸಿನ ಕೊರತೆಯನ್ನು ನೀಗಿಸಿಕೊಂಡು ಹೋಗುತ್ತಿರುವುದು ದೊಡ್ಡ ಸವಾಲಿನ ಕೆಲಸವಾಗಿದೆ. ಈ ನಾಟಕವು ರಂಗಾಯಣದ ಭೂಮಿಗೀತದಲ್ಲಿ ಪ್ರದರ್ಶನಗೊಳ್ಳಲಿದ್ದು, ಈಗಾಗಲೇ ಖ್ಯಾತ ರಂಗ ವಿನ್ಯಾಸಕಾರರಾದ ಶಶಿಧರ್ ಅಡಪ ಬಹುತೇಕ ರಂಗವಿನ್ಯಾಸ ಕಾರ್ಯ ಮುಗಿಸಿದ್ದಾರೆ. ಭೂಮಿಗೀತದಲ್ಲಿ 210 ಆಸನ ವ್ಯವಸ್ಥೆ ಇದ್ದು, ಈ ಆಸನಗಳು ಪೂರ್ಣಗೊಂಡ ನಂತರ ಯಾರೇ ಬಂದರೂ ಅವರಿಗೆ ವಿಶೇಷ ಆಸನ ಕಲ್ಪಿಸಲು ಸಾಧ್ಯವಿಲ್ಲ ಎಂದರು.

6 ಗಂಟೆಗೆ ಪ್ರದರ್ಶನ : ಸಾಮಾನ್ಯವಾಗಿ ರಂಗಾಯಣದಲ್ಲಿ 6.30ಕ್ಕೆ ನಾಟಕಗಳು ಆರಂಭವಾಗುತ್ತವೆ. ಆದರೆ, ಈ ನಾಟಕ ಸಂಜೆ 6 ಗಂಟೆಗೆ ಪ್ರದರ್ಶನ ಆರಂಭವಾಗಲಿದೆ. ನಾಟಕವು ಮೂರು ಗಂಟೆ ಇಪ್ಪತ್ತು ನಿಮಿಷ ಅವಧಿಯನ್ನು ಹೊಂದಿದ್ದು, 2 ಗಂಟೆ ನಂತರ 10 ನಿಮಿಷ ಬ್ರೇಕ್ ಇರಲಿದ್ದು, ಈ ಸಂದರ್ಭದಲ್ಲಿ ನೀರು, ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ. ನಾಟಕಕ್ಕೆ ಬರುವವರು ಕಡ್ಡಾಯವಾಗಿ 10 ನಿಮಿಷ ಮುಂಚಿತವಾಗಿ ಬರಬೇಕು. ಆನ್‌ಲೈನ್‌ನಲ್ಲಿ ಟಿಕೆಟ್ ಖರೀದಿಗೆ www.rangayana.org ಸಂಪರ್ಕಿಸಬಹುದು ಎಂದು ತಿಳಿಸಿದರು.

> **“ ನಾಟಕದಲ್ಲಿ ಬರುವ ಕೆಲ ಸನ್ನಿವೇಶವನ್ನು ಕೇಳಿದಾಗ ಆರಂಭದಲ್ಲಿ ಕಷ್ಟವಾಯಿತು. ಆದರೆ, ಈಗ ಟಿಪ್ಪು ಪಾತ್ರಕ್ಕಾಗಿ ನನ್ನ ಮನಸ್ಸನ್ನು ಹದ ಮಾಡಿಕೊಂಡಿದ್ದೇನೆ. ನಿರ್ದೇಶಕರು ಅವರಿಗೆ ಬೇಕಾದ ರೀತಿಯಲ್ಲಿ ಕಲಾವಿದರನ್ನು ರೂಪಿಸುತ್ತಿದ್ದಾರೆ. ನನಗೂ ಗಂಟಲಿನ ಓಕಲ್‌ನಲ್ಲಿ ಸಮಸ್ಯೆ ಉಂಟಾಗಿ ವೈದ್ಯರು ಹೆಚ್ಚು ಧ್ವನಿ ಏರಿಸಬಾರದು ಎಂದು ಸಲಹೆ ನೀಡಿದ್ದರು. ವೈದ್ಯರ ಸಲಹೆ ಪಡೆದು ನಾಟಕ ತರಬೇತಿಯಲ್ಲಿ ಭಾಗವಹಿಸಿದ್ದೇನೆ. ಪ್ರೇಕ್ಷಕರು ಯಾವ ರೀತಿ ಸ್ವೀಕರಿಸುತ್ತಾರೋ ಕಾದು ನೋಡಬೇಕಿದೆ.**
> –ಸಚಿನ್ ಮಿತ್ರ, ಟಿಪ್ಪು ಪಾತ್ರಧಾರಿ



> **'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಎರಡನೇ ಮುದ್ರಣ**
> ಸಾಮಾನ್ಯವಾಗಿ ನಾಟಕ ಕೃತಿಗಳು ಮಾರಾಟವಾಗುವುದು ಕಡಿಮೆ. ಆದರೆ, 'ಟಿಪ್ಪು ನಿಜಕನಸುಗಳು' ಕೃತಿ ಬಿಡುಗಡೆಯಾದ ದಿನವೇ 600ಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿದ್ದು, ಅನೇಕರು ನನ್ನ ಕಚೇರಿಗೆ ಬಂದು ಖರೀದಿ ಮಾಡಿದ್ದಾರೆ. ಮರು ದಿನವೇ ಅಯೋಧ್ಯ ಪ್ರಕಾಶನದವರು ಎರಡನೇ ಮುದ್ರಣಕ್ಕೆ ಕೃತಿಯನ್ನು ಕಳುಹಿಸಿದ್ದಾರೆ. ಒಂದು ರಂಗಕೃತಿ ದೊಡ್ಡ ಮಟ್ಟದಲ್ಲಿ ಪ್ರಚಾರವಾಗಿದ್ದು, ಇದೊಂದು ರಂಗ ಭೂಮಿಯ ಹೆಗ್ಗಳಿಕೆಯಾಗಿದೆ. ಈ ರೀತಿ ಬೆಂಬಲ ಸಿಗುತ್ತಿರುವುದು ಸ್ವಾಗತಾರ್ಹವಾಗಿದ್ದು, ನನಗೆ ಸಂತಸವಾಗಿದೆ.
> –ಅಡ್ಡಂಡ ಸಿ. ಕಾರ್ಯಪ್ಪ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟ್ ಮಾರಾಟಕ್ಕಿದೆ
60x40 ದಟ್ಟಗಳ್ಳಿ ಆದಿತ್ಯ ಸರ್ಕಲ್ ಹತ್ತಿರ. ಸೈಟು ಹಳೆ ಮನೆ, ಹೊಸ ಮನೆ ಮಾರುವವರು, ಕೊಳ್ಳುವವರು ಸಂಪರ್ಕಿಸಿ:
9945042875

ಬ್ರಾಹ್ಮಣ ವರ ಬೇಕಾಗಿದ್ದಾರೆ
48 ವರ್ಷದ ಸುಂದರ ಮಹಿಳೆಗೆ (ವಿಧವೆ) ಸೂಕ್ತ ವರ ಬೇಕಾಗಿದೆ. ಹಣಕಾಸಿನಲ್ಲಿ ಚೆನ್ನಾಗಿರಬೇಕು. ಸರ್ಕಾರಿ ಕೆಲಸದಲ್ಲಿ ಇರುವವರು ಮತ್ತು ನಿವೃತ್ತಿಹೊಂದಿರುವವರು ಆಸಕ್ತಿ ಇದ್ದರೆ ಸಂಪರ್ಕಿಸಿ.
(ಸಸ್ಯಹಾರಿಗಳಾಗಿದ್ದರೆ ಸಂಪರ್ಕಿಸಿ)
8951189086

FOR RENT
COMMERCIAL SPACE
FOR RENT 2500sq ft.
2nd & 3rd Floor, with Lift Facility suitable for Bank Office, Clinic, Labs
Near Gopala Gowda Hospital Nazarbad - Bannur Road
90087 01144

ಬೇಕಾಗಿದ್ದಾರೆ
ಮಹಿಳಾ ಸಿದ್ಧ ಉಡುಪು ಶೋರೂಂನಲ್ಲಿ ಕೆಲಸ ಮಾಡಲು ಅನುಭವವಿರುವ
ಸೇಲ್ಸ್ ಗರ್ಲ್ಸ್
ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ಸಂಪರ್ಕಿಸಿ: ಹವೇಲಿ ದಿವಾಸ್ ಧನ್ವಂತ್ರಿ ರಸ್ತೆ, ಮೈಸೂರು
99001 96667

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಮಂಟಪ ಮನೆ

ನಮ್ಮಲ್ಲಿ ಬೀಟೆ, ಹಲಸು ಮರಗಳಿಂದ ತಯಾರಾದ ಮಂದಾಸನ, ಪೂಜಾ ಮಂಟಪಗಳು ಸುಲಭ ಕಂತುಗಳಲ್ಲಿ ದೊರೆಯುತ್ತದೆ. ಶ್ರೀನಗರ, ಮೈಸೂರು
9448207634
9036742526

ಬೇಕಾಗಿದ್ದಾರೆ
ಹೋಟೆಲ್ ಕೆಲಸಕ್ಕೆ ಕುಕ್ ಬೇಕಾಗಿದ್ದಾರೆ. ತಂದೂರಿ ಹಾಗೂ ಚೈನೀಸ್ ಕುಕ್
ALLROUND COOK
6366725494, 9901618261

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ ಸೌಂಡ್ ಸಿಸ್ಟಮ್ ಮತ್ತು ಲೈಟಿಂಗ್ ಕಂಪನಿಯಲ್ಲಿ ಕೆಲಸ ಮಾಡಲು ಈ ಕೆಳಕಂಡ ಅನುಭವವಿರುವ ಕೆಲಸಗಾರರು ಬೇಕಾಗಿದ್ದಾರೆ. ಡ್ರೈವರ್‌ಗಳು (HMV ಬ್ಯಾಡ್ಜ್) 15,000/–, ಹೆಲ್ಪರ್‌ಗಳು 12,000/–
(ಉಚಿತ ವಸತಿ ವ್ಯವಸ್ಥೆ ಇರುತ್ತದೆ.)
9845026220

ಹೋಟಲ್ ಬಾಡಿಗೆಗೆ ಇದೆ
Opposite to Suyog Hospital, E & F Block, Ramakrishnanagar, Near Sai Baba Temple.
9900374603

※ ಕೆಲಸವಿದೆ ※
ಪುರುಷರ ಬಟ್ಟೆ ಶೋರೂಂ ನಲ್ಲಿ ಕೆಲಸ

ಸಂಬಳ: 8000 ರಿಂದ 13000/-
ಸೇಲ್ಸ್ ಎಕ್ಸ್ ಕ್ಯೂಟೀವ್
ಆಕರ್ಷಕ INCENTIVE
ಸಂಪರ್ಕಿಸಿ: 63616 54736

WANTED
Supervisor, Room Boys, Waiters, Asst. Waiters, KT/Asst., Receptionist (Male/Female)
Full time
Attractive Salary, PF & ESI with food and accommodation
Contact: Parklane Hotel
2720, Harsha Road, Mysore - 01

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven
Doorstep ಸರ್ವಿಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

AMAZE


SUNZONE SOLAR SYSTEM
VM Double Road, Kuvempunagar, Mysuru
9845175443

HOUSE FOR RENT
2BHK Independent House (South Facing) J.P.Nagar 2nd Stage, Near JSS Public School,. (Vegetarian / Salaried Person Preferred)
Contact:
9972709102

ಶ್ರೀ ಗೌರಿಶಂಕರ (S.G.S) ಟ್ರಾವೆಲ್ಸ್
10–12–22 (4 ದಿನ) ಶಿರಡಿ, ಬಾಂಬೆ, ತ್ರ್ಯಂಬಕೇಶ್ವರ, ಘೃಷ್ಣೇಶ್ವರ, ಭೀಮಶಂಕರ ಇತ್ಯಾದಿ
18–12–22 (1 ದಿನ) : ಕೋಟಿಲಿಂಗ, ಘಾಟಿ ಸುಬ್ರಹ್ಮಣ್ಯ, ಚಿಕ್ಕ ತಿರುಪತಿ
24–12–22 (6 ದಿನ) : ಗುರುವಾಯೂರು, ಮುನ್ನಾರ್ ತ್ರಿವೇಂಡಂ, ಕೊಚ್ಚಿನ್ ಇತ್ಯಾದಿ
ವಿಮಾನ / ಬಸ್ / ರೂಂ / ಊಟ
9620002114

ಬೇಕಾಗಿದ್ದಾರೆ
ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಗೆ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವಯಸ್ಸಿನ ಮಿತಿ: 25 ರಿಂದ 45, ವಿದ್ಯಾರ್ಹತೆ: SSLC Pass ಮೇಲ್ಪಟ್ಟು, ಸಂಬಳ: Rs. 17,500/-, ESI, PF, EL, NFH, Bonus, Insurance ದೊರೆಯುತ್ತದೆ. 3 ಜೊತೆ ಸಮವಸ್ತ್ರ ಉಚಿತ. ವಿಳಾಸ: ಪ್ರೈವೇಟ್ ಐ ಪ್ರೈವೇಟ್ ಲಿಮಿಟೆಡ್, ಸರಸ್ವತಿಪುರಂ ಕನ್ವೆನ್ಷನ್ ಹಾಲ್ ಹತ್ತಿರ, ಹೂಟಗಳ್ಳಿ, ಮೈಸೂರು.
9538014456 / 9538886654

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

ಕೇರಳ ಶ್ರೀ ಆದಿ ಶಕ್ತಿ ಜ್ಯೋತಿಷ್ಯಾಲಯ
ಪಂಡಿತ್ : ಶಿವಪ್ರಸಾದ್ ತಂತ್ರಿ
ಮೊ.: 9686525894
ನಿಮ್ಮ ಜೀವನದ ಯಾವುದೇ ರೀತಿಯ, ದಾಂಪತ್ಯ ಸಮಸ್ಯೆ, ಲೈಂಗಿಕ, ಶತ್ರುಗಳ ಕಾಟ, ಮನೆಯಲ್ಲಿ ಅಶಾಂತಿ, ಜಾಗದ ತೊಂದರೆ ಇನ್ನೂ ಯಾವುದೇ ರೀತಿಯ ಕಠಿಣ ಸಮಸ್ಯೆಗಳೇನೆ ಇದ್ದರೂ ಕೇರಳದ ಶಾಸ್ತ್ರೋಕ್ತ ಪದ್ಧತಿಯಿಂದ ಬಲಿಷ್ಠ ದೇವ ದೈವಗಳ ಮಂತ್ರ ಶಕ್ತಿಗಳಿಂದ ಕೇವಲ 2 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮನೆ ವಿಳಾಸ: ಕುಮಾರ್ ಮೆಡಿಕಲ್ ಪಂಚಮಂತ್ರರೋಡ್, ಕುವೆಂಪುನಗರ, ಮೈಸೂರು.

ಹೊಸ ಚೀಟಿಗಳ ಪ್ರಾರಂಭ
ಸೀಬಿ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸೈಟ್ ಮಾರಾಟಕ್ಕಿದೆ
60x40 ಜೆ.ಪಿ.ನಗರ ಪಕ್ಕ ರೈಲ್ವೆ ಲೇ ಔಟ್, ಗೊರೂರು, ಮೈಸೂರು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Basavanna .R
9886192649

ಮನೆ ಬಾಡಿಗೆಗೆ
(ಶುದ್ಧ ಸಸ್ಯಹಾರಿಗಳಿಗೆ ಮಾತ್ರ)
ಕುವೆಂಪುನಗರದ ಅರವಿಂದ ನಗರದಲ್ಲಿ 30x20 ಅಳತೆಯ ಉತ್ತರ ಬಾಗಿಲು ಇರುವ ಮನೆಯು ಬಾಡಿಗೆಗೆ ಸಿದ್ಧವಿದೆ.
ಆಸಕ್ತಿಯುಳ್ಳವರು ಸಂಪರ್ಕಿಸಬೇಕಾದ ನಂಬರ್
9980674001

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ:
7676844160
6361056646

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

LOST
Syeda Nusrath Fathima, No. 114 LIG-2, 1st Stage, Kalyanagiri, Mysore-570 019, I have lost my sale deed of property No. 114, LIG-2, 1st Stage, Kalyanagiri, Mysore.
Finders please contact:
Mob: 9148768893

Change of Name
I, Nirupama, residing at Door No. 209 (First Floor), 2nd Main, 9th Cross, "M" Block, Kuvempunagar, Chamaraja Mohalla, Mysore, have changed my name as Nirupama Rao, on my own free will, in front of Notary A.K. Manjunatha on 12-11-2022. I hereby declare that I shall at all times hereafter in all records, deeds and writings and in all proceedings, dealings and transactions, private as well as upon all occasions whatsoever use and sign the name of Nirupama Rao.
Sd/- Nirupama Rao.

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (VTL). ವಿದ್ಯಾರ್ಹತೆ: 5ನೇ ತರಗತಿಯಿಂದ 2nd PUC.
7090309148, 8105651601
ಹೆಬ್ಬಾಳು ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: ITI (Fitter, Turner, Welder, Machinist, Any Trade) (AAL).
7019380847, 7090309148

ತಕ್ಷಣ ಬೇಕಾಗಿದ್ದಾರೆ
ವೆಜ್ ಹೋಟೆಲ್ ಕೆಲಸಕ್ಕೆ ಶುದ್ಧ ಬ್ರಾಹ್ಮಣ ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಪ್ಲೇಯರ್ಸ್ ಹಾಗೂ ಕೌಂಟರ್ ಬಾಯ್ ಹುಡುಗರು ತಕ್ಷಣ ಬೇಕಾಗಿದ್ದಾರೆ. ನಿಪುಣ ದೋಸೆ ಪರಿಣಿತರು ತಕ್ಷಣ ಬೇಕಾಗಿದ್ದಾರೆ. ರೂಂ ವ್ಯವಸ್ಥೆ ಇದೆ. ಸಂಪರ್ಕಿಸಿ:
7795518038 / 8884208814

ಬೇಕಾಗಿದ್ದಾರೆ
ದಿನಸಿ ಅಂಗಡಿಗೆ ಹುಡುಗರು
ವಿಳಾಸ: ಬಾಲಕೃಷ್ಣ ರೈಸ್ ಕಾರ್ನರ್, #23 ಎಫ್, 3ನೇ ಹಂತ, ಇಂಡಸ್ಟ್ರಿಯಲ್ ಸಬರ್ಬ್, ದಕ್ಷಿಣ ಮೈಸೂರು – 570008
9986756866

ಸುವರ್ಣಾವಕಾಶ
ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ / ಯುವತಿಯರಿಗೆ ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮನೆಯಲ್ಲಿಯೇ ಕುಳಿತು ಫಾರಂನಲ್ಲಿ ಅಂಕಿ ತುಂಬುವ ಹಾಗೂ ಬುಕ್ ಬರೆಯುವ ಕೆಲಸ ತಿಂಗಳಿಗೆ 16000 ರಿಂದ 18000 ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ). ಓದಲು, ಬರೆಯಲು ಬರದಿರುವವರಿಗೆ ಪ್ಯಾಕಿಂಗ್ ಕೆಲಸ ಕೂಡ ಲಭ್ಯ
Mob: 9148733213

ಭೋಗ್ಯ / ಬಾಡಿಗೆಗೆ
2 BHK - W/F, 1st Floor
1 BHK - S/F, 1st Floor,
ಕುವೆಂಪುನಗರ, ಮೈಸೂರು. ಸಸ್ಯಹಾರಿಗಳಿಗೆ ಮಾತ್ರ ಮಧ್ಯವರ್ತಿಗಳು ಕ್ಷಮಿಸಿ.
9686576399, 8861988159

FOR RENT
Office space / shop for rent
15x40
Near Vijaya Bank Circle East of Vishwa Manava Double Road, Kuvempunagar, Mysore.
8105751169, 9620607138

SB GOLD COMPANY
ಗಿರವಿ ಚಿನ್ನಾಭರಣ ಖರೀದಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ–(T&C)
ಒಂದು ಗ್ರಾಂ ಚಿನ್ನಕ್ಕೆ 5100
9964522225

SITE FOR SALE
40x60 South Face site sale at Ravishankar Layout
(ಕ್ರಿಸ್ಟ್ ಪಬ್ಲಿಕ್ ಸ್ಕೂಲ್ ಹಿಂಭಾಗ).
Mob: 9880273834

ಮನೆ ಭೋಗ್ಯಕ್ಕೆ ಇದೆ
30x40 ಅಳತೆಯ 2 ಬೆಡ್ ರೂಂ ಇರುವಂತ ಕೆಳ ಹಂತಸ್ತಿನ (Ground Floor) ಮನೆ ಸೋಲಾರ್ ಸೌಲಭ್ಯ ವಿರುತ್ತದೆ. 10ನೇ ಮುಖ್ಯ ರಸ್ತೆ, ವಸಂತನಗರ, ವಿದ್ಯಾವಿಕಾಸ್ ಡಿಗ್ರಿ ಕಾಲೇಜ್ ಹತ್ತಿರ, ಬನ್ನೂರ್ ರೋಡ್, ಮೈಸೂರು.
8123180187 / 8951774177

ದಾಖಲಾತಿ ಕಳೆದಿದೆ
ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹನಗೋಡು ಹೋಬಳಿ ಮುದುಗನೂರು ಗ್ರಾಮದ ಜಂಬುಕೃಷ್ಣೇಗೌಡರ ಮಗ ಪ್ರಶಾಂತ್ ಜೆ. ರವರಿಗೆ ಸೇರಿದ ಹುಣಸೂರು ಟೌನ್ ಎರಡನೇ ಡಿವಿಸನ್ 22ನೇ ವಾರ್ಡ್ ದರ್ಗಾ ರಸ್ತೆಯಲ್ಲಿರುವ ಪುರಸಭಾ ಖಾತಾ ನಂ.1965/362/4 ರ ಸ್ವತ್ತನ್ನು ದಿನಾಂಕ: 09.04.2012ರುದು ನೊಂದಾಯಿಸಿದ ಶುದ್ಧ ಕ್ರಯದ ಪತ್ರ ದಿನಾಂಕ: 01.10.2022 ರಂದು ಗ್ರಾಮದಲ್ಲಿ ಕಳೆದು ಹೋಗಿದೆ. ಸದರಿ ಸ್ವತ್ತಿನ ಕ್ರಯ ಪತ್ರ ಸಿಕ್ಕಿದವರು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಹಾಜರು ಪಡಿಸಲು ಮನವಿ ಮಾಡಿಕೊಳ್ಳುತ್ತೇವೆ ಎಂದು ಪ್ರಶಾಂತ್ ನೋಟರಿ ರವರ ಮುಂದೆ ಪ್ರಮಾಣ ಮಾಡಿ ಕೋರಿಕೊಂಡಿದ್ದಾರೆ.
ಸಹಿ/– ಪ್ರಶಾಂತ್.ಜೆ

WANTED
Lady Computer Operater with PUC Qualification and Office Boy with PUC at Dattagalli Mysore Office
Contact
6363743857

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀ ರಾಯಲ್ ವಾರಿಯರ್ ಬೇಕರಿಯಲ್ಲಿ ಕಾರ್ಯ ನಿರ್ವಹಿಸಲು ಮ್ಯಾನೇಜರ್, ಸೇಲ್ಸ್ ಮೆನ್ ಹಾಗೂ ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ. ಉಚಿತ ಊಟ , ವಸತಿಯೊಂದಿಗೆ ಉತ್ತಮ ಸಂಬಳ ನೀಡಲಾಗುತ್ತದೆ. ವಿದ್ಯಾರ್ಹತೆ: SSLC/PUC
9019876412 / 9538840413

ಸೈಟು ಮಾರಾಟಕ್ಕಿದೆ
ಶ್ರೀರಾಂಪುರ ಎಲ್‌ವಿಆರ್ ಲೇಔಟ್ 40x60 W/F, ಎಂ.ಎಸ್. ರಾಮಯ್ಯ ಲೇಔಟ್ 40x60 W/F ಸಂಪರ್ಕಿಸಿ
9740088990

ಬೇಕಾಗಿದ್ದಾರೆ
ಬನ್ನೂರು ರಸ್ತೆಯಲ್ಲಿ (ಎಟಿಎಂಇ ಕಾಲೇಜು ಹತ್ತಿರ) ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್‌ಗಳು (ಪುರುಷ ಮಾತ್ರ) 12 ಗಂಟೆ, ಮೈಸೂರು ಸಿಟಿಯಲ್ಲಿ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ಇಎಸ್‌ಐ ಮತ್ತು ಪಿಎಫ್ ಸೌಲಭ್ಯವಿದೆ ಎಸ್‌ಎಸ್‌ಎಲ್‌ಸಿ ಆಗಿರಬೇಕು ಹೆಚ್ಚಿನ ಮಾಹಿತಿಗೆ
7892441955

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಜರ್ ಮತ್ತು ಗಾರ್ಡ್ಸ್ ಬೇಕಾಗಿದ್ದಾರೆ. ವಿದ್ಯಾರ್ಹತೆ : ಪಿಯುಸಿ, ಎಸ್‌ಎಸ್‌ಎಲ್‌ಸಿ. ವಯಸ್ಸು 20 ರಿಂದ 45 ವರ್ಷ ಸಂಪರ್ಕಿಸಿ
6360959389

2 B/R ಮನೆ ಬಾಡಿಗೆಗೆ ಇದೆ
ಗ್ರೌಂಡ್ ಫ್ಲೋರ್, ಬೋಗಾದಿ SBM ಲೇಔಟ್, ಮೈಸೂರು. ಬಾಡಿಗೆ ರೂ.: 9,000/–pm
ಸಂಪರ್ಕಿಸಿ. ಲೋಕೇಶ್
9480887390 / 9901374694

SITE FOR SALE
40x60 W/F MUDA Site, Bandipalya, Varuna Hobli, Mysore Taluk. Contact:
9845617629
9945564929

ಡಿಟಿಪಿ ಆಪರೇಟರ್ ಬೇಕಾಗಿದ್ದಾರೆ
ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಜೆರಾಕ್ಸ್ ಡಿಟಿಪಿ ಸೆಂಟರ್‌ಗೆ ಮಹಿಳೆಯರು (ಹುಡುಗಿಯರು) ತಕ್ಷಣ ಬೇಕಾಗಿದ್ದಾರೆ ಸಂಪರ್ಕಿಸಿ
9538311556

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ, ವಯಸ್ಸು : 18 ರಿಂದ 40 ವರ್ಷ ವಿದ್ಯಾರ್ಹತೆ : 7 ರಿಂದ ಪಿಯುಸಿ ಮತ್ತು ಐಟಿಐ ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಮುಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ
9035381989

ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಒಂಟಿಕೊಪ್ಪಲಿನಲ್ಲಿರುವ ಹೋಟೆಲ್ ಒಂದಕ್ಕೆ ಅನುಭವವುಳ್ಳ ಸೌತ್ ಇಂಡಿಯನ್ ಭಟ್ಟರು 1 ನಂ – 17,000ರೂ, ಭಟ್ಟರಿಗೆ ಹೆಲ್ಪರ್‌ಗಳು 1 ನಂ–10,000, ದೋಸೆ ಭಟ್ಟರು 2 ನಂ – 12,000, ಟೀ–ಕಾಫಿ ಮಾಡುವವರು 2ನಂ–10,000, ಚಾಟ್ಸ್–ಚೈನೀಸ್ ಮಾಡುವವರು 1ನಂ – 10,000, ಕೌಂಟರ್ ಬಾಯ್ಸ್ 2 ನಂ – 10,000, ಸಪ್ಲೈಯರ್ಸ್ 2 ನಂ – 10,000, ವಾಶಿಂಗ್ & ಕ್ಲೀನರ್ಸ್ 4 ನಂ – 8,000, ಊಟ ವಸತಿ ಸೌಲಭ್ಯ ದೊರೆಯುತ್ತದೆ, ಶಿಫ್ಟ್‌ಗಳಲ್ಲಿ ಕೆಲಸ
8088337564, 9380681467

ಮೈಸೂರಿನಲ್ಲಿ ಉದ್ಯೋಗ
(Consultancy ಅಲ್ಲ) ಕುವೆಂಪುನಗರದಲ್ಲಿ ನೂತನವಾಗಿ ಆರಂಭವಾಗಿರುವ AWBM ಕಂಪನಿಗೆ SSLC, PUC, ITI, JOC, Diploma, any Degree ಆದಂತಹ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 31 ವರ್ಷಗಳು. ತಿಂಗಳಿಗೆ: 25000 – 34000. (ಉಚಿತ ವಸತಿ + promotion). ಕೂಡಲೇ ಕರೆ ಮಾಡಿ: ವಿಸ್ಮಯ
9844219943, 9900163228

Job Opportunity
Exclusively for State / Central Govt. retired officials & VRS officials interested housewife. Benefits: 1) Fixed salary + PF + ESI & variable incentive. Age above 30 years. Necessary documents required. Call
9449068132, 7022034200

ಮನೆ ಮಾರಾಟಕ್ಕಿದೆ
ಶ್ರೀರಾಂಪುರ 2ನೇ ಹಂತ 30x40, 6 ವರ್ಷ ಹಳೆಯ Duplex House 3BHK ಹುಣಸೆ ಮರ ಹತ್ತಿರ, ಕಾರ್ಪೋರೇಷನ್ ಖಾತಾ. ಸಂಪರ್ಕಿಸಿ:
9606347129

ನಾಯಕ ಜಾತಿಯ ವಧು ಬೇಕಾಗಿದೆ
ವಯಸ್ಸು 22 ರಿಂದ 28 ವರ್ಷದ ಒಳಗೆ. ಡಿಗ್ರಿ ಪಾಸಾಗಿರಬೇಕು. ವರ : M.Tech ವಯಸ್ಸು 29 ವರ್ಷ ಸಂಪರ್ಕಿಸಿ:
9480887390 / 9901374694

ತಕ್ಷಣ ಬೇಕಾಗಿದ್ದಾರೆ
ಜಯಪುರದಲ್ಲಿ ಪೆಟ್ರೋಲ್ ಬಂಕ್‌ನಲ್ಲಿ ಕಾರ್ಯನಿರ್ವಹಿಸಲು ಹುಡುಗರು ಹಾಗೂ ಕ್ಯಾಷಿಯರ್‌ಗಳು ಬೇಕಾಗಿದ್ದಾರೆ. ಸಂಬಳ 12000 ರಿಂದ 13000. ಸಂಪರ್ಕಿಸಿ:
9606970941, 9886677427

AFFIDAVIT
I, B.M. Shilpa, residing at Beeruga Village, Kurchi Post, Ponnampet Taluk, Kodagu District hereby states that, my name was mentioned as B.M. Shilpa in Aadhaar Card, Voter ID & all other documents. But in my SSLC marks card my name has been mentioned as Jayanthi B.V. Both the names pertains to me & the same person.
Sd/- B.M. Shilpa

ಸೈಟು ಮಾರಾಟಕ್ಕಿದೆ
30x30 S/F, 30x50 W/F
40x60 N/F, 40x60 W/F
ಯೂನಿವರ್ಸಿಟಿ ಲೇಔಟ್ ಹತ್ತಿರ.
30x40 S/F, 30x50 E/F
ವರಕೋಡು ಹತ್ತಿರ
Mob: 9900372792

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 + ESI, PF. ವಿದ್ಯಾರ್ಹತೆ: 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ:
Mob: 9035734821

WANTED
1. SUPERVISOR (BA / ANY DEGREE) (LABOUR / MAN POWER - EXP 5 YEARS)
2. SECURITY GUARD (AGE 25 TO 55). (AREA CITY, HEBBAL, NEAR METAGALLI).
MOB: 9036745292
(CALL 10 TO 6 ONLY)

ಮೈಸೂರು ಮ್ಯಾರೇಜ್ ಬ್ಯೂರೋ
44 ವರ್ಷ 5.5 ಎತ್ತರ, ಬಿಳಿಬಣ್ಣ ಮರಾಠ ಸುಂದರ ಶ್ರೀಮಂತ ಡೈವರ್ಸ್ ವಧುವಿಗೆ ಸುಂದರ ಶ್ರೀಮಂತ ಕೋಟ್ಯಾಧೀಶ್ವರ ವರ ವಿಧುರ, ವಿಚ್ಛೇದಿತರು ನೇರ ಸಂಪರ್ಕಿಸಿ ಜಾತಿ ಅಭ್ಯಂತರ ಇಲ್ಲ.
www.bhandhana.com
ಡಾ.ಗುರೂಜಿ ಮೈಸೂರು
6361740552
7899625268

ಕೆಲಸಕ್ಕೆ ಬೇಕಾಗಿದ್ದಾರೆ
ಮೇಟಗಳ್ಳಿ CIPET ಕಾಲೇಜ ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 14,000/– ಕೂಡಲೇ ಸಂಪರ್ಕಿಸಿ. ಚಾಮುಂಡೇಶ್ವರಿ ಎಂಟರ್ ಪ್ರೈಸಸ್. ಲೋಕೇಶ್
8722844236

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಛೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಹೋಂನರ್ಸಿಂಗ್ ಕೆಲಸ
ಅನುಭವ ಇರುವ /ಇಲ್ಲದಿರುವ ಯುವಕರು, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ ಊಟ ವಸತಿ ಉಚಿತದೊಂದಿಗೆ ಸಂಬಳ 12000–23000 ರವರಗೆ
(ಆಧಾರ್ ಕಾರ್ಡ್ & ಫೋಟೋ ಕಡ್ಡಾಯ)
ಅಗ್ರಹಾರ : **9035113222**

ಕೇರಳ ಕೊಳ್ಳೇಗಾಲ ಜ್ಯೋತಿಷ್ಯರು
ಪಂ॥ ಮೋಹನ್ ಪೊದುವಾಳ್ (ಕೇರಳ)
ಪಂ॥ ಮೋಡಿ ಕೃಷ್ಣಪ್ಪ ಮಾಂತ್ರಿಕರು (ಕೊಳ್ಳೇಗಾಲ)
ಮೊ.: 9036984793
ಇವರು ಕೇರಳ ಮಾಂತ್ರಿಕ ಶಕ್ತಿ ಮತ್ತು ಕೊಳ್ಳೇಗಾಲದ ಮೋಡಿ ಮಾಂತ್ರಿಕ ವಿದ್ಯೆಯಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ಬಾಧೆ, ಪ್ರೇತ ಬಾಧೆ ಇನ್ನೂ ಅನೇಕ ಗುಪ್ತ ಜಟಿಲವಾದ ಘೋರ ನಿಗೂಢ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಶತಸಿದ್ಧ. ಖಾಯಂ ವಿಳಾಸ:– #1140, ವಿಹಾರ ಮಾರ್ಗ, ಹಳೆ ಹಾಲಿನ ಡೈರಿ ಎದುರು, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ಸಿದ್ಧಾರ್ಥನಗರ, ಮೈಸೂರು – 11.

ತಕ್ಷಣ ಬೇಕಾಗಿದ್ದಾರೆ
ಶ್ರೀ ರೇಣುಕಾ ಫ್ಯೂಯಲ್ ಸ್ಟೇಷನ್ #10/ಎ, ಮಾನಂದವಾಡಿ ರೋಡ್, ಎನ್.ಹೆಚ್.ಪಾಳ್ಯ, ಮೈಸೂರು–570008. ಪೆಟ್ರೋಲ್ ಬಂಕ್‌ನಲ್ಲಿ ಕ್ಯಾಷಿಯರ್ ಹಾಗೂ ಹೆಲ್ಪರ್‌ಗಾಗಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ: ಹರೀಶ್:
ಹರೀಶ್: **9739392972**
ಚಂದ್ರಶೇಖರ್: **8861999933**

SITE FOR SALE
30x40, MUDA Khatha, East facing Site Rs.22 Lacs, South East Corner Site. Rs. 23 Lacs
9342123373

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

FREE GOVERNMENT TRAINING - MYSORE
Koushalya Karnataka Yojane. Job Roles:
1) Accounts Executive,
2) Computer Hardware Technician
Qualification: PUC, Diploma/ITI, Any Degree & Master Degree. 100% Free Job Placement with Govt. Certificate.
Contact Immediately
9663579654 / 9902955544

ತಕ್ಷಣ ಬೇಕಾಗಿದ್ದಾರೆ
ಜಗನ್‌ಮೋಹನ ಪ್ಯಾಲೇಸ್, K G Koppal, ನಾರಾಯಣಶಾಸ್ತ್ರಿ ರಸ್ತೆ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 15,000/–, ವಯೋಮಿತಿ : 50 ವರ್ಷದ ಒಳಗೆ. ESI ಮತ್ತು PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು:
9620777819 / 9620667819

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
9880813586
6360884930

ಸ್ವಂತಕ್ಕೆ ಕಟ್ಟಿರುವ ಮನೆ ಮಾರಾಟಕ್ಕಿದೆ (N/F)
20x30 (Ground Floor & 1st Floor) ದಟ್ಟಗಳ್ಳಿ 3ನೇ ಹಂತ, 'F' Block, (Near More & Thriveni Store)
9945428296
(Broker Excuse)

ಪ್ರತಿಷ್ಠಿತ ಕಂಪನಿಯಲ್ಲಿ ಉದ್ಯೋಗ
ವಿದ್ಯಾರ್ಹತೆ: SSLC, PUC, Degree, ವೇತನ: 10,000 to 30,000/-
1) ನಿವೃತ್ತ ನೌಕರರು, 2) ಪದವೀಧರರು, 3) House wife, 4) ಯಾವುದೇ ಕ್ಷೇತ್ರದಲ್ಲಿ ಅನುಭವವಿರುವವರು
9886647852

BRIDE / GROOMS MACHMAKERS
ವಧು / ವರರ ಮಾಹಿತಿ ಕೇಂದ್ರ
ಎಲ್ಲಾ ಜಾತಿಯ upto 65 years Govt jobs / Private / own 1st Marriage 18600 ವಧುಗಳಿಗೆ ವರಬೇಕು, 29600 ವರಗಳಿಗೆ ವಧು ಬೇಕು, 4200 ಡೈವೋರ್ಸ್‌ಗಳು / ವಿಧುರರು / ವಿಧವೆಯರು / ಸ್ವತಂತ್ರರು Any cast ಶ್ರೀಮಂತ 18 ವರಗಳಿಗೆ ವಧು ಬೇಕಾಗಿದೆ. (ಬಡವರ ವಧುಗಳಿಗೆ ಮದುವೆ ಉಚಿತ) 'Life Partner ಗಾಗಿ' ಒಮ್ಮೆ ಭೇಟಿ ನೀಡಿ, ಉದ್ಯೋಗ + ವಸತಿ + ಮದುವೆಗೆ ಕರ್ನಾಟಕಾದ್ಯಂತ 60 ಕಛೇರಿಗಳಿವೆ
7975728012

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 6 ರಲ್ಲಿ

ಮಂಡ್ಯ ಜಿಲ್ಲೆ ರೈತರ ಸಮಸ್ಯೆ ಈಡೇರಿಕೆ, ರಸ್ತೆ ದುರಸ್ತಿ, ಸಮಸ್ತ ಅಭಿವೃದ್ಧಿಗಾಗಿ ತುರ್ತು ಕೆಡಿಪಿ ಸಭೆ

ಉಸ್ತುವಾರಿ ಸಚಿವರಿಗೆ ದಿನೇಶ್ ಗೂಳಿಗೌಡ, ಮಧು ಒತ್ತಾಯ



- ಭತ್ತಕ್ಕೆ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಕೇಂದ್ರ ಸ್ಥಾಪನೆಗೆ ಮನವಿ
- ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ, ಹಾಲು ದರ ಪರಿಷ್ಕರಣೆ ಸಂಬಂಧ ಸಿಎಂ ಜತೆ ಸಭೆ ಏರ್ಪಡಿಸಲು ಒತ್ತಾಯ
- ಮೈಶುಗರ್ ಸಕ್ಕರೆ ಕಾರ್ಖಾನೆಗೆ ಬಾಕಿ 20 ಕೋಟಿ ರೂ. ಬಿಡುಗಡೆ ಸಂಬಂಧ ಸರ್ಕಾರಕ್ಕೆ ಮನವಿ ಮಾಡಲು ಜನಪ್ರತಿನಿಧಿಗಳ ನಿಯೋಗ ಕೊಂಡೊಯ್ಯಲು ಸಲಹೆ
- ಜಿಲ್ಲೆಯ ಏಳೂ ವಿಧಾನಸಭಾ ಕ್ಷೇತ್ರದ ರಸ್ತೆ ದುರಸ್ತಿ, ಗುಂಡಿ ಮುಚ್ಚುವ ಬಗ್ಗೆ ಚರ್ಚಿಸಲು ಸಲಹೆ

ಮಂಡ್ಯ, ನ.19– ಜಿಲ್ಲೆಯಲ್ಲಿ ರೈತರ ಸಮಸ್ಯೆ, ರಸ್ತೆಗಳ ದುರಸ್ತಿ ಹಾಗೂ ಗುಂಡಿ ಮುಚ್ಚಲು ಕ್ರಮವಹಿಸುವುದು, ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಕೇಂದ್ರ ತೆರೆಯುವುದು, ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ, ಹಾಲು ದರ ಪರಿಷ್ಕರಣೆ, ಮೈಸೂರು ಸಕ್ಕರೆ ಕಾರ್ಖಾನೆಗೆ ಬಾಕಿ 20 ಕೋಟಿ ರೂಪಾಯಿ ಬಿಡುಗಡೆ ಸೇರಿದಂತೆ ಸಮಗ್ರ ವಿಷಯಗಳನ್ನು ಚರ್ಚೆ ಮಾಡುವ ಹಾಗೂ ಆಡಳಿತ ವ್ಯವಸ್ಥೆಗೆ ಚುರುಕು ನೀಡುವ ಸಂಬಂಧ ತುರ್ತು ಕೆಡಿಪಿ ಸಭೆಯನ್ನು ಕರೆಯಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಅವರನ್ನು ಭೇಟಿ ಮಾಡಿದ ಸ್ಥಳೀಯ ಸಂಸ್ಥೆಗಳ ಮಂಡ್ಯ ಕ್ಷೇತ್ರದ ಶಾಸಕ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ ರೈತರಿಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳಿವೆ, ರಸ್ತೆಗಳು ಬಹಳವೇ ಹದಗೆಟ್ಟಿದ್ದು, ಗುಂಡಿಗಳು ಹೆಚ್ಚಿವೆ. ಇದರಿಂದ ವೀರಯೋಧರೊಬ್ಬರು ದುರ್ಮರಣ ಆಗುವಂತಾಗಿದೆ. ಈ ಸಂದರ್ಭದಲ್ಲಿ ಜಿಲ್ಲೆಯ ಆಡಳಿತ ವ್ಯವಸ್ಥೆಗೆ ವೇಗ ನೀಡಬೇಕಿದ್ದು, ತುರ್ತಾಗಿ ಜಿಲ್ಲಾ ಮಟ್ಟದ ಕೆಡಿಪಿ ಸಭೆಯನ್ನು ಕರೆಯಬೇಕಿದೆ ಎಂದು ಶಾಸಕರು ಮನವಿ ಮಾಡಿದ್ದಾರೆ.

ಅಲ್ಲದೆ, ಮಂಡ್ಯ ಜಿಲ್ಲೆಯ ವ್ಯಾಪ್ತಿಯಲ್ಲಿ ಭತ್ತ ಕೊಯಿಲಿಗೆ ಬಂದಿದ್ದು, ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿ ಕೇಂದ್ರವನ್ನು ತೆರೆಯಬೇಕಿದೆ. ಇದರ ಜೊತೆಗೆ ಕಳೆದ ವರ್ಷದಲ್ಲಿದ್ದ ಕೆಲವು ನ್ಯೂನತೆಗಳನ್ನು ಸರಿಪಡಿಸುವ ಬಗ್ಗೆಯೂ ಚರ್ಚೆ ನಡೆಸಬೇಕಿದೆ ಎಂದು ಶಾಸಕರು ಒತ್ತಾಯಿಸಿದ್ದಾರೆ.

ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿ ಹಾಗೂ ಹಾಲಿನ ದರ ಪರಿಷ್ಕರಣೆ ಮಾಡುವಂತೆ ರೈತ ನಾಯಕರು ಅಹೋರಾತ್ರಿ ಧರಣಿ ನಡೆಸುತ್ತಿದ್ದು, ಈ ಬಗ್ಗೆ ಚರ್ಚಿಸಲು ಮುಖ್ಯಮಂತ್ರಿಗಳೊಡನೆ ಸಭೆ ಏರ್ಪಡಿಸಬೇಕಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರು ಕ್ರಮ ಕೈಗೊಳ್ಳಬೇಕಿದೆ. ಈ ಸಂಬಂಧ ತಮ್ಮಲ್ಲಿ ಚರ್ಚೆ ನಡೆಸಬೇಕು ಎಂದು ಶಾಸಕ ದಿನೇಶ್ ಗೂಳಿಗೌಡ ಅವರು ಸಚಿವ ಗೋಪಾಲಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಮೈಸೂರು ಸಕ್ಕರೆ ಕಾರ್ಖಾನೆ ವಿಷಯಕ್ಕೆ ಸಂಬಂಧಪಟ್ಟಂತೆ ಆಯವ್ಯಯದಲ್ಲಿ ಘೋಷಿಸಿದಂತೆ 50 ಕೋಟಿ ರೂಪಾಯಿಯಲ್ಲಿ 30 ಕೋಟಿ ರೂಪಾಯಿ ಮಾತ್ರವೇ ಈವರೆಗೆ ಬಿಡುಗಡೆಯಾಗಿದೆ. ಈ ಹಿನ್ನೆಲೆಯಲ್ಲಿ ಬಾಕಿ ಉಳಿದಿರುವ 20 ಕೋಟಿ ರೂಪಾಯಿ ಅನುದಾನವನ್ನು ಸರ್ಕಾರದಿಂದ ತುರ್ತಾಗಿ ಬಿಡುಗಡೆ ಮಾಡಿಸಬೇಕಿದೆ. ಈ ಕುರಿತೂ ಸಹ ಸಭೆಯಲ್ಲಿ ಚರ್ಚೆ ನಡೆಸಬೇಕಿದೆ ಎಂದು ಶಾಸಕರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಜಿಲ್ಲೆಯಾದ್ಯಂತ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಮಂಡ್ಯ ನಗರ ಹಾಗೂ 7 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ರಸ್ತೆ ದುರಸ್ತಿ ಆಗಬೇಕಿದೆ. ಅಲ್ಲದೆ, ಹಲವು ಕಡೆ ತುರ್ತಾಗಿ ಗುಂಡಿ ಮುಚ್ಚಬೇಕಿದೆ ಎಂದು ಶಾಸಕರು ಜಿಲ್ಲೆಯಲ್ಲಿನ ಸಮಸ್ಯೆಯ ತೀವ್ರತೆ ಬಗ್ಗೆ ಗಮನ ಸೆಳೆದಿದ್ದಾರೆ.

ಕಳೆದ ಹಲವು ತಿಂಗಳಿಂದ ನಿರಂತರವಾಗಿ ಭಾರಿ ಮಳೆ ಸುರಿದಿದ್ದು, ರೈತರು, ಜನ–ಜಾನುವಾರುಗಳು ಸಂಕಷ್ಟಕ್ಕೀಡಾಗಿವೆ. ಹಲವು ಆತಂಕ ಮತ್ತು ಸಮಸ್ಯೆಗಳನ್ನು ಜಿಲ್ಲೆಯ ಜನತೆ ಎದುರಿಸುತ್ತಿದ್ದಾರೆ. ಜಿಲ್ಲೆಯಲ್ಲಿನ ಅತಿವೃಷ್ಟಿಯಿಂದ ಬಹುತೇಕ ಎಲ್ಲ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಜನಸಾಮಾನ್ಯರು ಪ್ರಯಾಣಿಸಲು ಸಾಧ್ಯವಾಗದಷ್ಟು ದುಸ್ತರವಾಗಿವೆ. ಇಂತಹ ರಸ್ತೆ ಗುಂಡಿಯಿಂದಾಗಿ ಜಿಲ್ಲೆಯ ಹೆಮ್ಮೆಯ ಸೈನಿಕರೊಬ್ಬರು ಅಪಘಾತದಿಂದ ಮರಣ ಹೊಂದಿದ್ದು ದುರದೃಷ್ಟಕರ ಹಾಗೂ ದುಃಖದ ಸಂಗತಿಯಾಗಿದೆ. ಜಿಲ್ಲೆಯ ಸಮಸ್ಯೆಗಳನ್ನು ಚರ್ಚಿಸಿ ಜಿಲ್ಲಾಡಳಿತವನ್ನು ಚುರುಕುಗೊಳಿಸಿ ಅಭಿವೃದ್ಧಿಯ ವೇಗ ಹೆಚ್ಚಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಶಾಸಕರು ತಿಳಿಸಿದ್ದಾರೆ.

ಜಿಲ್ಲೆಯ ಅಭಿವೃದ್ಧಿ ಬಗ್ಗೆ ಚರ್ಚಿಸಲು ಮೂರು ತಿಂಗಳಿಗೆ ಒಮ್ಮೆ ಕೆಡಿಪಿ ಸಭೆ ನಡೆಯಬೇಕು. ಆದರೆ, ಕಳೆದ ಜೂನ್ 29 ರಂದು ನಡೆದಿದ್ದೇ ಕೊನೆಯ ಸಭೆಯಾಗಿರುತ್ತದೆ. ಈಗಾಗಲೇ 5 ತಿಂಗಳು ಕಳೆದಿರುವುದರಿಂದ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ನಡುವೆ ಸಮನ್ವಯತೆಯ ಕೊರತೆಯುಂಟಾಗಿದೆ. ಜಿಲ್ಲೆಯ ಅಭಿವೃದ್ಧಿ ಕಾರ್ಯಗಳು ಮಂದಗತಿಯಲ್ಲಿ ಸಾಗುತ್ತಿರುವುದರ ಜೊತೆಗೆ ಇದು ತುಂಬಾ ಆಘಾತಕಾರಿ ವಿಷಯವಾಗಿದೆ. ಈ ಹಿನ್ನೆಲೆಯಲ್ಲಿ ಜನಸಾಮಾನ್ಯರು ತುಂಬಾ ಸಂಕಷ್ಟದಲ್ಲಿದ್ದಾರೆ. ಹೀಗಾಗಿ ಶೀಘ್ರ ಕೆಡಿಪಿ ಸಭೆ ಕರೆದು ಜನರಲ್ಲಿ ಮೂಡುತ್ತಿರುವ ತಪ್ಪು ಭಾವನೆಯನ್ನು ಹೋಗಲಾಡಿಸುವುದರ ಜತೆಗೆ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ರೈತರು ಮತ್ತು ಜನಪ್ರತಿನಿಧಿಗಳನ್ನೊಳಗೊಂಡ ನಿಯೋಗವನ್ನು ಕೊಂಡೊಯ್ಯಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಶಾಸಕ ದಿನೇಶ್ ಗೂಳಿಗೌಡ ಮತ್ತು ಮಧು ಮಾದೇಗೌಡ ಮನವಿ ಮಾಡಿದ್ದಾರೆ.

ಮಂಡ್ಯ ನಗರದಲ್ಲಿ ಗುಂಡಿ ಮುಚ್ಚಿಸಲು ಮುಂದಾದ ಮಹಾಲಿಂಗೇಗೌಡ



ಮಂಡ್ಯ,ನ.16– ನಗರದ ಪ್ರಮುಖ ರಸ್ತೆಗಳು ಸೇರಿದಂತೆ ಎಲ್ಲಾ ರಸ್ತೆಗಳು ಗುಂಡಿಗಳಿಂದ ಅಪಾಯಕ್ಕೆ ಆಹ್ವಾನ ನೀಡುತ್ತಿದ್ದು, ಮೊನ್ನೆಯಷ್ಟೇ ನಿವೃತ್ತ ಯೋಧನೋರ್ವ ರಸ್ತೆಯಲ್ಲಿದ್ದ ಗುಂಡಿಯನ್ನು ತಪ್ಪಿಸಲು ಹೋಗಿ ಸಾವನ್ನಪ್ಪಿದ್ದರು. ಇದಾಗಿಯೂ ಎಚ್ಚೆತ್ತುಕೊಳ್ಳದ ಸಂಬಂಧಿಸಿದ ಅಧಿಕಾರಿಗಳು ಗುಂಡಿ ಮುಚ್ಚುವ ಕೆಲಸಕ್ಕೆ ಮುಂದಾಗಿರಲಿಲ್ಲ. ಆದರೆ ಇದೀಗ ಗುಂಡಿಗಳನ್ನು ಮುಚ್ಚುವ ಕಾರ್ಯಕ್ಕೆ ಜೆಡಿಎಸ್ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ ಮುಂದಾಗಿದ್ದು, ಇಂದಿನಿಂದ ನಗರದ ಪ್ರಮುಖ ರಸ್ತೆಗಳ ಗುಂಡಿಗಳನ್ನು ಸ್ವಂತ ಖರ್ಚಿನಿಂದ ಮುಚ್ಚಿಸಲು ಮುಂದಾಗಿದ್ದಾರೆ.

ಈ ನಿಟ್ಟಿನಲ್ಲಿ ವೈಯಕ್ತಿಕ ವೆಚ್ಚದಲ್ಲಿ ಮಂಡ್ಯ ನಗರಾದ್ಯಂತ ಇರುವ ಅಪಾಯಕಾರಿ ರಸ್ತೆ ಗುಂಡಿಗಳನ್ನು ಸ್ವತಃ ತಾವೇ ನಿಂತು ಮುಚ್ಚಲು ಚಾಲನೆ ನೀಡಿದ್ದು, ರಾಜ್ಯಾದ್ಯಂತ ಇರುವ ಅಪಾಯಕಾರಿ ರಸ್ತೆಗಳ ಗುಂಡಿ ಮುಚ್ಚಿ ಜನರ ಪ್ರಾಣ ಉಳಿಸಿ ಅಭಿಯಾನ ಕೈಗೊಳ್ಳಲು ಮಹಾಲಿಂಗೇಗೌಡ ತಿಳಿಸಿದರು. ಇದೇ ಸಂದರ್ಭದಲ್ಲಿ ಮಾತನಾಡಿದ ಜೆಡಿಎಸ್ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ, ಮಂಡ್ಯ ನಗರದ ಪ್ರಮುಖ ರಸ್ತೆಗಳಲ್ಲಿ ನೂರಾರು ರಸ್ತೆಗಳು ಗುಂಡಿಯ ಹಾವಳಿಗಳಿಂದ ಜನ ಸಂಚರಿಸದಂತೆ ಆಗಿದೆ. ಜೊತೆಗೆ ಓರ್ವ ನಿವೃತ್ತ ಯೋಧ ಸಹ ಹೆಮ್ಮಾರಿಗುಂಡಿಗೆ ಬಲಿಯಾಗಿದ್ದಾರೆ. ಈ ನಿಟ್ಟಿನಲ್ಲಿ ನಾನೇ ಸ್ವಯಂಪ್ರೇರಿತವಾಗಿ ಗುಂಡಿ ಮುಚ್ಚಿಸಲು ಮುಂದಾಗಿದ್ದೇನೆ. ಇದು ನಾಲ್ಕು ಮಂದಿಗೆ ಮಾದರಿಯಾಗಿ ಪ್ರತಿಯೊಬ್ಬರೂ ತಮ್ಮ ಬಡಾವಣೆಗಳಲ್ಲಿ ಈ ರೀತಿ ಗುಂಡಿ ಮುಚ್ಚಿಸುವ ಕೆಲಸಕ್ಕೆ ಮುಂದಾಗಲಿ ಎಂದರು.

ನಿಧನ

ರಾಜು



ಶ್ರೀರಂಗಪಟ್ಟಣ, ನ.16– ತಾಲೂಕಿನ ಕಾರೇಕುರ ಗ್ರಾಮದ ರಾಜು (65) ಅನಾರೋಗ್ಯದಿಂದ ಬುಧವಾರ ಸಂಜೆ ಮೃತಪಟ್ಟಿದ್ದಾರೆ.

ಮೃತರು ಪತ್ನಿ ಗಾಯಿತ್ರಿ, ಮೈಸೂರು ಮಿತ್ರ ತಾಲೂಕು ವರದಿಗಾರ ವಿನಯ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಕಾರೇಕುರ ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಪುಟ್ಟಮ್ಮ



ಕೆ.ಆರ್.ಪೇಟೆ,ನ.16– ತಾಲೂಕಿನ ಕೊಟಗಹಳ್ಳಿ ಗ್ರಾಮದ ಹಿರಿಯ ಮುಖಂಡ ಜವರೇಗೌಡರ ಧರ್ಮಪತ್ನಿ ಶತಾಯುಷಿ ಪುಟ್ಟಮ್ಮ (100)ಅವರು ಇಂದು ನಿಧನರಾಗಿದ್ದಾರೆ. ಮೃತರು ಮೂವರು ಪುತ್ರರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಇಂದು ಸಂಜೆ ನಡೆಯಿತು.

ಶತಾಯುಷಿ ಪುಟ್ಟಮ್ಮ ಅವರ ನಿಧನಕ್ಕೆ ಮಾಜಿ ಶಾಸಕರಾದ ಕೆ.ಬಿ .ಚಂದ್ರಶೇಖರ್, ಬಿ.ಪ್ರಕಾಶ್, ಮಂಡ್ಯ ಜಿಲ್ಲಾ ಒಕ್ಕೂಟದ ನಿರ್ದೇಶಕ ಡಾಲು ರವಿ, ಸೇರಿದಂತೆ ಹಲವು ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ಹುಚ್ಚೇಗೌಡ



ಕೆ.ಆರ್.ಪೇಟೆ,ನ.16– ತಾಲೂಕಿನ ಸಾಧುಗೋನಹಳ್ಳಿ ಗ್ರಾಮದ ಹಿರಿಯ ಮುಖಂಡ ಹುಚ್ಚೇಗೌಡ (80)ಅವರು ಇಂದು ನಿಧನ ಹೊಂದಿದ್ದಾರೆ. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮದಲ್ಲಿ ಇರುವ ಜಮೀನಿನಲ್ಲಿ ಇಂದು ಸಂಜೆ ನಡೆಯಿತು. ಮೃತರ ತಾಲೂಕಿನ ವಿವಿಧ ಗಣ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ನಾಗಮಂಗಲದ ಮಂಡ್ಯ ವೃತ್ತಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಹೆಸರು ನಾಮಕರಣ

ಪುರಸಭಾ ಸಾಮಾನ್ಯ ಸಭೆಯಲ್ಲಿ ಅನುಮೋದನೆ



ನೂತನವಾಗಿ ಪುರಸಭೆಗೆ ಆಯ್ಕೆಯಾದ ಸೌಮ್ಯ ಅವರನ್ನು ಪುರಸಭಾ ಸಾಮಾನ್ಯ ಸಭೆಯಲ್ಲಿ ಶಾಸಕ ಸುರೇಶ್ ಗೌಡ ಅಭಿನಂದಿಸಿದರು.

ನಾಗಮಂಗಲ, ನ.16– ಕಳೆದ ಹಲವಾರು ದಿನಗಳಿಂದ ನನೆಗುದಿಗೆ ಬಿದ್ದಿದ್ದ ಪಟ್ಟಣದ ಹೃದಯ ಭಾಗದಲ್ಲಿರುವ ಮಂಡ್ಯ ವೃತ್ತವನ್ನು ಇನ್ನು ಮುಂದೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತವೆಂದು ನೂತನವಾಗಿ ನಾಮಕರಣ ಮಾಡಲು ಇಂದು ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ಪುರಸಭೆ ಸಾಮಾನ್ಯ ಸಭೆಯಲ್ಲಿ ಅನುಮೋದನೆ ದೊರೆಯಿತು.

ಅಧ್ಯಕ್ಷೆ ಆಶಾ ವಿಜಯಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 12ನೇ ವಿಷಯವಾಗಿ ಸದಸ್ಯರ ಗಮನಕ್ಕೆ ಅಧ್ಯಕ್ಷೆ ಆಶಾ ತರುತ್ತಿದ್ದಂತೇ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷದ ಸದಸ್ಯರು ಒಕ್ಕೊರಲಿನ ಅನುಮೋದನೆ ನೀಡಿದರು. ಹಲವಾರು ದಿನಗಳಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ದಲಿತ ಮುಖಂಡರು ಶಾಸಕ ಸುರೇಶ್ ಗೌಡ ಮತ್ತು ಪುರಸಭೆಗೆ ಮನವಿ ಮಾಡಿದ ಹಿನ್ನೆಲೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರಿಗೆ ಗೌರವ ಸೂಚಿಸುವ ದೃಷ್ಟಿಯಿಂದ ಈ ವೃತ್ತಕ್ಕೆ ನಾಮಕರಣ ಮಾಡಲು ಸಭೆ ಸಮ್ಮತಿ ಸೂಚಿಸಿದೆ.

ಇದಕ್ಕೂ ಮೊದಲು ಉಪ್ಪಾರ ಹಳ್ಳಿ ವ್ಯಾಪ್ತಿಯ ಮಂಟಿಯಲ್ಲಿ ಸಮಾಜ ಸೇವಕರೊಬ್ಬರು ಪುರಸಭೆಯ ಅನುಮತಿಯಿಲ್ಲದೇ ನೀರಿನ ಘಟಕ ಸ್ಥಾಪಿಸಿ ಅವರ ಕಡೆಯ ವ್ಯಕ್ತಿಯೊಬ್ಬರನ್ನು ನೇಮಕ ಮಾಡಿಕೊಂಡು ಹಣ ವಸೂಲಿ ಮಾಡುತ್ತಿದ್ದು, ಆ ಘಟಕಕ್ಕೆ ಅನುಮತಿ ನೀಡಬೇಕೆಂದು ಕಾಂಗ್ರೆಸ್ ಸದಸ್ಯೆ ವಸಂತ ಕೇಳಿದಾಗ ಘಟಕ ತೆರೆಯಲು ಇದುವರೆಗೂ ಯಾವುದೇ ಅನುಮತಿ ಪಡೆದಿಲ್ಲ. ಜೊತೆಗೆ ಅರ್ಜಿ ಹಾಕದೇ ಪುರಸಭೆಯ ವ್ಯಾಪ್ತಿಯಲ್ಲಿ ನೀರಿನ ಘಟಕ ಸ್ಥಾಪನೆ ಮಾಡಿರುವುದು ಅಕ್ರಮ, ಅರ್ಜಿ ಸಲ್ಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದಾಗ 2ನೇ ವಾರ್ಡಿನ ಸದಸ್ಯ ವರದರಾಜು ಸಹ ನಮ್ಮ ವಾರ್ಡಿನಲ್ಲೂ ಸಹ ಇದೇ ರೀತಿ ಪೂರ್ವಾನುಮತಿಯಿಲ್ಲದೇ ನೀರಿನ ಘಟಕ ಸ್ಥಾಪನೆ ಮಾಡಿದ್ದು ಅದಕ್ಕೂ ಅನುಮತಿ ನೀಡಬಾರದೆಂದು ಪಟ್ಟು ಹಿಡಿದರು.

ಇದೇ ಸಮಯದಲ್ಲಿ 3ನೇ ವಾರ್ಡಿಗೆ ನೂತನವಾಗಿ ಆಯ್ಕೆಯಾದ ಸೌಮ್ಯ ತಿರುಮಲಯ್ಯರವರನ್ನು ಶಾಸಕ ಸುರೇಶ್ ಗೌಡ ಅಭಿನಂದಿಸಿದರು. ಸಭೆಯಲ್ಲಿ ಸ್ಥಾಯಿ ಸಮಿತಿಯ ಸದಸ್ಯ ಚನ್ನಪ್ಪ, ಕಾಂಗ್ರೆಸ್‌ನ ತಿಮ್ಮಪ್ಪ, ರಮೇಶ್, ಅಲೀ ಅನ್ಸರ್, ಜೆಡಿಎಸ್‌ನ ವಿಜಯ ಕುಮಾರ್, ಶಂಕರ ಲಿಂಗೇಗೌಡ, ಮಂಜುನಾಥ್ ಮುಂತಾದವರು ಸಭೆಯಲ್ಲಿ ಹಾಜರಿದ್ದರು.

ಎಟಿಎಂಇ ಇಂಜಿನಿಯರಿಂಗ್ ಕಾಲೇಜಿಗೆ ನ್ಯಾಕ್ ಎ+ ಮಾನ್ಯತೆ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಾನಾ ಪ್ರೋತ್ಸಾಹ ಸವಲತ್ತು 'ವಿದ್ಯಾ ಆಸರೆ'



ಮೈಸೂರು, ನ.16(ಎಂಟಿವೈ)– ಎಟಿಎಂಇ ಇಂಜಿನಿಯರಿಂಗ್ ಕಾಲೇಜಿಗೆ 2022–23ನೇ ಸಾಲಿನಿಂದ 5 ವರ್ಷಗಳ ಅವಧಿಗೆ ನ್ಯಾಕ್ ಎ+ ಮಾನ್ಯತೆ ದೊರೆತಿದೆ ಎಂದು ಕಾಲೇಜಿನ ಅಧ್ಯಕ್ಷ ಅರುಣ್ ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಇಂಜಿನಿಯರಿಂಗ್ ಕಾಲೇಜುಗಳ ಪೈಕಿ ಮೊದಲ ಆವೃತ್ತಿಯಲ್ಲೇ ಎ+ ಮಾನ್ಯತೆ ಪಡೆದ ಮೊದಲ ಕಾಲೇಜು ಹಾಗೂ ವಿಟಿಯು ಮೈಸೂರು ವಲಯದಲ್ಲಿ 2ನೇ ಕಾಲೇಜು ಎಂಬ ಹೆಗ್ಗಳಿಕೆಗೆ ಎಟಿಎಂಇ ಪಾತ್ರವಾಗಿದೆ. ರಾಜ್ಯದಲ್ಲಿ ಎ+ ಮಾನ್ಯತೆ ಪಡೆದ 7ನೇ ಕಾಲೇಜಾಗಿದ್ದು, ಈ ಮಾನ್ಯತೆ ಪಡೆದ ಅತ್ಯಂತ ಕಿರಿಯ ಕಾಲೇಜು ಎಂಬ ಪ್ರಶಂಸೆಗೂ ಭಾಜನವಾಗಿದೆ. ಅಲ್ಲದೆ ದೇಶದಲ್ಲಿ ಮೊದಲ ಆವೃತ್ತಿಯಲ್ಲೇ ಈ ಸಾಧನೆ ಮಾಡಿದ 47ನೇ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ತಿಳಿಸಿದರು.

2010ರಲ್ಲಿ ಆರಂಭವಾದ ಕಾಲೇಜು ಕಡಿಮೆ ಅವಧಿಯಲ್ಲೇ ಉತ್ತಮ ಸಾಧನೆ ಮಾಡಿದೆ. 2019ರಲ್ಲಿ ಸಂಸ್ಥೆಯ 4 ಇಂಜಿನಿಯರಿಂಗ್ ವಿಭಾಗಗಳಿಗೆ ಎನ್‌ಬಿಎ ಮಾನ್ಯತೆ ದೊರೆತಿದೆ. 2021ರಲ್ಲಿ ಕಾಲೇಜು ಸಿದ್ದಪಡಿಸಿದ್ದ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಗೆ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅನುಮೋದನೆ ನೀಡಿ ಯೋಜನೆಯ ಅನುಷ್ಠಾನಕ್ಕೆ 2.4 ಕೋಟಿ ಮಂಜೂರು ಮಾಡಿದೆ. ಗ್ರಾಮೀಣ ಪ್ರದೇಶದ 7ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಯೋಜನೆಗೆ 17.90 ಲಕ್ಷ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ನೂತನ ಆವಿಷ್ಕಾರ ಮತ್ತು ಹೊಸ ತಂತ್ರಜ್ಞಾನ ಕೇಂದ್ರಿತ ಸಂಶೋಧನೆಗಳ ಬೆಳವಣಿಗೆಗೆ ಉತ್ತೇಜನ ನೀಡುವ ಯೋಜನೆಗೆ 2 ಕೋಟಿ ಅನುದಾನ ಮಂಜೂರಾಗಿದೆ ಎಂದರು.

ವಿದ್ಯಾ ಆಸರೆ ಯೋಜನೆ: ಬಡ ಹಾಗೂ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಸಲುವಾಗಿ ವಿದ್ಯಾ ಆಸರೆ ಯೋಜನೆ ಆರಂಭಿಸಲಾಗಿದೆ. ಪಿಯುಸಿಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕ, ಸಿಇಟಿಯಲ್ಲಿ 5 ಸಾವಿರ ರ್‍ಯಾಂಕ್ ಪಡೆದಿರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಶೇ.90ರಿಂದ 95 ಅಂಕ ಪಡೆದು, 10 ಸಾವಿರ ರ್‍ಯಾಂಕ್ ಒಳಗಿರುವ ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ಶೇ.75ರಷ್ಟು ರಿಯಾಯಿತಿ, ಶೇ.85ಕ್ಕಿಂತ ಹೆಚ್ಚು ಅಂಕ, ಸಿಇಟಿಯಲ್ಲಿ 15 ರ್‍ಯಾಂಕ್ ಒಳಗಿರುವವರಿಗೆ ಶೇ.50ರಷ್ಟು ರಿಯಾಯಿತಿ ನೀಡಲಾಗುತ್ತದೆ. ಪ್ರಸ್ತುತ 50 ವಿದ್ಯಾರ್ಥಿಗಳು ಈ ಯೋಜನೆಯ ಲಾಭ ಪಡೆಯುತ್ತಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಕಾರ್ಯದರ್ಶಿ ಶಿವಶಂಕರ್, ಖಜಾಂಚಿ ವೀರೇಶ್, ಪ್ರಾಂಶುಪಾಲ ಡಾ.ಬಸವರಾಜು.ಎಲ್, ಮಹೇಶ್ ಇದ್ದರು.

ನಾಳೆ ಮಹಿಳಾ ಉದ್ಯೋಗ ಮೇಳ; ಮಹಿಳಾ ಉದ್ಯಮಿಗಳ ಉತ್ಪನ್ನ ಪ್ರದರ್ಶನ



ಮೈಸೂರು,ನ.16(ಪಿಎಂ)– ಎಜ್ಯುಕೇರ್ ಐಟಿಇಎಸ್ ಕೌಶಲ್ಯ ತರಬೇತಿ ಕೇಂದ್ರ ಮತ್ತು ವುಮೆನ್ ಕ್ಯಾನ್ ಫೌಂಡೇಷನ್ ಜಂಟಿ ಆಶ್ರಯದಲ್ಲಿ ನ.18ರಂದು ಮಹಿಳಾ ಉದ್ಯೋಗ ಮೇಳ ಮತ್ತು ಮಹಿಳಾ ಉದ್ಯಮಿಗಳ ಉತ್ಪನ್ನಗಳ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿದೆ ಎಂದು ಎಜ್ಯುಕೇರ್ ಐಟಿಇಎಸ್‌ನ ವ್ಯವಸ್ಥಾಪಕ ನಿರ್ದೇಶಕಿ ರಚನಾ ಮಹೇಶ್ ತಿಳಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 90ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲಿವೆ. ಈ ಪೈಕಿ 3 ಕಂಪನಿಗಳು ಮಹಿಳಾ ಅಂಗವಿಕಲ ಅಭ್ಯರ್ಥಿಗಳಿಗೆ ಆದ್ಯತೆ ನೀಡುವುದಾಗಿ ಹೇಳಿವೆ. ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದಲ್ಲಿ 60ಕ್ಕೂ ಹೆಚ್ಚು ಮಹಿಳಾ ಉದ್ಯಮಿಗಳು ಭಾಗವಹಿಸಲಿದ್ದಾರೆ. ಇದರಲ್ಲಿ ಇಬ್ಬರು ಅಂಗವಿಕಲ ಉದ್ಯಮಿಗಳಾಗಿದ್ದಾರೆ ಎಂದರು. ಮೈಸೂರಿನ ಮಹರ್ಷಿ ವಾಲ್ಮೀಕಿ ರಸ್ತೆಯ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು ಆವರಣದಲ್ಲಿ ಅಂದು ಬೆಳಗ್ಗೆ 9.30ರಿಂದ ಮೇಳ ಮತ್ತು ವಸ್ತು ಪ್ರದರ್ಶನ ಆರಂಭವಾಗಲಿದೆ. 18 ವರ್ಷ ಮೇಲ್ಪಟ್ಟು 45 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು. ಎಸ್‌ಎಸ್‌ಎಲ್‌ಸಿಯಿಂದ ಯಾವುದೇ ಪದವಿವರೆಗಿನ ವಿದ್ಯಾರ್ಹತೆ ಹೊಂದಿರುವ ಮಹಿಳೆಯರಿಗೆ ಅವಕಾಶವಿದೆ. ಜೊತೆಗೆ ಕಂಪನಿಗಳು ವಿದ್ಯಾರ್ಹತೆಗಿಂತಲೂ ಹೆಚ್ಚಾಗಿ ವೃತ್ತಿಗೆ ಸಂಬಂಧಿಸಿದ ಕೌಶಲ್ಯದ ಪರಿಣಿತಿಗೆ ಆದ್ಯತೆ ನೀಡಲಿವೆ ಎಂದು ತಿಳಿಸಿದರು. ಅಂದು ಬೆಳಗ್ಗೆ 10ಕ್ಕೆ ಉದ್ಯೋಗ ಮೇಳಕ್ಕೆ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಲಿದ್ದಾರೆ. ವಸ್ತು ಪ್ರದರ್ಶನಕ್ಕೆ ಆರ್–ಪ್ರೊಸೆಸ್ ಔಟ್ ಸೋರ್ಸಿಂಗ್ ಸರ್ವೀಸ್ ಪ್ರೈ.ಲಿ.ನ ಅಧ್ಯಕ್ಷೆ ಸವಿತಾ ಮಲ್ಲಪ್ಪ ಚಾಲನೆ ನೀಡಲಿದ್ದಾರೆ. ಈಗಾಗಲೇ ಉದ್ಯೋಗ ಮೇಳಕ್ಕೆ ಆನ್‌ಲೈನ್ ಮೂಲಕ 1,700 ಮಂದಿ ನೋಂದಣಿ ಮಾಡಿಕೊಂಡಿದ್ದು, ಸ್ಥಳದಲ್ಲೂ ನೋಂದಣಿಗೆ ಅವಕಾಶವಿದೆ. ವಿವರಗಳಿಗೆ ಮೊ.ಸಂ. 63643 40027 ಅನ್ನು ಸಂಪರ್ಕಿಸಬಹುದು ಎಂದರು. ಮೇಳದ ಸ್ವಯಂಸೇವಕರಾದ ಫಿಜಾ ರಫೀಕ್, ಶೋಭಾರಮೇಶ್, ನಂದಿನಿ ಗೋಷ್ಠಿಯಲ್ಲಿದ್ದರು.

ಶಿಕ್ಷಣದೊಂದಿಗೆ ಕ್ರೀಡಾ ಸಾಧನೆಗೆ ಕರೆ



ಮೈಸೂರು, ನ.16(ಎಂಟಿವೈ) – ಕ್ರೀಡೆಯಲ್ಲಿ ಗೆಲುವು ಸಾಧಿಸುವುದರೊಂದಿಗೆ ಕೀರ್ತಿಗಳಿಸಬೇಕಾದರೆ ಶ್ರದ್ಧೆಯಿಂದ ನಿರಂತರ ಪ್ರಯತ್ನದ ಅಗತ್ಯವಿದೆ ಎಂದು ಜಿ.ಪಂ. ಉಪ ಕಾರ್ಯದರ್ಶಿ ಡಾ. ಪ್ರೇಮ್ ಕುಮಾರ್ ತಿಳಿಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ವಸತಿ ಶಾಲಾ–ಕಾಲೇಜು ವಿದ್ಯಾರ್ಥಿಗಳ ಹಾಗೂ ನೌಕರರ ವಿಭಾಗ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದಲ್ಲಿ ಕ್ರೀಡಾ ಚಟುವಟಿಕೆಗೆ ಉತ್ತಮ ಪ್ರೋತ್ಸಾಹ ದೊರೆಯುತ್ತಿದೆ. ಕ್ರೀಡಾ ಕ್ಷೇತ್ರದಲ್ಲಿ ದೇಶದ ಕೀರ್ತಿ ಪತಾಕೆ ಹಾರಿಸಲು ಹೆಚ್ಚಿನ ಸಂಖ್ಯೆಯಲ್ಲಿ ಯುವಜನತೆ ಕ್ರೀಡಾ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಬೇಕು. ಶಾಲಾ–ಕಾಲೇಜು ಅವಧಿಯಲ್ಲೇ ವಿದ್ಯಾರ್ಥಿಗಳು, ಯುವಕ–ಯುವತಿಯರು ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ನಗರಪಾಲಿಕೆಯ ಹೆಚ್ಚುವರಿ ಆಯುಕ್ತ ಜಿ.ಎಸ್.ಸೋಮಶೇಖರ್ ಜಿಗಿಣಿ ಮಾತನಾಡಿ, ಕ್ರಿಕೆಟ್ ಕ್ಷೇತ್ರದಲ್ಲಿ ಸಚಿನ್ ತೆಂಡೂಲ್ಕರ್, ಮಹೇಂದ್ರ ಸಿಂಗ್ ಧೋನಿಯಂತೆ ಇತರೆ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿ ದೇಶಕ್ಕೆ ಕೀರ್ತಿ ತರಲು ಯುವ ಕ್ರೀಡಾಪಟುಗಳು ಮುಂದಾಗಬೇಕು. ಕ್ರೀಡೆಯಲ್ಲಿ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರಿಗೆ ಸರ್ಕಾರ ಉನ್ನತ ಹುದ್ದೆಗಳನ್ನು ನೀಡುತ್ತಿದೆ ಇದಕ್ಕೆ ಕ್ರೀಡಾಪಟು ಧನುಷಾರವರೇ ಸಾಕ್ಷಿ ಎಂದರು. ಮೈಸೂರು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎನ್. ಮುನಿರಾಜು ಮಾತನಾಡಿ, ವಿದ್ಯಾರ್ಥಿಗಳ ದೈಹಿಕ ಬೆಳವಣಿಗೆಗೆ ಕ್ರೀಡೆ ಮುಖ್ಯವಾಗಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯು ಯಾವುದಾದರೊಂದು ಕ್ರೀಡೆಯಲ್ಲಿ ಸಾಧನೆ ಮಾಡಿ ದೇಶಕ್ಕೆ ಕೀರ್ತಿ ತರಬೇಕು ಎಂದರು. ಸಮಾರಂಭದಲ್ಲಿ ಅಂತರರಾಷ್ಟ್ರೀಯ ಕ್ರೀಡಾಪಟು ಧನುಷಾ, ಜಿಲ್ಲಾ ಸಮನ್ವಯ ಅಧಿಕಾರಿ ಹೇಮ್‌ಕುಮಾರ್, ಗಣಪತಿ ಜಕಾತಿ, ಆಶಾ ಟಿ.ಜಿ., ಗಣೇಶ್, ಯೋಗೀಶ್, ಪ್ರಾಂಶುಪಾಲ ಹೆಚ್.ಎನ್. ಪ್ರಸನ್ನಕುಮಾರ್ ಸ್ವಾಗತಿಸಿದರೆ, ಮಲ್ಲಿ ಕಾರ್ಜುನ ವಂದಿಸಿದರು. ಎನ್.ಎಸ್. ಪದ್ಮ ನಿರೂಪಿಸಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಡಿಸೆಂಬರ್‌ನಲ್ಲಿ ಗ್ರಾಪಂ ನೌಕರರ ಭಾರೀ ಪ್ರತಿಭಟನೆ



ಮಡಿಕೇರಿ,ನ.16– ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಲೇ ಇದೆ, ಜನಸಾಮಾನ್ಯರು ಜೀವನ ಸಾಗಿಸುವುದೇ ಕಷ್ಟವಾಗಿದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲೂ ಸರ್ಕಾರ ಕನಿಷ್ಠ ವೇತನ ನೀಡದೆ ವಂಚಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಗ್ರಾಪಂ ನೌಕರರ ಸಂಘದ ಕೊಡಗು ಜಿಲ್ಲಾ ಸಮಿತಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ನಡೆದ ಗ್ರಾಪಂ ನೌಕರರ ಸಂಘದ ಸಭೆಯಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಡಿಸೆಂಬರ್ ತಿಂಗಳಿನಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಿ ಸರ್ಕಾರದ ಗಮನ ಸೆಳೆಯಲು ನಿರ್ಧಾರ ಕೈಗೊಳ್ಳಲಾಯಿತು.

ಗ್ರಾಪಂ ನೌಕರರಿಗೆ ಕನಿಷ್ಠ ವೇತನ ನೀಡಲು ಕ್ರಮ ಕೈಗೊಳ್ಳಬೇಕು, ಎಲ್ಲಾ ನೌಕರರನ್ನು ಸರಕಾರಿ ನೌಕರರೆಂದು ಪರಿಗಣಿಸಬೇಕು, ಪಿಂಚಣಿ ಸೌಲಭ್ಯ ನೀಡಬೇಕು, ಕಾರ್ಮಿಕ ಇಲಾಖೆಯ ನಿಯಮದಂತೆ ವೇತನ ಪರಿಷ್ಕರಣೆ ಮಾಡಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಯಿತು. ಗ್ರಾಪಂ ನೌಕರರ ಸಂಘದ ರಾಜ್ಯಾಧ್ಯಕ್ಷ ಎಂ.ಬಿ.ನಾಡೇಗೌಡ ಮಾತನಾಡಿ, ಕೋವಿಡ್ ಸಂಕಷ್ಟದ ಸಂದರ್ಭ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಲು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಂಡಿದ್ದ ನೌಕರರನ್ನು ಸೇವೆಯಿಂದ ಕೈಬಿಡಲಾಗಿದ್ದು, ಸಾಕಷ್ಟು ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗಿದ್ದರೂ ವೇತನ ಹೆಚ್ಚಳ ಮಾಡದ ಸರ್ಕಾರ ದುಡಿಯುವ ವರ್ಗವನ್ನು ನಿರ್ಲಕ್ಷ್ಯದಿಂದ ನೋಡುತ್ತಿದೆ ಎಂದು ಆರೋಪಿಸಿದರು. ಕಾರ್ಮಿಕರ ಶ್ರಮವನ್ನು ಸರ್ಕಾರ ಅರಿತುಕೊಳ್ಳಬೇಕಿದೆ ಗ್ರಾಪಂ ನೌಕರರ ಬೇಡಿಕೆಗಳು ಈಡೇರಿಸುವಂತೆ ಒತ್ತಾಯಿಸಿ ಡಿಸೆಂಬರ್ ತಿಂಗಳಿನಲ್ಲಿ ದೊಡ್ಡ ಮಟ್ಟದ ಹೋರಾಟ ನಡೆಸಲಾಗುವುದು ಎಂದರು.

ಸಿಐಟಿಯುನ 17ನೇ ಅಖಿಲ ಭಾರತ ಸಮ್ಮೇಳನವು ಜ.18ರಿಂದ 22ರವರೆಗೆ ಬೆಂಗಳೂರಿನಲ್ಲಿ ನಡೆಯಲಿದ್ದು, ಸಮ್ಮೇಳನಕ್ಕೆ ಕೊಡಗು ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ತಿಳಿಸಿದರು. ಕಾರ್ಮಿಕರ ಬೇಡಿಕೆಗಳ ಕುರಿತು ಸರ್ಕಾರದ ಜೊತೆ ನಿರಂತರ ಚರ್ಚೆ ನಡೆಸಿ ಬೇಡಿಕೆಗಳ ಈಡೇರಿಕೆಗಾಗಿ ಪ್ರಯತ್ನಿಸಲಾಗುವುದೆಂದರು.

ಗ್ರಾಪಂ ನೌಕರರು ವನ್ಯಜೀವಿ ದಾಳಿ ಸೇರಿದಂತೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ರೈತಸಂಘ ನ.21ರಂದು ಆನೆದಾಳಿ ನಿಯಂತ್ರಣಕ್ಕೆ ಒತ್ತಾಯಿಸಿ ನಡೆಸಲಿರುವ ಹೋರಾಟಕ್ಕೆ ಬೆಂಬಲ ಸೂಚಿಸುವುದಾಗಿ ನಾಡೇಗೌಡ ಇದೇ ಸಂದರ್ಭ ತಿಳಿಸಿದರು.

ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ ಮಾತನಾಡಿ, ಗ್ರಾಪಂಗಳಲ್ಲಿ ದುಡಿಯುವ ನೌಕರರಿಗೆ ಕುಶಲತೆಯ ಆಧಾರದಲ್ಲಿ 'ಸಮಾನ ಕೆಲಸಕ್ಕೆ ಸಮಾನ ವೇತನ' ನಿಗಧಿಪಡಿಸಬೇಕು. ನೌಕರರ ಸೇವಾ ಅವಧಿಗೆ ಮಾನ್ಯತೆ ನೀಡುವ ರೀತಿಯಲ್ಲಿ ನಿಗಧಿಪಡಿಸಲಾಗಿರುವ ಮೂಲ ವೇತನದಲ್ಲಿ ಹೆಚ್ಚಳವಾಗಬೇಕೆಂದು ಆಗ್ರಹಿಸಿದರು. ಕಾರ್ಮಿಕರನ್ನು ಖಾಯಂಗೊಳಿಸದೇ ಅತ್ಯಂತ ಕಡಿಮೆ ವೇತನದಲ್ಲಿ ದುಡಿಸಿಕೊಳ್ಳಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು ಕಾರ್ಮಿಕರ ಸೇವಾ ನಿಯಮಾವಳಿಗಳಲ್ಲಿ ತಿದ್ದುಪಡಿಯಾಗಬೇಕು ಎಂದರು. ಗುತ್ತಿಗೆ ಆಧಾರದ ಪದ್ಧತಿಯನ್ನು ಕೈಬಿಡಬೇಕು, ನೌಕರರಿಗೆ ಕನಿಷ್ಠ ವೇತನ ನಿಗದಿ ಪಡಿಸಬೇಕು, ತುಟ್ಟಿ ಭತ್ಯೆ ಮತ್ತು ಬಾಕಿ ಉಳಿಸಿಕೊಂಡಿರುವ ವೇತನ ಬಿಡುಗಡೆ ಮಾಡಬೇಕು ಹಾಗೂ ನಿವೃತ್ತಿಯಾದ ನೌಕರರಿಗೆ ಉಪಧನ ನೀಡಬೇಕೆಂದು ಒತ್ತಾಯಿಸಿದರು. ಸಂಘದ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನವೀನ್ ಕುಮಾರ್, ಕುಶಾಲನಗರ ತಾಲೂಕು ಪ್ರಧಾನ ಕಾರ್ಯದರ್ಶಿ ವಿಜಯ್, ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಹೆಚ್.ಬಿ.ಹರೀಶ್ ಸೇರಿದಂತೆ ಮುಖಂಡರು ಹಾಗೂ ಗ್ರಾಪಂ ನೌಕರರು ಪಾಲ್ಗೊಂಡಿದ್ದರು.

ಹದಗೆಟ್ಟ ರಸ್ತೆ ದುರಸ್ತಿ ಬಗ್ಗೆ ಪ್ರಶ್ನಿಸಿದರೆ ವಿರಾಜಪೇಟೆ ಶಾಸಕರಿಂದ ಧಮ್ಕಿ

ರಾಜೀವ್ ಬೋಪಯ್ಯ , ಅನೀಶ್ ಮಾದಪ್ಪ ಆರೋಪ



ಶ್ರೀಮಂಗಲ, ನ.16– ಮೂಲಭೂತ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳನ್ನು ಪ್ರಶ್ನಿಸುವುದು ಪ್ರತಿಯೋರ್ವ ಪ್ರಜೆಯ ಹಕ್ಕಾಗಿದೆ. ಆದರೆ ಕೊಡಗಿನಲ್ಲಿ ಮೂಲಭೂತ ಸಮಸ್ಯೆಗಳಾದ ರಸ್ತೆಯ ಬಗ್ಗೆ ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಅವರನ್ನು ಕೇಳಿದರೆ ಧಮಕಿ ಹಾಕಲಾಗುತ್ತಿದ್ದು, ಭಯದ ನೆರಳಿನಲ್ಲಿ ಬದುಕುವಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕೊಡಗು ಜಿಲ್ಲಾ, ಬಿಜೆಪಿ ಯುವ ಮೋರ್ಚಾ ಮಾಜಿ ಅಧ್ಯಕ್ಷ ಚೊಟ್ಟೆಕ್' ಮಾಡ ರಾಜೀವ್ ಬೋಪಯ್ಯ ಮತ್ತು ಕೊಡಗು ಸಂರಕ್ಷಣಾ ವೇದಿಕೆ ಉಪಾಧ್ಯಕ್ಷ ಮಚ್ಚಮಾಡ ಅನೀಶ್ ಮಾದಪ್ಪ ತಿಳಿಸಿದ್ದಾರೆ.

ಪೊನ್ನಂಪೇಟೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪ್ರಶ್ನೆ ಮಾಡಿದವರಿಗೆ ಸೂಕ್ತ ರೀತಿಯಲ್ಲಿ ಉತ್ತರ ನೀಡುವುದು ಶಾಸಕ ಕೆ.ಜಿ.ಬೋಪಯ್ಯ ಅವರ ಕರ್ತವ್ಯ ಅದು ಬಿಟ್ಟು ಪಕ್ಷದ ಪದಾಧಿಕಾರಿಗಳ ಮೂಲಕ ತೇಜೋವದೆ ಮಾಡುವುದು, ಪ್ರಜಾಪ್ರಭುತ್ವದ ನೀತಿಯಲ್ಲ. ಇದು ನಿರಂಕುಶತ್ವದ ಲಕ್ಷಣ ಎಂದು ಖಂಡಿಸಿದರಲ್ಲದೆ ಇದರ ನೈತಿಕ ಹೊಣೆ ಹೊತ್ತು ಬೋಪಯ್ಯ ನವರು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದರು.


ಪೊನ್ನಂಪೇಟೆ- ಕಾನೂರು–ನಿಟ್ಟೂರು ರಸ್ತೆ ಅಭಿವೃದ್ಧಿಗೆ ಟೆಂಡರ್ ಆಗಿ ಮೂರು ವರ್ಷ ಆದರೂ ಗುತ್ತಿಗೆದಾರರು ಕೆಲಸ ಮಾಡುತ್ತಿಲ್ಲ. ಟೆಂಡರ್ ಅನ್ನು ರದ್ದು ಮಾಡಲು ಬಿಡುತ್ತಿಲ್ಲ ಎಂದು ಬೋಪಯ್ಯ ಅವರು ಮಾಧ್ಯಮ ಹೇಳಿಕೆಯಲ್ಲಿ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಇಂತಹ ಸ್ಥಿತಿಯಲ್ಲಿ ಶಾಸಕರಾಗಿ ಬೋಪಯ್ಯ ಮುಂದುವರಿಯುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ಸೂಕ್ತ ಎಂದು ರಾಜೀವ್ ಬೋಪಯ್ಯ ಅವರು ಅಭಿಪ್ರಾಯಪಟ್ಟರು.

ಕಳೆದ ನಾಲ್ಕು ಅವಧಿಯಿಂದ ಶಾಸಕರಾಗಿರುವ ಬೋಪಯ್ಯ ವನ್ಯಪ್ರಾಣಿ ಹಾಗೂ ಮಾನವ ಸಂಘರ್ಷ ಶಾಶ್ವತ ಪರಿಹಾರ ಕಂಡು ಹಿಡಿಯಲು ವಿಫಲರಾಗಿದ್ದು, ಗೋವುಗಳನ್ನು ಅತ್ಯಂತ ಪ್ರೀತಿಯಲ್ಲಿ ಸಾಕುವ ಜಿಲ್ಲೆಯ ಜನತೆಗೆ ಇಂದು ಹುಲಿ ಹಾವಳಿಯಿಂದ ಗೋವುಗಳ ಸಾಕುವುದನ್ನು ಬಿಟ್ಟಿದ್ದಾರೆ.ಇದರಿಂದ ಜಿಲ್ಲೆಯಲ್ಲಿ ಗೋವು ಸಂತತಿ ಅವನತಿಯಲ್ಲಿದೆ. ವನ್ಯ ಪ್ರಾಣಿಗಳ ಹಾವಳಿಯಿಂದ ಕೊಡಗಿನ ಸಂಸ್ಕೃತಿಯ ಭಾಗವಾದ ಭತ್ತದ ಗದ್ದೆಗಳನ್ನು ಕೃಷಿ ಮಾಡದೆ ಪಾಳು ಬಿಡುವಂತಾಗಿದೆ. ಇದಲ್ಲದೆ ಹುಲಿ ಹಾಗೂ ಕಾಡಾನೆ ದಾಳಿಗೆ ಸಿಲುಕಿ ಜನರು ಹಾಗೂ ಜಾನುವಾರುಗಳು ಸಾವನ್ನಪ್ಪುತ್ತಿದ್ದು–ಈ ಸಮಸ್ಯೆಗೆ ಯಾವುದೇ ಶಾಶ್ವತ ಪರಿಹಾರ ಯೋಜನೆ ರೂಪಿಸದೆ ವೈಫಲ್ಯ ಕಂಡಿರುವ ಶಾಸಕ ಕೆ .ಜಿ. ಬೋಪಯ್ಯ ಅವರು ಇದಕ್ಕೆ ಅಮಾಯಕರ ಮತ್ತು ಜಾನುವಾರುಗಳ ಸಾವಿಗೆ ನೇರ ಹೊಣೆ ಎಂದು ಅವರು ಆರೋಪಿಸಿದ್ದಾರೆ.

ಅನೀಶ್ ಮಾದಪ್ಪ ಅವರು ಮಾತನಾಡಿ, ಅಭಿವೃದ್ಧಿ ಹರಿಕಾರ ಎಂದು ಸ್ವಯಂ ಘೋಷಿತ ಬಿರುದು ಹಾಕಿಕೊಂಡಿರುವ ಬೋಪಯ್ಯ ವಿರಾಜಪೇಟೆ ಕ್ಷೇತ್ರ ವ್ಯಾಪ್ತಿಯ ಪ್ರಮುಖ ರಸ್ತೆ ಹಾಗೂ ಗ್ರಾಮೀಣ ರಸ್ತೆಗಳು ತೀವ್ರವಾಗಿ ಹಾಳಾಗಿದ್ದರೂ ಅವುಗಳನ್ನು ಸರಿಪಡಿಸದೆ ಸರ್ಕಾರದ ಗೂಟದ ಕಾರಿನಲ್ಲಿ ಬೋಪಯ್ಯ ಸುತ್ತುತ್ತಿದ್ದಾರೆ ಎಂದು ಕಿಡಿಕಾರಿದರು.

ಜೆಡಿಎಸ್‌ಗೆ ನೇಮಕ

ವಿರಾಜಪೇಟೆ,ನ.16– ಜೆಡಿಎಸ್ ರೈತ ಘಟಕದ ವಿರಾಜಪೇಟೆ ತಾಲೂಕು ಅಧ್ಯಕ್ಷರಾಗಿ ಮೈತಾಡಿ ಗ್ರಾಮದ ಬಾಳೆಕುಟ್ಟೀರ ದಿನಿ ಬೋಪಯ್ಯ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಡಿ.5, ಹನುಮಂತೋತ್ಸವ ಅದ್ಧೂರಿ ಆಚರಣೆ

ಕುಶಾಲನಗರ, ನ.16– ಕುಶಾಲನಗರದ ಹನುಮಂತೋತ್ಸವ ಆಚರಣಾ ಸಮಿತಿ ಆಶ್ರಯದಲ್ಲಿ ಡಿ.5 ರಂದು ಕುಶಾಲನಗರದಲ್ಲಿ ಎರಡನೇ ವರ್ಷದ ಹನುಮ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಈ ಹಿನ್ನೆಲೆಯಲ್ಲಿ ಮಂಟಪಗಳ ಶೋಭಾ ಯಾತ್ರೆ ನಡೆಯಲಿದೆ ಎಂದು ಸಮಿತಿ ಅಧ್ಯಕ್ಷ ಎಂ.ಡಿ.ಕೃಷ್ಣಪ್ಪ ತಿಳಿಸಿದರು.

ಕುಶಾಲನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೋಭಾಯಾತ್ರೆಯಲ್ಲಿ ಕುಶಾಲನಗರ, ಮುಳ್ಳುಸೋಗೆ, ಬೈಚನಹಳ್ಳಿ, ಮಾದಾಪಟ್ಟಣ, ಗುಡ್ಡೆಹೊಸೂರು ಗ್ರಾಮಗಳಿಂದ ವಿದ್ಯುತ್ ಅಲಂಕೃತ ಭವ್ಯ ಮುಂಟಪಗಳು ಪಾಲ್ಗೊಳ್ಳಲಿವೆ ಎಂದರು.

ಎ.ಕೆ.ಮನುಮುತ್ತಪ್ಪ ಅವರಿಗೆ ಕೊಡಗು ಸಹಕಾರ ರತ್ನ ಪ್ರಶಸ್ತಿ ಪ್ರದಾನ



ಕೊಡಗು ಸಹಕಾರ ರತ್ನ ಪ್ರಶಸ್ತಿಯನ್ನು ಅಪ್ಪಚೆಟ್ಟೋಳಂಡ ಕೆ.ಮನುಮುತ್ತಪ್ಪ ಅವರಿಗೆ, ಶ್ರೇಷ್ಠ ಸಹಕಾರಿ ಪ್ರಶಸ್ತಿಯನ್ನು ಬೊಟ್ಟೋಳಂಡ ಡಿ.ಬಿದ್ದಯ್ಯ ಕೊಂಗಂಡ ಎಂ.ಗಣಪತಿ, ಕೆ.ವಿ.ಮಂಜುನಾಥ್ ಹಾಗೂ ಶ್ರೇಷ್ಠ ಮಹಿಳಾ ಸಹಕಾರಿ ಪ್ರಶಸ್ತಿಯನ್ನು ಕಮಲ ಕುಯಪ್ಪ ಅವರಿಗೆ ನೀಡಲಾಯಿತು.

ಮಡಿಕೇರಿ, ನ.16– ಕೊಡಗು ಜಿಲ್ಲೆಯಲ್ಲಿ ಸಹಕಾರ ಸಂಘಗಳು ಉತ್ತಮವಾಗಿದ್ದು, ಸಹಕಾರ ಸಂಘಗಳನ್ನು ಮತ್ತಷ್ಟು ಬಲಪಡಿಸಲು ಮುಂದಾಗಬೇಕಿದೆ ಎಂದು ವಿಧಾನ ಪರಿಷತ್ ಸದಸ್ಯರಾದ ಸುಜಾ ಕುಶಾಲಪ್ಪ ಹೇಳಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿಯಮಿತ, ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಸಹಕಾರ ಇಲಾಖೆ, ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಹಾಗೂ ಸ್ಥಳೀಯ ಎಲ್ಲಾ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ 69ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪ್ರಯುಕ್ತ ಸಹಕಾರ ಶಿಕ್ಷಣ, ವೃತ್ತಿಪರ ನಿರ್ವಹಣೆಯನ್ನು ಮುಖ್ಯ ವಾಹಿನಿಗೆ ತರಲು ಮನರ್ ನಿರ್ಮಿಸುವ ದಿನಾಚರಣೆ ಹಾಗೂ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನಿಂದ ಆಯ್ಕೆಗೊಂಡ ಕೊಡಗಿನ ಶ್ರೇಷ್ಠ ಸಹಕಾರಿಗಳಿಗೆ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ನಗರದ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷರು ಹಾಗೂ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕರಾದ ಎ.ಕೆ.ಮನುಮುತ್ತಪ್ಪ ಅವರು ಮಾತನಾಡಿ ಸಹಕಾರ, ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಪಂದ್ಯಂಡ ಬೆಳ್ಯಪ್ಪ ಅವರು ಅಪಾರ ಕೊಡುಗೆ ನೀಡಿದ್ದಾರೆ. ಸಾರ್ವಜನಿಕರ ಮನವಿಯಂತೆ ಪಂದ್ಯಂಡ ಬೆಳ್ಯಪ್ಪ ಅವರ ಪ್ರತಿಮೆ ನಿರ್ಮಾಣಕ್ಕೆ ಕ್ರಮವಹಿಸಲಾಗುವುದು ಎಂದರು.

2017 ರಿಂದ ಕೊಡಗು ಜಿಲ್ಲೆಯಲ್ಲಿ ಸಹಕಾರ ರತ್ನ ಹಾಗೂ ಶ್ರೇಷ್ಠ ಸಹಕಾರಿ ಮತ್ತು ಶ್ರೇಷ್ಠ ಮಹಿಳಾ ಸಹಕಾರಿ ಪ್ರಶಸ್ತಿ ನೀಡುತ್ತಾ ಬರಲಾಗಿದೆ ಎಂದು ಅವರು ವಿವರಿಸಿದರು.

ಕೊಡಗು ಜಿಲ್ಲೆಯಲ್ಲಿ ಸಹಕಾರ ಸಂಘಗಳನ್ನು ಮತ್ತಷ್ಟು ಬಲಪಡಿಸುವಲ್ಲಿ ಸಹಕಾರಿಗಳೆಲ್ಲರೂ ಕೈಜೋಡಿಸಬೇಕಿದೆ ಎಂದು ಅವರು ಕೋರಿದರು. ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ನಿರ್ದೇಶಕ ಬಿ.ಡಿ.ಮಂಜುನಾಥ್ ಮಾತನಾಡಿ, ಸಹಕಾರ ಕ್ಷೇತ್ರದಲ್ಲಿ ವೃತ್ತಿಪರತೆ ಇರಬೇಕು ಎಂದು ಪ್ರತಿಪಾದಿಸಿದರು.

ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ಉಪಾಧ್ಯಕ್ಷರಾದ ಪಿ.ಸಿ.ಮನು ರಾಮಚಂದ್ರ, ರಾಜ್ಯ ಸಹಕಾರ ತೋಟಗಾರಿಕಾ ಮಹಾಮಂಡಳದ ನಿರ್ದೇಶಕರು ಹಾಗೂ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ನಿರ್ದೇಶಕರಾದ ಬಿ.ಎ.ರಮೇಶ್ ಚಂಗಪ್ಪ, ಸಹಕಾರಿ ಭಾರತಿ ಉಪಾಧ್ಯಕ್ಷರು ಹಾಗೂ ಕೊಡಗು ಜಿಲ್ಲಾ ಸಹಕಾರ ಯೂನಿಯನ್‌ನ ನಿರ್ದೇಶಕ ಎನ್.ಎ.ರವಿಬಸಪ್ಪ ಇತರರಿದ್ದರು.

ಅರಣ್ಯಾಧಿಕಾರಿಗಳ ಮೇಲೆ ಹಲ್ಲೆ: ಆರೋಪಿಗಳು ದೋಷಮುಕ್ತ

ವಿರಾಜಪೇಟೆ, ನ.16– ಅರಣ್ಯಾಧಿಕಾರಿಗಳ ಮೇಲೆ ಹಲ್ಲೆ ನಡೆಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಿಂದ ಮರದ ವ್ಯಾಪಾರಿ ಮತ್ತು ಪತ್ರಕರ್ತರನ್ನು ವಿರಾಜಪೇಟೆ ನ್ಯಾಯಾಲಯ ದೋಷ ಮುಕ್ತಗೊಳಿಸಿದೆ. ಸಿದ್ದಾಪುರ ಟಿಂಬರ್ ವ್ಯಾಪಾರಿ ಯಾಹ್ಯ, ಪತ್ರಕರ್ತರಾದ ಶಾಹಿನುಲ್ಲಾ ಹಾಗೂ ಅಬುಟ್ಟಿ ಎಂಬವರೇ ಆರೋಪ ಮುಕ್ತರಾದವರು.

2017, ನ.20 ರಂದು ಮೇಕೂರು–ಹೊಸ್ಕೇರಿ ಗ್ರಾಮದ ಕುಟ್ಟಂಡ ಜಗನ್ ಅವರ ಕಾಫಿ ತೋಟದಿಂದ ಬೆಲೆ ಬಾಳುವ ಮರಗಳನ್ನು ಕಡಿದ ಹಿನ್ನೆಲೆಯಲ್ಲಿ, ತಿತಿಮತಿ ಅರಣ್ಯಾಧಿಕಾರಿ ಅಶೋಕ್ ಹನಗುಂದ್ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿದ್ದ ವೇಳೆ ಸಿದ್ದಾಪುರದ ಟಿಂಬರ್ ವ್ಯಾಪಾರಿ ಯಾಹ್ಯ ಹಾಗೂ ಪತ್ರಕರ್ತರಾದ ಶಾಹಿನುಲ್ಲಾ ಹಾಗೂ ಅಬುಟ್ಟಿ ಅವರುಗಳು ಹಲ್ಲೆ ಹಡೆಸಿ ಕರ್ತವ್ಯಕ್ಕೆ ಅಡ್ಡಿ ಪಡಿಸಿದರು ಎಂದು ದೂರು ನೀಡಲಾಗಿತ್ತು.

ಈ ಸಂಬಂಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿ ಠಾಣಾಧಿಕಾರಿಗಳು ವಿಚಾರಣೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಈ ಕುರಿತು ವಿಚಾರಣೆ ನಡೆಸಿದ ವಿರಾಜಪೇಟೆ ನ್ಯಾಯಾಲಯ ಆರೋಪಿಗಳ ಮೇಲಿನ ಆರೋಪಕ್ಕೆ ಸಂಬಂಧಿಸಿದಂತೆ ಸೂಕ್ತ ಸಾಕ್ಷ್ಯಾಧಾರಗಳಿಲ್ಲವೆಂದು ಪರಿಗಣಿಸಿ ದೋಷ ಮುಕ್ತಗೊಳಿಸಿ ಆದೇಶ ಹೊರಡಿಸಿದೆ. ಆರೋಪಿಗಳ ಪರವಾಗಿ ವಕೀಲರಾದ ಡಿ.ಸಿ.ಧ್ರುವ ವಕಾಲತ್ತು ವಹಿಸಿದ್ದರು.

ಇಂದಿನಿಂದ ಕೊಡಗು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟ

ಮಡಿಕೇರಿ ನ.16– ಕೊಡಗು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ವಾರ್ಷಿಕ ಕ್ರೀಡಾಕೂಟವು ನ.17 ರಿಂದ 19 ರವರೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಲಿದೆ. ವಾರ್ಷಿಕ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವು ನ. 17 ರಂದು ಬೆಳಗ್ಗೆ 9 ಗಂಟೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಲಿದೆ. ಅಂತರ ರಾಷ್ಟ್ರೀಯ ಸ್ಕ್ವಾಷ್ ಆಟಗಾರ್ತಿ ಜೋಶ್ನಾ ಚಿಣ್ಣಪ್ಪ ಅವರು ಉದ್ಘಾಟಿಸಲಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಎಂ.ಎ.ಅಯ್ಯಪ್ಪ, ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಇತರರು ಪಾಲ್ಗೊಳ್ಳಲಿದ್ದಾರೆ.

ಪಾರ್ವತಾಂಭ ದೇವಿಯ ರಥೋತ್ಸವ



ಬೇಗೂರು(ಗುಂಡ್ಲುಪೇಟೆ), ನ.16– ಸಮೀಪದ ಹಸಗೂಲಿ ಗ್ರಾಮದಲ್ಲಿ ಶ್ರೀ ಪಾರ್ವತಾಂಭ ದೇವಿಯ ಭವ್ಯ ರಥೋತ್ಸವ ವಾದ್ಯಮೇಳ, ತಮಟೆ, ಛತ್ರಿ, ಛಾಮರ, ಸತ್ತಿಗೆ ಸೂರಪಾನಿಗಳ ನಡುವೆ ವಿಜೃಂಭಣೆಯಿಂದ ನಡೆಯಿತು ಭಕ್ತಾಧಿಗಳು ಗ್ರಾಮದ ಬೀದಿಗಳಲ್ಲಿ ರಥವನ್ನು ಎಳೆದು ಸಂಭ್ರಮಿಸಿದರು.

ಹೂವಿನ ತೇರು: ಪಾರ್ವತಾಂಭೆಯ ರಥವನ್ನು ಸುಮಾರು 4 ಟನ್‌ಗೂ ಹೆಚ್ಚು ಸೇವಂತಿಗೆ ಹೂವಿನಿಂದಲೇ ರಥವನ್ನು ಅಲಂಕರಿಸಿದ್ದು, ಗ್ರಾಮಸ್ಥರು ರಥ ಸಾಗುವ ಮಾರ್ಗದುದ್ದಕ್ಕೂ ಸೇವಂತಿಗೆ ಹೂ, ಕಜ್ಜಾಯ, ಬಾಳೆ ಹಣ್ಣು, ವೀಳ್ಯದೆಲೆಗಳನ್ನು ರಥಕ್ಕೆ ಎಸೆದು ಮತ್ತು ತೆಂಗಿನಕಾಯಿ ಒಡೆಯುತ್ತಿದ್ದುದು ಗಮನ ಸೆಳೆಯಿತು. ಹರಕೆಹೊತ್ತ ಭಕ್ತರು ಮತ್ತು ತಮ್ಮ ಕೋರಿಕೆ ಈಡೇರಿದ ಭಕ್ತರು ದೇವಿಗೆ ಚಿನ್ನದ ತಾಳಿ, ಮೂಗುತಿ, ಒಡವೆ ಸೇರಿದಂತೆ ಇನ್ನಿತರ ವಸ್ತುಗಳನ್ನು ಅರ್ಪಿಸಿ ಹರಕೆ ತೀರಿಸಿದರು ಜಾತ್ರಾ ಮಹೋತ್ಸವಕ್ಕೆ ಅಕ್ಕ–ಪಕ್ಕದ ಗ್ರಾಮಗಳಾದ ಕಬ್ಬಹಳ್ಳಿ, ನಿಟ್ರೆ, ಹಿರೀಬೇಗೂರು, ಗುಂಡ್ಲುಪೇಟೆ, ಬೇಗೂರು, ಚಿಕ್ಕಾಟಿ, ತೊಂಡವಾಡಿ, ಶೆಟ್ಟಹಳ್ಳಿ, ಆಲತ್ತೂರು, ಪಾಳ್ಯ, ರಾಘವಾಪುರ ಸೇರಿದಂತೆ ಲಕ್ಷಾಂತರ ಭಕ್ತರು ಪಾಲ್ಗೊಂಡಿದ್ದರು.

ವಿಧಾನಸಭಾ ಚುನಾವಣೆ ಕಾಂಗ್ರೆಸ್ ಟಿಕೆಟ್‌ಗಾಗಿ

ಚಾ.ನಗರ, ಹನೂರಿನಿಂದ ಹಾಲಿ ಶಾಸಕರು, ಕೊಳ್ಳೇಗಾಲದಿಂದ ಮೂವರು ಮಾಜಿ ಶಾಸಕರು, ಗುಂಡ್ಲುಪೇಟೆಯಿಂದ ಇಬ್ಬರಿಂದ ಅರ್ಜಿ

ಚಾಮರಾಜನಗರ, ನ.16– 2023ಕ್ಕೆ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದಿಂದ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಹನೂರು ಕ್ಷೇತ್ರದಿಂದ ಹಾಲಿ ಶಾಸಕ ಆರ್. ನರೇಂದ್ರ, ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಮೂವರು ಮಾಜಿ ಶಾಸಕರು ಗುಂಡ್ಲುಪೇಟೆಯಿಂದ ಇಬ್ಬರು ಮುಖಂಡರು ಅರ್ಜಿ ಸಲ್ಲಿಸಿದ್ದಾರೆ.

ಮುಂಬರುವ ವಿಧಾನಸಭಾ ಚುನಾವಣೆಗೆ ಪಕ್ಷದಿಂದ ಸ್ಪರ್ಧಿಸಲು ಬಯಸುವ ಆಕಾಂಕ್ಷಿಗಳಿಂದ ಕೆಪಿಸಿಸಿ ಅರ್ಜಿ ಆಹ್ವಾನಿಸಿತ್ತು. ಅರ್ಜಿ ಸಲ್ಲಿಸಲು ನವೆಂಬರ್ 15 ಕೊನೆ ದಿನ ಎಂದು ತಿಳಿಸಲಾಗಿತ್ತು. ಇದೀಗ ಈ ಅವಧಿಯನ್ನು ನ.21 ರವರೆಗೆ ವಿಸ್ತರಿಸಲಾಗಿದೆ. ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರದಿಂದ ಇದುವರೆಗೆ ಕಾಂಗ್ರೆಸ್ ಟಿಕೆಟ್ ಬಯಸಿ 6 ಆಕಾಂಕ್ಷಿಗಳು ಅರ್ಜಿ ಸಲ್ಲಿಸಿದ್ದಾರೆ.



ಸಿ.ಪುಟ್ಟರಂಗಶೆಟ್ಟಿ



ಆರ್. ನರೇಂದ್ರ

ಚಾಮರಾಜನಗರ ಕ್ಷೇತ್ರ: ಈ ಕ್ಷೇತ್ರದಿಂದ ಮತ್ತೊಮ್ಮೆ ಆಯ್ಕೆ ಬಯಸಿ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತ್ರ ಅರ್ಜಿ ಸಲ್ಲಿಸಿದ್ದಾರೆ ಎಂದು ಖಚಿತ ಮೂಲಗಳಿಂದ ತಿಳಿದು ಬಂದಿದೆ. ಹಾಲಿ ಶಾಸಕರಿಗೆ ಟಿಕೆಟ್ ದೊರೆಯುವುದು ಖಚಿತ ಎಂಬುದು ಸ್ಪಷ್ಟವಾಗಿರುವ ಕಾರಣ ದಿಂದಲೇ ಅಥವಾ ಏನೋ ಬೇರೆ ಬೇರೆ ಯಾರೊಬ್ಬರೂ ಸಹ ಅರ್ಜಿ ಸಲ್ಲಿಸಿಲ್ಲ. ಕ್ಷೇತ್ರದಲ್ಲಿ ಶಾಸಕರಾಗಬೇಕು ಎಂಬ ಆಸೆ ಅನೇಕರಿಗಿದ್ದರೂ ಸಹ ಅರ್ಜಿ ಸಲ್ಲಿಸಿಲ್ಲ. ಅರ್ಜಿ ಸಲ್ಲಿಸುವಾಗ ಕಟ್ಟಡ ನಿಧಿ ಎಂದು ಎರಡು ಲಕ್ಷ ರೂ.ಗೆ ಡಿಡಿ ತೆಗೆಯಬೇಕಾದ ಕಾರಣ ಸುಮ್ಮನೆ ಹಣ ಕಳೆದುಕೊಳ್ಳಬೇಕಾಗುತ್ತದೆ ಟಿಕೆಟ್ ಸಿಗಲ್ಲ ಎಂಬ ಮಾತು ಕೇಳಿ ಬಂದಿದೆ.

ಹನೂರು ಕ್ಷೇತ್ರ: ಹನೂರು ಕ್ಷೇತ್ರದಲ್ಲೂ ಸಹ ಹಾಲಿ ಶಾಸಕ ಆರ್. ನರೇಂದ್ರ ಒಬ್ಬರು ಮಾತ್ರ ಅರ್ಜಿ ಸಲ್ಲಿಸಿದ್ದಾರೆ. ಬೇರೆ ಯಾರೂ ಸಹ ಅರ್ಜಿ ಸಲ್ಲಿಸುವ ಕಾರ್ಯದಿಂದ ದೂರ ಉಳಿದಿದ್ದಾರೆ.

ಗುಂಡ್ಲುಪೇಟೆ ಕ್ಷೇತ್ರ: ಈ ಕ್ಷೇತ್ರದಿಂದ ಸ್ಪರ್ಧೆ ಬಯಸಿ, ಮಾಜಿ ಸಚಿವರಾದ ಹೆಚ್.ಎಸ್. ಮಹದೇವಪ್ರಸಾದ್ ಹಾಗೂ ಗೀತಾ ಮಹದೇವಪ್ರಸಾದ್ ಅವರ ಪುತ್ರ ಹೆಚ್.ಎಂ. ಗಣೇಶ್ ಪ್ರಸಾದ್ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ. ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ ಅವರು ಈಗಾಗಲೇ ಅರ್ಜಿ ಪಡೆದಿದ್ದು, ನಾಳೆ (ಗುರುವಾರ) ಕೆಪಿಸಿಸಿಗೆ ಡಿಡಿಯೊಂದಿಗೆ ಸಲ್ಲಿಸಲಿದ್ದೇನೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕೊಳ್ಳೇಗಾಲ ಕ್ಷೇತ್ರ: ಈ ಮೀಸಲು ಕ್ಷೇತ್ರದಿಂದ ಸ್ಪರ್ಧೆ ಬಯಸಿ ಮಾಜಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಸ್. ಬಾಲರಾಜು ಹಾಗೂ ಎಸ್. ಜಯಣ್ಣ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ. ಈ ಮೂವರು ಸಹ ಟಿಕೆಟ್ ಪಡೆಯಲು ಪ್ರಬಲ ಪೈಪೋಟಿ ನಡೆಸುತ್ತಿದ್ದಾರೆ. ತಮ್ಮ ರಾಜಕೀಯ ಗಾಡ್‌ಫಾದರ್‌ಗಳ ಮೂಲಕ ಪಕ್ಷದ ವರಿಷ್ಠರಿಗೆ ಒತ್ತಡ ಹಾಕುತ್ತಿರುವುದು ವರಿಷ್ಠರಿಗೆ ತಲೆನೋವು ತಂದಿದೆ.

ಪ್ರತಿ ಟನ್ ಕಬ್ಬಿಗೆ 2,949 ರೂ. ಗಳ ಬೆಲೆ ನಿಗದಿ

ಚಾಮರಾಜನಗರ, ನ.16– ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಕುಂತೂರು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ವ್ಯಾಪ್ತಿಗೆ 9.92 ಶೇಕಡ ಇಳುವರಿ ಪ್ರಮಾಣದಂತೆ 2022–23ನೇ ಸಾಲಿಗೆ ಪ್ರತಿ ಟನ್ ಕಬ್ಬಿಗೆ 2,949 ರೂ. ದರ ನಿಗದಿ ಪಡಿಸಲಾಗಿದೆ.

ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಪತ್ರ ಸಂಖ್ಯೆ:ಡಿಎಸ್‌ಕೆ/ಎಸ್‌ಕೆ/04/2022–23 ದಿನಾಂಕ:18–10–2022 ರಂತೆ ಕೊಳ್ಳೇಗಾಲ ತಾಲೂಕಿನ ಕುಂತೂರು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ವ್ಯಾಪ್ತಿಗೆ 9.92 ಶೇಕಡ ಇಳುವರಿ ಪ್ರಮಾಣದಂತೆ 2022–23ನೇ ಸಾಲಿಗೆ ಪ್ರತಿ ಟನ್ ಕಬ್ಬಿಗೆ 2,949 ರೂ. ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ) ದರವನ್ನು ನಿಗದಿಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಯವರಾದ ಡಿ.ಎಸ್. ರಮೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಾಬುಜಗಜೀವನ್ ರಾಂ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣ ಸಂಬಂಧ ನಿವೇಶನ ಕುರಿತಂತೆ ಅಧಿಕಾರಿಗಳು ಲೋಪವೆಸಗಿದ್ದಾರೆ ಎಂದು ಆರೋಪಿಸಿ, ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರಿಗೆ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ಗು. ನಾಗರಾಜ್, ನಗರಸಭೆ ಸದಸ್ಯ ಮಹದೇವಯ್ಯ, ಯಜಮಾನ್ ಲಿಂಗಯ್ಯ, ಆರ್.ಎಂ.ಶಿವಣ್ಣ, ಚನ್ನಬಸವಯ್ಯ, ಕುಮಾರ್, ಮರಪ್ಪ, ಮಹೇಶ್, ಬಸವಣ್ಣ, ನಿಂಗಯ್ಯ ಇತರರು ಮನವಿ ಸಲ್ಲಿಸಿದರು.

ಬಾರ್ ತೆರವುಗೊಳಿಸಲು ತಾಲೂಕು ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿ ಆಗ್ರಹ



ಯಳಂದೂರು, ನ.16– ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಎದುರು ಇರುವ ಎಸ್‌ಜಿಆರ್ ಬಾರ್ ಅಂಡ್ ರೆಸ್ಟೋರೆಂಟ್ ತೆರವುಗೊಳಿಸುವಂತೆ ತಾಲೂಕು ಡಾ.ಬಿ.ಆರ್. ಅಂಬೇಡ್ಕರ್ ಸೇವಾ ಸಮಿತಿ ತಹಶೀಲ್ದಾರ್ ಅನಂದಪ್ಪ ನಾಯಕರವರಿಗೆ ಮನವಿ ಸಲ್ಲಿಸಿದರು.

ಅಂಬೇಡ್ಕರ್ ಸೇವಾ ಸಮಿತಿಯ ತಾಲೂಕು ಅಧ್ಯಕ್ಷ ಹೊನ್ನೂರು ರೇವಣ್ಣ ಮಾತನಾಡಿ, ಯಳಂದೂರು ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರುವ ಡಾ.ಬಿಆರ್.ಅಂಬೇಡ್ಕರ್ ಸಮುದಾಯದ ಭವನವು ತಾಲೂಕಿನ 33 ಗ್ರಾಮದ ದಲಿತ ಜನಾಂಗದ ಬಹುದೊಡ್ಡ ಆಶಾದಾಯಕ ಕಟ್ಟಡವಾಗಿದೆ. ಇಲ್ಲಿ ಅನೇಕ ಕಾರ್ಯಕ್ರಮಗಳು, ಮದುವೆಗಳ, ಶಿಬಿರಗಳು ನಡೆಯುತ್ತದೆ ಹಾಗೂ ಆವರಣದೊಳಗೆ ಬೌದ್ಧ ಕೇಂದ್ರವಿದ್ದು, ಪ್ರತಿನಿತ್ಯ ಧ್ಯಾನ ನಡೆಯುತ್ತದೆ ಹಾಗೂ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ರವರ ಬೃಹತ್ ಪುತ್ಥಳಿ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. 33 ಗ್ರಾಮದ ದಲಿತ ಜನಾಂಗದ ನೆಚ್ಚಿನ ತಾಣವಾಗಿದೆ. ಆದರೆ ಸಮುದಾಯ ಭವನದ ಮುಂದೆ ಇರುವ ಎಸ್‌ಜಿಆರ್ ಬಾರ್ ಅಂಡ್ ರೆಸ್ಟೋರೆಂಟ್ ಇದ್ದು, ಪ್ರತಿದಿನ ಬಾರ್ ನಿಂದ ಮದ್ಯವನ್ನು ಪಡೆದು ಸಮುದಾಯದ ಭವನದ ಮುಂದೆ ಕುಡಿದು ಅಲ್ಲಿಯೇ ಬಿಟ್ಟು ಹೋಗುತ್ತಾರೆ ಇದರಿಂದ ದಲಿತ ಸಮುದಾಯಕ್ಕೆ ನೋವಿನ ಸಂಗಾತಿಯಾಗಿದೆ. ಕಾನೂನಿನ ನಿಯಮದ ಪ್ರಕಾರ ರಾಷ್ಟ್ರೀಯ ಹೆದ್ದಾರಿ ಹಾಗೂ ರಾಷ್ಟ್ರನಾಯಕರ ಪುತ್ಥಳಿ ಇರುವ ಸ್ಥಳದಿಂದ 500 ಮೀಟರ್ ಅಂತರದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಇರುವಂತಿಲ್ಲ ಈ ಬಗ್ಗೆ ಸಾಕಷ್ಟು ಬಾರಿ ಎಸ್ಸಿ, ಎಸ್ಟಿ ಹಿತರಕ್ಷಣಾ ಸಭೆಯಲ್ಲಿ ಪ್ರಸ್ತಾಪಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಈ ಬಾರ್ ಅನ್ನು ತೆರವುಗೊಳಿಸಬೇಕೆಂದು ತಿಳಿಸಿದರು.

ತಕ್ಷಣ ತಹಶೀಲ್ದಾರ್ ಆನಂದಪ್ಪ ನಾಯಕ ಸ್ಥಳಕ್ಕೆ ಆಗಮಿಸಿ ಬಿದ್ದಿರುವ ಪೌಚ್‌ಗಳನ್ನು ನೋಡಿ ಬಾರ್ ಸಿಬ್ಬಂದಿ ಕರೆದು ತರಾಟೆ ತೆಗೆದುಕೊಂಡರು. ಈ ಸಂದರ್ಭದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿಯ ಉಪಾಧ್ಯಕ್ಷ ಎಂ. ಚಕ್ರವರ್ತಿ ಹಾಜರಿದ್ದರು.

ಇಂದು ವಿದ್ಯುತ್ ಜನಸಂಪರ್ಕ ಸಭೆ

ಚಾಮರಾಜನಗರ, ನ.16– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಅಧೀಕ್ಷಕ ಎಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ನವೆಂಬರ್ 18ರಂದು ಮಧ್ಯಾಹ್ನ 12.30 ರಿಂದ 1.30 ಗಂಟೆಯವರೆಗೆ ತಾಲೂಕಿನ ಹರದನಹಳ್ಳಿಯ ನಿಗಮದ ಉಪವಿಭಾಗದ ಕಚೇರಿಯಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಳ್ಳಲಾಗಿದೆ ಸಾರ್ವಜನಿಕರು ಸಭೆಗೆ ಹಾಜರಾಗಿ ವಿದ್ಯುತ್ ಸಂಬಂಧಿತ ಕುಂದು ಕೊರತೆಗಳಿದ್ದಲ್ಲಿ ತಿಳಿಸಿ ಪರಿಹರಿಸಿಕೊಳ್ಳುವಂತೆ ನಿಗಮದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾಸ್ಪತ್ರೆಯ ಓಪಿಡಿ ಸ್ಥಳಾಂತರ ಮಾಡಿದರೆ ಚಾ.ನಗರ ಬಂದ್: ವಾಟಾಳ್ ನಾಗರಾಜ್ ಎಚ್ಚರಿಕೆ



ಚಾಮರಾಜನಗರ, ನ.16– ಚಾ.ನಗರ ಸರ್ಕಾರಿ ಜಿಲ್ಲಾಸ್ಪತ್ರೆಯ ಹೊರರೋಗಿ ವಿಭಾಗವನ್ನು ಸ್ಥಳಾಂತರ ಮಾಡಿದರೆ ಚಾ.ನಗರ ಬಂದ್ ಮಾಡಬೇಕಾಗುತ್ತದೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ಎಚ್ಚರಿಸಿದರು.

ನಗರದ ಸರ್ಕಾರಿ ಜಿಲ್ಲಾಸ್ಪತ್ರೆ ಮುಂಭಾಗದಲ್ಲಿ ತಮ್ಮ ಬೆಂಬಲಿಗರೊಂದಿಗೆ ಜಿಲ್ಲಾಸ್ಪತ್ರೆ ಓಪಿಡಿ ಸ್ಥಳಾಂತರ ವಿರೋಧಿಸಿ ಪ್ರತಿಭಟನೆ ನಡೆಸಿ, ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ಜಿಲ್ಲಾಸ್ಪತ್ರೆಯ ಓಪಿಡಿಯನ್ನು ಎಡಬೆಟ್ಟದಲ್ಲಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ಭೋದನಾ ಆಸ್ಪತ್ರೆಗೆ ಸ್ಥಳಾಂತರ ಮಾಡಬಾರದು ಎಂದು ಆಗ್ರಹಿಸಿದರು.

ಜಿಲ್ಲಾಸ್ಪತ್ರೆ ಮಾಡಿಸಿದ್ದು ನಾನು. ಹೊರ ರೋಗಿಗಳು ಎಲ್ಲಿಗೆ ಹೋಗಬೇಕು. ಮೆಡಿಕಲ್ ಕಾಲೇಜು ಇರುವುದು ಸುಮಾರು 10 ಕಿಮಿ ದೂರದಲ್ಲಿ. ಹೊರರೋಗಿಗಳು ಯಾವ ರೀತಿ ಹೋಗಬೇಕು. ವಾಹನ ವ್ಯವಸ್ಥೆ ಇಲ್ಲ. ಹೆಚ್ಚಿನ ದುಡ್ಡುಕೊಟ್ಟು ಹೋಗಬೇಕು? ಅಲ್ಲಿಗೆ ತೀವ್ರ ಅನಾರೋಗ್ಯ ಇರುವವರು ತಕ್ಷಣದಲ್ಲಿ ಡಾಕ್ಟರ್ ನೋಡಬೇಕಾದದರೆ ಇಲ್ಲಿ ಹೊರ ರೋಗಿಗಳ ವಿಭಾಗ ಇಲ್ಲದಿದ್ದರೆ ಅನೇಕರು ತಮ್ಮ ಪ್ರಾಣವನ್ನು ಕಳೆದುಕೊಳ್ಳಬಹುದು. ಇದು ನಿಜಕ್ಕೂ ಸರ್ಕಾರಕ್ಕೆ ಒಳಿತಲ್ಲ. ಯಾವುದೇ ಕಾರಣಕ್ಕೂ ನಾವು ಹೊರರೋಗಿ ವಿಭಾಗವನ್ನು ಹೊರಗಡೆ ಸ್ಥಳಾಂತರ ಮಾಡಲು ಬಿಡುವುದಿಲ್ಲ. ಇದನ್ನು ಸ್ಥಳಾಂತರ ಮಾಡಿದರೆ ಇಡೀ ಚಾಮರಾಜನಗರವನ್ನು ಬಂದ್ ಮಾಡುವುದಾಗಿ, ಬೃಹತ್ ಮಟ್ಟದಲ್ಲಿ ಹೋರಾಟ ಆಗಿ ಸಾವಿರಾರು ಜನರ ಬಂಧನ ಆಗುತ್ತದೆ, ವಾಟಾಳ್ ನಾಗರಾಜು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಶ್ರೀನಿವಾಸಗೌಡ, ನಿಜಧ್ವನಿಗೋವಿಂದರಾಜು, ಶಿವಲಿಂಗಮೂರ್ತಿ, ಚಾ.ರಾ.ಕುಮಾರ್, ರವಿಚಂದ್ರಪ್ರಸಾದ್ ಕಹಳೆ, ರೇವಣ್ಣಸ್ವಾಮಿ, ಅಜಯ್, ಪಾರ್ಥಸಾರಥಿ, ಅಂಬರೀಶ್, ಬಸಪ್ಪನಪಾಳ್ಯ ಕುಮಾರ್, ವಿನೋದ್, ಸಾಗರ್‌ಭರತ್ ಇತರರು ಭಾಗವಹಿಸಿದ್ದರು.

ಹಣದುಬ್ಬರ ನಿಯಂತ್ರಿಸಲಾಗದ ಬಿಜೆಪಿ 'ಬೊಗಳೆ ಬಿಡುವ ಪಕ್ಷ'

- ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ
- ಮಾಧ್ಯಮಗಳ ಮೂಲಕ ಸುಳ್ಳು ಸಾರುವ ಕೆಲಸವಾಗುತ್ತಿದೆ
- ದೇಶದ ಜನರಿಗೆ ವಾಸ್ತವ ಸಂಗತಿ ತಿಳಿಸಲು ಆಗ್ರಹ

ಬೆಂಗಳೂರು, ನ.16(ಕೆಎಂಶಿ)–ಹಣದುಬ್ಬರ ನಿಯಂತ್ರಿಸಲಾಗದ ಬಿಜೆಪಿ



ಸರ್ಕಾರಗಳು ಜನರಿಗೆ ಶಾಪದಂತೆ ಎಂದು ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ. ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರವು ದೇಶದಲ್ಲಿ ಹಣದುಬ್ಬರ ಕಡಿಮೆಯಾಗಿದೆ ಎಂದು ಹೇಳಿದೆ. ಈ ಸುಳ್ಳು ಮಾಹಿತಿಯನ್ನು ದೇಶದ ಎಲ್ಲ ಮಾಧ್ಯಮಗಳಲ್ಲಿ ಪ್ರಸಾರ ಮಾಡುವಂತೆ ನೋಡಿಕೊಂಡಿದೆ ಎಂದು ಅವರು ಪತ್ರಿಕಾ ಹೇಳಿಕೆ ಮೂಲಕ ಕಿಡಿಕಾರಿದ್ದಾರೆ. ಚುನಾವಣೆಗಳು ಹತ್ತಿರ ಬರುತ್ತಿರುವುದರಿಂದ ರಾಜನಿಗೆ ಬೇಕಾದಂತಹ ವರದಿಗಳನ್ನು ವಾಸ್ತವಕ್ಕೆ ವಿರುದ್ಧವಾಗಿ ತಿರುಗಾ ಮುರುಗಾ ಮಾಡಿ ಸಿದ್ಧ ಮಾಡಿಕೊಟ್ಟಂತೆ ಕಾಣುತ್ತಿದೆ. ಇದರಿಂದಾಗಿ ಬಿಜೆಪಿ ಎಂಬುದು ದಿಲ್ಲಿಯಿಂದ ಹಳ್ಳಿಯವರೆಗೆ 'ಬೊಗಳೆ ಬಿಡುವ ಪಕ್ಷ' ಎಂದು ಪದೇ ಪದೇ ಸಾಬೀತಾಗುತ್ತಿದೆ.

ಒಂದನೇ ಪುಟದಿಂದ

ಹುಲಿಯ ಮರಿಗಳು ಸೇಫ್

ಹುಲಿಯ ಕಳೇಬರ ಕೊಳೆತ ಸ್ಥಿತಿಯಲ್ಲಿ ಅರಣ್ಯ ಸಿಬ್ಬಂದಿಗಳಿಗೆ ದೊರೆತಿತ್ತು. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳ ಆದೇಶದಂತೆ ಮರಿಗಳ ರಕ್ಷಣೆಗೆ ಕಾರ್ಯಾಚರಣೆ ಆರಂಭಿಸಲಾಗಿತ್ತು.

4 ಆನೆ, 120 ಸಿಬ್ಬಂದಿ, 30 ಕ್ಯಾಮರಾ ಬಳಕೆ: ಅಸಹಾಯಕ ಹುಲಿ ಮರಿಗಳ ರಕ್ಷಣೆಗೆ ಕಾರ್ಯಾಚರಣೆ ಆರಂಭಿಸಲಾಗಿತ್ತು. ತಾಯಿ ಹುಲಿ ಕಳೇಬರ ದೊರೆತ ದಿನದಂದು ಸಂಜೆ ವೇಳೆಗೆ ವಿವಿಧೆಡೆ ಕ್ಯಾಮರಾ ಅಳವಡಿಸಲಾಗಿತ್ತು. ನ.13ರಂದು ಸಾಕಾನೆಗಳಾದ ಅಭಿಮನ್ಯು, ಭೀಮಾ, ಮಹೇಂದ್ರ ಹಾಗೂ ಗಣೇಶನ ಬಳಸಿಕೊಂಡು, 120 ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಲಾಗಿತ್ತು. ಎರಡು ದಿನ ಯಾವುದೇ ಮಾಹಿತಿ ಸಿಕ್ಕಿರಲಿಲ್ಲ. ಆದರೆ ಕೆಲವೆಡೆ ಹೆಜ್ಜೆ ಗುರುತು ಪತ್ತೆಯಾಗಿತ್ತು. ನಂತರ ಎರಡು ಡ್ರೋನ್ ಬಳಸಿ ಕಾರ್ಯಾಚರಣೆಯನ್ನು ಮತ್ತಷ್ಟು ಚುರುಕುಗೊಳಿಸಲಾಗಿತ್ತು. ಈ ವೇಳೆ ನ.14ರಂದು ಜಿಂಕೆಯನ್ನು ಯಾವುದೋ ಪ್ರಾಣಿ ಬೇಟೆಯಾಡಿ, ಅದರ ಮಾಂಸ ಸೇವಿಸಿತ್ತು. ಅನುಮಾನದ ಮೇರೆಗೆ ಜಿಂಕೆ ಕಳೇಬರ ಇದ್ದ ಸ್ಥಳದಲ್ಲಿ ಕ್ಯಾಮರಾ ಅಳವಡಿಸಲಾಗಿತ್ತು. ನ.15ರಂದು ರಾತ್ರಿ ಮೂರು ಹುಲಿ ಮರಿಗಳು ಉಳಿದಿದ್ದ ಜಿಂಕೆ ಮಾಂಸ ತಿನ್ನಲು ಬಂದಿರುವ ದೃಶ್ಯ ದಾಖಲಾಗಿದೆ. ಈ ಮೂರು ಮರಿಗಳೂ ಲವಲವಿಕೆಯಿಂದ ಕೂಡಿದ್ದು, ಜಿಂಕೆ ಮಾಂಸ ಸೇವಿಸುತ್ತಿರುವ ದೃಶ್ಯ ಕಂಡು ಬಂದಿದೆ.

ಅಸ್ತಿತ್ವಕ್ಕೆ ಧಕ್ಕೆ ಇಲ್ಲ: ಕ್ಯಾಮರಾದಲ್ಲಿ ಸೆರೆ ಸಿಕ್ಕ ದೃಶ್ಯವನ್ನು ಹಿರಿಯ ಅಧಿಕಾರಿಗಳು, ವನ್ಯಜೀವಿ ತಜ್ಞರು ಸೂಕ್ಷ್ಮವಾಗಿ ಪರಿಶೀಲಿಸಿ, ಹುಲಿ ಮರಿಗಳು ಸ್ವತಂತ್ರವಾಗಿ ಬೇಟೆಯಾಡುವ ಸಾಮರ್ಥ್ಯ ಹೊಂದಿರುವುದಾಗಿ ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ, ಅವುಗಳನ್ನು ಸೆರೆ ಹಿಡಿಯದೇ, ಅವು ಸ್ವಚ್ಛಂದವಾಗಿರಲು ಅನುವು ಮಾಡಿಕೊಡುವುದು ಸೂಕ್ತ ಎಂದು ಸಲಹೆ ನೀಡಲಾಗಿದೆ. ಇದರಿಂದ ಸೆರೆ ಹಿಡಿಯುವ ಕಾರ್ಯಾಚರಣೆಯಿಂದ ಅರಣ್ಯ ಇಲಾಖೆ ಹಿಂದೆ ಸರಿದಿದೆ.

ಮುಂದುವರೆಯಲಿದೆ ಕಣ್ಗಾವಲು: ಹುಲಿ ಮರಿಗಳು ವಿಹರಿಸಬಹುದಾದ ತಾರಕ ಹಳ್ಳ, ಹೊಳೆ ದಡ ಮತ್ತು ಹಿನ್ನೀರಿನ ಪ್ರದೇಶದಲ್ಲಿ ಕಣ್ಗಾವಲು ಮುಂದುವರೆಸಲು ನಿರ್ಧರಿಸಲಾಗಿದೆ. ಕೂಂಬಿಂಗ್ ಕಾರ್ಯಾಚರಣೆಗೆ ಬಳಸಿಕೊಂಡಿರುವ ಆನೆಗಳೊಂದಿಗೆ ಇನ್ನಷ್ಟು ದಿನ ಹುಲಿ ಮರಿಗಳ ಚಲನವಲನ ಗಮನಿಸಲು ಚಿಂತಿಸಲಾಗಿದೆ.

ಇನ್ನಷ್ಟು ಪರಿಣತಿ ಅಗತ್ಯ: ಹುಲಿ ಮರಿಗಳು ಸ್ವಯಂ ಬೇಟೆಯಾಡುವ ಸಾಮರ್ಥ್ಯ ಹೊಂದಿವೆ. ಈ ಮರಿಗಳಿಗೆ ಈಗ 10 ತಿಂಗಳು ಇರಬೇಕೆಂದು ಅಂದಾಜಿಸಲಾಗಿದ್ದು, ಅರಣ್ಯ ಪ್ರದೇಶಕ್ಕಿಂತ ಈಗ ಅವು ಇರುವ ಪ್ರದೇಶದಲ್ಲಿಯೇ ಜಿಂಕೆ, ಕಾಡಂದಿ ಬೇಟೆಯಾಡುವ ಸಾಮರ್ಥ್ಯ ವೃದ್ಧಿಸಿಕೊಂಡರೆ 3–4 ತಿಂಗಳ ನಂತರ ಅರಣ್ಯ ಪ್ರದೇಶಕ್ಕೆ ಹುಲಿ ಮರಿಗಳು ವಲಸೆ ಹೋಗುತ್ತವೆ ಎಂದು ಭಾವಿಸಲಾಗಿದೆ.

ಪ್ರಾಣಿ ಪ್ರಿಯರ ಸಮಾಧಾನ: ಹುಲಿ ಮರಿಗಳ ಸೆರೆ ಉದ್ದೇಶದಿಂದ ಹಿಂದೆ ಸರಿದ ಕ್ರಮವನ್ನು ವನ್ಯಜೀವಿ ಪ್ರೇಮಿಗಳು ಸ್ವಾಗತಿಸಿದ್ದಾರೆ. ಎರಡು ದಿನದ ಹಿಂದೆಯೇ ಮರಿಗಳನ್ನು ಸೆರೆ ಹಿಡಿಯದಂತೆ ಅಭಿಯಾನ ಆರಂಭಿಸಿದ್ದರು. ಹುಲಿ ಮರಿಗಳು ಅಲ್ಲಿಯೇ ನೆಲೆ ನಿಲ್ಲುವ ವಾತಾವರಣ ಕಲ್ಪಿಸುವಂತೆ ಆಗ್ರಹಿಸಿದ್ದರು. ಯಾವುದೇ ಕಾರಣಕ್ಕೂ ಮೃಗಾಲಯ ಅಥವಾ ಪುನರ್ವಸತಿ ಕೇಂದ್ರಕ್ಕೆ ಕೊಂಡೊಯ್ಯದಂತೆ ಮನವಿ ಮಾಡಿದ್ದರು. ಇದೀಗ ಅರಣ್ಯ ಇಲಾಖೆ, ಸೆರೆ ಹಿಡಿಯುವ ನಿರ್ಧಾರದಿಂದ ಹಿಂದೆ ಸರಿದಿರುವುದಕ್ಕೆ ಪ್ರಶಂಸೆ ವ್ಯಕ್ತವಾಗುತ್ತಿದೆ. ಕಾರ್ಯಾಚರಣೆಯಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ಹರ್ಷಕುಮಾರ್ ನರಗುಂದ, ಅಂತರಸಂತೆ ವಲಯದ ಎಸಿಎಫ್ ರಂಗಸ್ವಾಮಿ, ಅಂತರಸಂತೆ ಆರ್‌ಎಫ್‌ಓ ಸಿದ್ದರಾಜು, ಡಿ.ಬಿ.ಕುಪ್ಪೆ ಆರ್‌ಎಫ್‌ಓ ಮಧು, ಮೇಟಿಕುಪ್ಪೆ ಆರ್‌ಎಫ್‌ಓ ಹರ್ಷಿತ್ ಸೇರಿದಂತೆ ಇನ್ನಿತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ನಗರ ನಿರ್ಮಾಣ

ಸಾಕಷ್ಟು ಸವಾಲು ಗಳನ್ನು ಎದುರಿಸುತ್ತಿದ್ದೇವೆ. ಜಗತ್ತು ಸಮಸ್ಯೆ ಗಳಿಂದ ಮುಳುಗುತ್ತಿದೆ. ಹಣಕಾಸು ಮೂಲ ಗಳು ಪ್ರತಿ ಕ್ಷಣವೂ ಇಳಿಮುಖವಾಗುತ್ತಿದೆ. ನಾವು ಪರಿಹಾರ ಕಂಡುಕೊಳ್ಳದಿದ್ದರೆ ಭವಿಷ್ಯ ದಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದರು. ನಮ್ಮ ಪೂರ್ವಜರು ವ್ಯವಸ್ಥಿತವಾದ ಜೀವನ ಮಾಡುತ್ತಿದ್ದರು. ನಾವು ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ನೀಡಬೇಕು. ಭವಿಷ್ಯಕ್ಕಾಗಿ ಭೂಮಿಯನ್ನು ಉಳಿಸುವ ನಿಟ್ಟಿನಲ್ಲಿ ಜಾಗತಿಕವಾಗಿ ಚಿಂತನೆ ಅಗತ್ಯ. ಯಾವುದೇ ತಂತ್ರಜ್ಞಾನ ಬಂದರೂ ಈ ಪರಿಸರವನ್ನು ಉಳಿಸುವ ಗುಣ ಹೊಂದಿರಬೇಕು. ಡಿಜಿಟಲ್ ಅಂತರವನ್ನು ಕಡಿಮೆ ಮಾಡುವತ್ತಲೂ ನಾವು ಗಮನಹರಿಸ ಬೇಕು. ಪರಿಸರ ಸ್ನೇಹಿ ವಾತಾವರಣ ಹೊಂದಬೇಕು. ಪರಿಸರ ಸ್ನೇಹಿ ತಂತ್ರಜ್ಞಾನ, ನಾವೀನ್ಯತೆ ಹಾಗೂ ಇಕೋ ಇಕನಾಮಿಕ್ಸ್ ಅನ್ನು ಸಾಧ್ಯವಾಗಿಸಬೇಕು. ಐಟಿ–ಬಿಟಿ, ಕೃತಕ ಬುದ್ಧಿಮತ್ತೆ ನಮ್ಮ ಸಂಪನ್ಮೂಲಗಳನ್ನು ಉಳಿಸಿ ರಕ್ಷಣೆ ಮಾಡುವ ಸಾಧ್ಯತೆ ಇದೆ. ಮಾನವ ಕುಲಕ್ಕೆ ಯಾವುದು ಅನುಕೂಲವಾಗುತ್ತದೆ ಎನ್ನುವುದನ್ನು ನೀವೇ ಪರೀಕ್ಷಿಸಬೇಕು. ತಂತ್ರಜ್ಞಾನ ನಮಗೆ ಮಾಹಿತಿಯ ಕಣಜವನ್ನೇ ನಮ್ಮ ಮುಂದಿರಿಸಿದೆ. ನವೀಕರಿಸಬಹುದಾದ ಇಂಧನ ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿದೆ ಎಂದರು.

ಮೈಸೂರು ಮಹಾರಾಜರು ವಿಜ್ಞಾನ ತಂತ್ರಜ್ಞಾನಕ್ಕೆ, ಶಿಕ್ಷಣಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ನಂತರ ಉದ್ಯಮಕ್ಕೆ ಆದ್ಯತೆ ನೀಡಿದ್ದಾರೆ. ಈಗ ಐಟಿ–ಬಿಟಿ ಬಂದಿದೆ. ಬೆಂಗಳೂರಿಗೆ ಬಂದವರು ಐಟಿ–ಬಿಟಿ ಕಂಪನಿಗಳಿಗೆ ಭೇಟಿ ನೀಡುತ್ತಾರೆ. ಮೊದಲು ಸಂಪತ್ತು ಉಳ್ಳವರ ಕಾಲವಿತ್ತು. ಈಗ ಜ್ಞಾನ ಇರುವವರ ಕಾಲ. ಬೆಂಗಳೂರಿಗೆ ಪ್ರತಿದಿನ 5000ಕ್ಕೂ ಹೆಚ್ಚು ಇಂಜಿನಿಯರ್‌ಗಳು ಬಂದು ಹೋಗುತ್ತಾರೆ. ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ ಕಡೆಗಳಲ್ಲಿ ಐಟಿ ಉದ್ಯಮಕ್ಕೆ ಆದ್ಯತೆ ನೀಡುತ್ತೇವೆ.

ಮುಂದಿನ 10 ವರ್ಷದಲ್ಲಿ ನಗರೀಕರಣ ಹೆಚ್ಚಳವಾಗಲಿದೆ. ಭಾರತದಲ್ಲಿ ಶೇ.40ರಷ್ಟು ನಗರೀಕರಣವಾಗಲಿದೆ. ಹೀಗಾಗಿ ಐಟಿ–ಬಿಟಿ ಕಂಪನಿಗಳು ಸರಳ ನಗರೀಕರಣ ಜೀವನ ನಿರ್ವಹಣೆಗೆ ತಂತ್ರಜ್ಞಾನ ಅಭಿವೃದ್ಧಿಪಡಿಸಲು ಕರೆ ನೀಡಿದರು. ಆರೋಗ್ಯ ಕ್ಷೇತ್ರದಲ್ಲಿಯೂ ತಂತ್ರಜ್ಞಾನ ಬಳಕೆ ಮಾಡುವ ಮೂಲಕ ಆರೋಗ್ಯಯುತ ಸಮಾಜ ನಿರ್ಮಾಣ ಮಾಡಬೇಕು. ದೇಶದಲ್ಲಿ ಒಂದು ವರ್ಷದಲ್ಲಿ ಜಲ ಜೀವನ್ ಮಿಷನ್ ಅಡಿಯಲ್ಲಿ 7 ಕೋಟಿ ಮನೆಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತಿದೆ.

100 ಟ್ರಿಲಿಯನ್ ಡಾಲರ್ ವಿನಿಯೋಗ

ಹೆಲ್ತ್ ಟೆಕ್, ಫಿನ್ ಟೆಕ್, ಎಡುಟೆಕ್ ಸೇರಿದಂತೆ ಎಲ್ಲ ರಂಗಗಳನ್ನೂ ಭಾರತೀಯರು ಜಾಗತಿಕ ಮಟ್ಟದಲ್ಲಿ ಮುನ್ನಡೆಸುತ್ತಿದ್ದಾರೆ. ಯುವಶಕ್ತಿಯಿಂದ ಕೂಡಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿಭೆಯ ಜಾಗತೀಕರಣ ನಡೆಯುತ್ತಿದೆ. ದೇಶದ 81 ಸಾವಿರ ನವೋದ್ಯಮ ಗಳಿದ್ದು, ಯೂನಿಕಾರ್ನ್‌ಗಳಲ್ಲಿ ಪ್ರಪಂಚದ 3ನೇ ಅತೀ ದೊಡ್ಡ ಹಬ್ ಆಗಿದೆ. ಜತೆಗೆ, ಜಾಗತಿಕ ನಾವೀನ್ಯತಾ ಸೂಚ್ಯಂಕದಲ್ಲಿ ಭಾರತದ ಸ್ಥಾನಮಾನವು ಕಳೆದ ಎಂಟು ವರ್ಷಗಳಲ್ಲಿ 40 ಸ್ಥಾನಗಳಷ್ಟು ಮೇಲಕ್ಕೆ ಜಿಗಿದಿದೆ ಎಂದು ಅವರು ನುಡಿದರು.

ತಂತ್ರಜ್ಞಾನದ ಮೂಲಕ ದೇಶದಲ್ಲಿ ಸಮಾನತೆ ಮತ್ತು ಸಬಲೀಕರಣಗಳನ್ನು ಸಾಧಿಸಲಾಗುತ್ತಿದೆ. ಜತೆಗೆ, ಭ್ರಷ್ಟಾಚಾರಕ್ಕೂ ಇದು ತೆರೆ ಎಳೆದಿದೆ. ಭಾರತವಂತೂ ಈಗ ಮಾಹಿತಿ ಸೂಪರ್ ಹೈವೇ ಆಗಿದೆ. ಕೊರೊನಾ ಪಿಡುಗಿನ ವಿರುದ್ಧ ಹೋರಾಟ, ಶಿಕ್ಷಣ, ನೇರ ನಗದು ವರ್ಗಾವಣೆ, ಜನ್‌ಧನ್, ಆಧಾರ್, ಇ–ಮಾರ್ಕೆಟ್ ಎಲ್ಲವನ್ನೂ ಭಾರತವು ತಂತ್ರಜ್ಞಾನದ ಸಮರ್ಥ ಬಳಕೆಯ ಮೂಲಕ ಯಶಸ್ವಿಯಾಗಿ ಕೈಗೊಂಡಿದೆ ಎಂದು ಮೋದಿ ವಿವರಿಸಿದರು. ಹೂಡಿಕೆದಾರರ ನಂಬಿಕೆ ಮತ್ತು ದೇಶದಲ್ಲಿರುವ ತಂತ್ರಜ್ಞಾನದ ಶಕ್ತಿ ಎರಡೂ ಸೇರಿದರೆ, ಎಲ್ಲ ಸಮಸ್ಯೆಗಳಿಗೂ ಪರಿಹಾರ ಸಾಧ್ಯವಾಗಲಿದೆ. ಇದು ಸಣ್ಣಪುಟ್ಟ ವ್ಯಾಪಾರಿಗಳಿಗೆ ಅನುಕೂಲಕರವಾಗಿದ್ದು, ದೊಡ್ಡ ಗ್ರಾಹಕರನ್ನು ಸೃಷ್ಟಿಸಿದೆ.

ಈಗ ಗ್ರಾಮೀಣ ಭಾಗಗಳಲ್ಲಿ ಬ್ರಾಡ್‌ಬ್ಯಾಂಡ್ ಕ್ರಾಂತಿ ನಡೆಯುತ್ತಿದ್ದು, ಮೊಬೈಲ್‌ನ ವ್ಯಾಪಕ ಬಳಕೆಯಿಂದಾಗಿ ಪ್ರಪಂಚವೇ ಬೆರಗಿನಿಂದ ನೋಡುತ್ತಿರುವಂಥ ಡಿಜಿಟಲ್ ಆರ್ಥಿಕತೆ ನಮ್ಮಲ್ಲಿ ರೂಪುಗೊಂಡಿದೆ ಎಂದು ಅವರು ಪ್ರತಿಪಾದಿಸಿದರು.

ತಂತ್ರಜ್ಞಾನದ ಅಳವಡಿಕೆ ಮೂಲಕ ನಾವು 200 ಕೋಟಿಗೂ ಹೆಚ್ಚು ಕೊರೊನಾ ಲಸಿಕೆ ನೀಡಿದ್ದೇವೆ. ಹಾಗೆಯೇ 200 ದಶಲಕ್ಷ ಕುಟುಂಬಗಳ 600 ದಶಲಕ್ಷ ಜನರಿಗೆ ಆಯುಷ್ಮಾನ್ ಭಾರತ ಯೋಜನೆಯ ಮೂಲಕ ವೈದ್ಯಕೀಯ ಚಿಕಿತ್ಸೆ ಸಿಗುವಂತೆ ಮಾಡಿದ್ದೇವೆ. ನಮ್ಮಲ್ಲಿ ಸಿಗುತ್ತಿರುವಷ್ಟು ಅಗ್ಗದ ದರದಲ್ಲಿ ಡೇಟಾ ಎಲ್ಲೂ ಸಿಗುತ್ತಿಲ್ಲ. ಒಟ್ಟಿನಲ್ಲಿ ತಂತ್ರಜ್ಞಾನದ ಮೂಲಕ ಭಾರತವು ಬೇರ್‍ಯಾವ ದೇಶಕ್ಕೂ ಸಾಧ್ಯವಾಗದಂತಹ ಸಾಧನೆಗಳನ್ನು ಮಾಡುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು.

'ಎಲ್ಲರಿಗೂ ಕರ್ನಾಟಕಕ್ಕೆ ಸ್ವಾಗತ' ಎಂದು ಕನ್ನಡದಲ್ಲೇ ಮಾತು ಆರಂಭಿಸಿದ ಪ್ರಧಾನಿ ಮೋದಿ, 'ಬೆಂಗಳೂರು ಎಲ್ಲರನ್ನೂ ಒಳಗೊಳ್ಳುವ (ಇನ್‌ಕ್ಲೂಸೀವ್) ಮತ್ತು ನಾವೀನ್ಯತೆಯ ಸಂಸ್ಕೃತಿಯ ನಗರವಾಗಿದೆ. ಜಾಗತಿಕ ನಾವೀನ್ಯತಾ ಸೂಚ್ಯಂಕದಲ್ಲಿ ನಗರವು ಎಷ್ಟೋ ವರ್ಷಗಳಿಂದ ಪ್ರಥಮ ಸ್ಥಾನದಲ್ಲಿ ವಿರಾಜಿಸುತ್ತಿದೆ. ನಮ್ಮೆಲ್ಲರ ಭವಿಷ್ಯ ಮತ್ತಷ್ಟು ವ್ಯಾಪಕವೂ ಉಜ್ವಲವೂ ಆಗಿರಲಿದೆ. ಬೆಂಗಳೂರು ಸಂಶೋಧನೆಯ ತಾಣವಾಗಿದ್ದು, ಇಲ್ಲಿ ತಂತ್ರಜ್ಞಾನ ಕ್ರಾಂತಿ ಸಂಭವಿಸುತ್ತಿದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರಲ್ಲಿ ಎರಡು ದಿನಗಳ ಹಿರಿಯ ನಾಗರಿಕರ 20ನೇ ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ

ಉತ್ತಮ ಸಮಾಜ ನಿರ್ಮಾಣಕ್ಕೆ ಹಿರಿಯ ನಾಗರಿಕರ ಮಾರ್ಗದರ್ಶನ ಅತ್ಯಮೂಲ್ಯ: ಸುತ್ತೂರು ಶ್ರೀಗಳು





ಮೈಸೂರಿನಲ್ಲಿ ಎರಡು ದಿನಗಳ 20ನೇ ಹಿರಿಯ ನಾಗರಿಕರ ರಾಷ್ಟ್ರೀಯ ಸಮ್ಮೇಳನಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಚಾಲನೆ ನೀಡಿ, ಮಾತನಾಡಿದರು. ಚಿತ್ರದಲ್ಲಿ ಸಮ್ಮೇಳನದ ಅಧ್ಯಕ್ಷ ವಿಶ್ವಾಸ್‌ರಾವ್ ಭದಾನೆ, ಸಂಘಟನಾಧ್ಯಕ್ಷ ಎನ್.ಓಬಯ್ಯ, ಸಂಘದ ಮೈಸೂರು ಅಧ್ಯಕ್ಷ ಡಿ.ರವೀಂದ್ರನಾಥ್, ಡಾ.ರವಿ ಪಾಟೀಲ್ ಇನ್ನಿತರರನ್ನು ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿರುವ ವಿವಿಧ ರಾಜ್ಯಗಳ ಹಿರಿಯ ನಾಗರಿಕ ಪ್ರತಿನಿಧಿಗಳು

ಮೈಸೂರು, ನ.16 (ಆರ್‌ಕೆಬಿ)–ಮನುಷ್ಯನಿಗೆ ವಯಸ್ಸಿಗಿಂತ ಚೈತನ್ಯ ಮುಖ್ಯ. ಹೆಚ್ಚುತ್ತಿರುವ ಜನ ಸಂಖ್ಯೆಯಿಂದಾಗಿ 'ನಿವೃತ್ತಿ' ಎಂಬ ಪದ ಬಳಕೆಯಾಗುತ್ತಿರುವುದನ್ನು ಪ್ರಸ್ತಾಪಿಸಿದ ಅವರು, ಉತ್ತಮ ಸಮಾಜ ನಿರ್ಮಾಣದಲ್ಲಿ ಹಿರಿಯ ನಾಗರಿಕರ ಮಾರ್ಗ ದರ್ಶನ ಅತ್ಯಮೂಲ್ಯವಾಗಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಅಖಿಲ ಭಾರತ ಹಿರಿಯ ನಾಗರಿಕರ ಒಕ್ಕೂಟ, ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಸಂಘ ಮತ್ತು ಮೈಸೂರು ಜಿಲ್ಲಾ ಘಟಕ ಜಂಟಿಯಾಗಿ ಮೈಸೂರಿನ ಕಲಾಮಂದಿರದಲ್ಲಿ ಏರ್ಪಡಿಸಿರುವ ಎರಡು ದಿನಗಳ ಅಖಿಲ ಭಾರತ ಹಿರಿಯ ನಾಗರಿಕರ 20ನೇ ರಾಷ್ಟ್ರೀಯ ಸಮ್ಮೇಳನಕ್ಕೆ (ಎಐಎಸ್‌ಸಿಸಿಎನ್) ದೀಪ ಬೆಳಗಿಸಿ, ಚಾಲನೆ ನೀಡಿ ಮಾತನಾಡಿದರು. ಯುವಕರು ಹಿರಿಯರ ಮಾರ್ಗದರ್ಶನವನ್ನು ಪಾಲಿಸಬೇಕು. ಸಮಾಜವನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವಲ್ಲಿ ಇದು ನಿರ್ಣಾಯಕ ಪಾತ್ರ ವಹಿಸುತ್ತದೆ. ಇಂದಿನ ಯುವಜನತೆಯಲ್ಲಿ ಹೆಚ್ಚುತ್ತಿರುವ ಪ್ರವೃತ್ತಿಯಿಂದಾಗಿ ತಮ್ಮ ಪೋಷಕರ ಬಗ್ಗೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಹೀಗಾಗಿ ನಗರಗಳಲ್ಲಿ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಹಿರಿಯ ನಾಗರಿಕರು ತಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು, ಆರೋಗ್ಯಕರ ಆಹಾರ ಸೇವನೆ ಮತ್ತು ಸರಳ ಜೀವನಶೈಲಿಯನ್ನು ಅನುಸರಿಸುವ ಮೂಲಕ ಔಷಧ ಮುಕ್ತ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆ ಸುತ್ತೂರು ಶ್ರೀಗಳು ಕರೆ ನೀಡಿದರು. ಜೀವನಶೈಲಿಯಲ್ಲಿನ ಬದಲಾವಣೆಯು ಹಿರಿಯ ನಾಗರಿಕರಿಗೆ ಔಷಧ–ಮುಕ್ತ ಜೀವನವನ್ನು ನಡೆಸಲು ಅನುವು ಮಾಡಿಕೊಡುತ್ತದೆ ಎಂಬುದು ಪ್ರಾಯೋಗಿಕ ಪರೀಕ್ಷೆಯಲ್ಲಿ ಸಾಬೀತಾಗಿದೆ ಎಂದು ಉಲ್ಲೇಖಿಸಿದ ಅವರು, ನಮ್ಮ ಸುತ್ತಲಿನ ಆರೋಗ್ಯಕರ ಪರಿಸರವನ್ನು ಅಭಿವೃದ್ಧಿಪಡಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ಮುಖ್ಯ ಅತಿಥಿಯಾಗಿದ್ದ ಬೆಳಗಾವಿಯ ವಿಜಯಾ ಆರೋಗ್ಯ ಸಂಸ್ಥೆಗಳ ಡಾ.ರವಿ ಪಾಟೀಲ ಮಾತನಾಡಿ, ಫಾಸ್ಟ್ ಫುಡ್ ತಿಂಡಿ, ಜಂಕ್ ಫುಡ್‌ಗಳ ಚಟಕ್ಕೆ ಒಳಗಾಗುವುದರಿಂದ ಆಗುವ ಅಪಾಯಗಳ ಬಗ್ಗೆ ತಿಳಿಸಿದರು. ಹಿರಿಯ ನಾಗರಿಕರು ಪೌಷ್ಟಿಕಾಂಶಯುಕ್ತ ಆಹಾರ ತೆಗೆದುಕೊಳ್ಳುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಎಣ್ಣೆಗಳು ಮತ್ತು ಕೊಬ್ಬನ್ನು ಹೊಂದಿರದ ಆಹಾರ ಪದ್ಧತಿಗಳನ್ನು ಅನುಸರಿಸಬೇಕು. ರಕ್ತದೊತ್ತಡ ಮತ್ತು ಸಕ್ಕರೆ ಮಟ್ಟವನ್ನು ನಿರಂತರವಾಗಿ ಪರಿಶೀಲಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು. ಇದಕ್ಕೂ ಮುನ್ನ ನಿವೃತ್ತ ರೈಲ್ವೆ ಉದ್ಯೋಗಿ 90 ವರ್ಷದ ರಾಮಣ್ಣ ಅವರನ್ನು ಸುತ್ತೂರು ಶ್ರೀಗಳು ಸನ್ಮಾನಿಸಿದರು. ಸಮ್ಮೇಳನದ ಅಧ್ಯಕ್ಷ ಪ್ರಾಂಶುಪಾಲ ವಿಶ್ವಾಸ್‌ರಾವ್ ಭದಾನೆ ಅಧ್ಯಕ್ಷತೆ ವಹಿಸಿದ್ದರು. ಸಂಘಟನಾ ಅಧ್ಯಕ್ಷ ಎನ್.ಓಬಯ್ಯ, ಉಪಾಧ್ಯಕ್ಷ ಮಲ್ಲಪ್ಪ ಎಸ್.ಮುದಕವಿ, ಮೈಸೂರು ಅಧ್ಯಕ್ಷ ಡಿ.ರವೀಂದ್ರನಾಥ್, ಬೆಳಗಾವಿಯ ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಸಂಘದ ಅಧ್ಯಕ್ಷ ಎ.ವೈ.ಬೆಂಡಿಗೇರಿ ಇನ್ನಿತರರು ಭಾಗವಹಿಸಿದ್ದರು. ಸಮ್ಮೇಳನಕ್ಕೆ ದೇಶದ 25ಕ್ಕೂ ಹೆಚ್ಚು ರಾಜ್ಯಗಳಿಂದ 1,500ಕ್ಕೂ ಅಧಿಕ ಹಿರಿಯ ನಾಗರಿಕ ಪ್ರತಿನಿಧಿಗಳು ಭಾಗವಹಿಸಿದ್ದರಿಂದ ಕಲಾಮಂದಿರ ತುಂಬಿ ತುಳುಕುತ್ತಿತ್ತು. ಎರಡು ದಿನಗಳ ಈ ಸಮ್ಮೇಳನ ಗುರುವಾರ ಸಮಾರೋಪಗೊಳ್ಳಲಿದ್ದು, ಈ ಅವಧಿಯಲ್ಲಿ ಅನೇಕ ವಿಚಾರಗಳು ಚರ್ಚೆ, ಉಪನ್ಯಾಸಗಳ ಮೂಲಕ ಹಿರಿಯ ನಾಗರಿಕರಿಗೆ ಸರ್ಕಾರದಿಂದ ದೊರೆಯಬೇಕಾದ ಸೌಲಭ್ಯಗಳು ಮತ್ತು ಕುಂದುಕೊರತೆಗಳ ಬಗ್ಗೆ ಬೆಳಕು ಚೆಲ್ಲಲಿದೆ.

ಮುರುಘಾ ಮಠದಲ್ಲಿ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಹಣದ ಆಮಿಷದ ಮೂಲಕ ಮುಚ್ಚಿ ಹಾಕುವ ಪ್ರಯತ್ನ

- ಒಡನಾಡಿ ಸೇವಾ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ ಆರೋಪ
- ಮಕ್ಕಳ ಮೇಲೆ ಪೋಷಕರ ಮೂಲಕ ಒತ್ತಡ
- ಸತ್ಯ ಶೋಧನಾ ಸಮಿತಿ ರಚನೆಗೆ ಮಕ್ಕಳ ಆಯೋಗಕ್ಕೆ ಮನವಿ

ಮೈಸೂರು, ನ.16–ಚಿತ್ರದುರ್ಗ ಮುರುಘಾ ಮಠದಲ್ಲಿ ಮಕ್ಕಳ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಹಣದ ಆಮಿಷವೊಡ್ಡಿ ಮುಚ್ಚಿ ಹಾಕಲು ಆರೋಪಿಗಳು ಪ್ರಯತ್ನಿಸುತ್ತಿರುವುದು ಸಂತ್ರಸ್ತ ಬಾಲಕಿಯೋರ್ವಳು ಹಂಚಿಕೊಂಡಿರುವ ಮಾಹಿತಿಯಿಂದ ಸ್ಪಷ್ಟವಾಗುತ್ತಿದೆ. ಹಾಗೂ ಚಿತ್ರದುರ್ಗ ಮಕ್ಕಳ ಕಲ್ಯಾಣ ಸಮಿತಿಯ ನಡೆಯು ಅನುಮಾನಾಸ್ಪದವಾಗಿದ್ದು, ಈ ಬಗ್ಗೆ ವಿಶೇಷ ತನಿಖಾ ಸಮಿತಿಯಿಂದ ವಿಚಾರಣೆ ನಡೆಸಬೇಕು ಎಂದು ಒಡನಾಡಿ ಸೇವಾ ಸಂಸ್ಥೆ ನಿರ್ದೇಶಕ ಸ್ಟ್ಯಾನ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಪತ್ರ ಬರೆದಿದ್ದಾರೆ.

ಮುರುಘಾ ಮಠದ ಡಾ.ಶಿವಮೂರ್ತಿ ಶರಣರಿಂದ ಸತತ ಅತ್ಯಾಚಾರಕ್ಕೊಳಪಟ್ಟು ಹಾಲಿ ಮೈಸೂರಿನ ಒಡನಾಡಿ ಸೇವಾ ಸಂಸ್ಥೆಯಲ್ಲಿ ಆಶ್ರಯ ಪಡೆದಿರುವ ಸಂತ್ರಸ್ತ ಬಾಲಕಿಯು ಇಂದು ಆಪ್ತ ಸಮಾಲೋಚನೆಯ ಸಂದರ್ಭದಲ್ಲಿ ಗುರುತರವಾದ ಮಾಹಿತಿಯನ್ನು ನಮ್ಮ ಮುಂದೆ ಹಂಚಿಕೊಂಡಿರುತ್ತಾಳೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಚಿತ್ರದುರ್ಗದ ಮಕ್ಕಳ ಕಲ್ಯಾಣ ಸಮಿತಿಯ ಸುಪರ್ದಿಯಲ್ಲಿ ಈ ಬಾಲಕಿ ಇದ್ದಂತಹ ಸಂದರ್ಭದಲ್ಲಿ ಮುರುಘಾ ಶರಣರಿಂದ ದೌರ್ಜನ್ಯಕ್ಕೊಳಪಟ್ಟ ತನ್ನ ಜೊತೆಗಾರ್ತಿ ಬಾಲಕಿಗೆ ಒಂದು ದಿನ ಮುಸ್ಸಂಜೆ ಆಕೆಯ ತಂದೆ ಬಾಲ ಭವನದ ದೂರವಾಣಿಗೆ ಕರೆ ಮಾಡಿದ್ದರು ಎಂದು ಆಕೆ ತಿಳಿಸಿದ್ದಾಳೆ. ಕರೆ ಬಂದಾಗ ಅದನ್ನು ಸ್ವೀಕರಿಸಿದ ಬಾಲ ಭವನದ ಸಿಬ್ಬಂದಿ ಲೌಡ್ ಸ್ಪೀಕರನ್ನು ಆನ್ ಮಾಡಿ ಮಾತನಾಡಿಸಿದರು. ಅಲ್ಲಿ ಇಬ್ಬರು ಮಹಿಳಾ ಸಿಬ್ಬಂದಿ ಇದ್ದರು. ನಾನು ಜೊತೆಗಿದ್ದೆ. ಆ ಕಡೆಯಿಂದ ಕರೆ ಮಾಡಿದ್ದ ನನ್ನ ಗೆಳತಿಯ ತಂದೆ "ಸ್ವಾಮಿಗಳು ನಮ್ಮನ್ನು ನೋಡಿಕೊಂಡಿದ್ದಾರೆ. ಹಣವನ್ನು ಕೊಟ್ಟಿದ್ದಾರೆ. ನೀನು ಯಾವ ಕೇಸನ್ನು ಮುಂದುವರಿಸುವುದು ಬೇಡ. ದೂರನ್ನು ವಾಪಾಸ್ಸು ತೆಗೆದುಕೊಂಡು ನನ್ನ ಜೊತೆ ಬರಲು ನೋಡು" ಎಂದು ಹೇಳುತ್ತಿದ್ದನ್ನು ತಾನು ಕಿವಿಯಾರೆ ಕೇಳಿರುವುದಾಗಿ ಬಾಲಕಿ ತಿಳಿಸಿದ್ದಾಳೆ.

ಆ ಬಾಲಕಿಯು ತನ್ನ ಮೇಲೆ ಆಗಿದ್ದ ದೌರ್ಜನ್ಯವನ್ನು ಪ್ರಬಲವಾಗಿ ಪ್ರತಿಭಟಿಸುತ್ತಲೇ ಬಂದಿದ್ದಳು. ತನ್ನನ್ನು ಯಾವುದೇ ರೀತಿಯಲ್ಲಿ ನೋಡಿಕೊಳ್ಳದೆ ತೊಂದರೆಗೊಳಪಡಿಸುತ್ತಿದ್ದ ಕುಡುಕ ತಂದೆ ಹಾಗೂ ಚಿಕ್ಕಪ್ಪನ ವಿರುದ್ಧ ಬಹಿರಂಗವಾಗಿಯೇ ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತಲೇ ಇದ್ದುದಲ್ಲದೆ ಒಂದು ಹಂತದಲ್ಲಿ ಅವರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯಲ್ಲೂ ದೂರನ್ನು ದಾಖಲಿಸಿರುತ್ತಾಳೆ. ನನ್ನನ್ನು ದಯಮಾಡಿ ಮೈಸೂರಿನ ಒಡನಾಡಿ ಸಂಸ್ಥೆಗಾದರೂ ಕಳುಹಿಸಿಕೊಡಿ. ಆದರೆ ನನ್ನ ತಂದೆ ಅಥವಾ ಚಿಕ್ಕಪ್ಪನೊಂದಿಗೆ ಕಳುಹಿಸಬೇಡಿ ಎಂದು ದೂರಿನಲ್ಲಿ ವಿನಂತಿಸಿಕೊಂಡಿದ್ದಳು. ಆದಾಗಿಯೂ, ಬಾಲ ನ್ಯಾಯ ಕಾಯ್ದೆಯ ವಿರುದ್ಧ, ಮಗುವಿನ ಇಚ್ಛೆ ಹಾಗೂ ಹಿತಾಸಕ್ತಿಯನ್ನು ತಿರಸ್ಕರಿಸಿ ಆರೋಪಿಯ ಪರ ನಿಂತಿದ್ದ ಚಿಕ್ಕಪ್ಪ ಹಾಗೂ ತಂದೆಯೊಡನೆ ಚಿತ್ರದುರ್ಗದ ಸಿಡಬ್ಲ್ಯೂಸಿ ಮಗುವನ್ನು ಕಳುಹಿಸಿಕೊಟ್ಟಿದ್ದು ಅನುಮಾನಾಸ್ಪದ ಹಾಗೂ ಇವರ ಈ ಹೆಜ್ಜೆಗೆ ಮತ್ತೋರ್ವ ಬಾಲಕಿ ನೀಡಿರುವ ಹೇಳಿಕೆಯು ಪೂರಕವಾಗಿ ನಿಂತಿದೆ ಎಂದು ಸ್ಟ್ಯಾನ್ಲಿ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ.

ಮಕ್ಕಳ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಹಣದ ಆಮಿಷ ಒಡ್ಡಿ ಮುಚ್ಚಿ ಹಾಕಲು ಆರೋಪಿಗಳು ಪ್ರಯತ್ನಿಸುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಆಯೋಗದ ಮೂಲಕ ಒಂದು ವಿಶೇಷ ತನಿಖಾ ಸಮಿತಿ ರಚಿಸಿ ಚಿತ್ರದುರ್ಗ ಸಿ ಡಬ್ಲ್ಯೂ ಸಿ ಅಧ್ಯಕ್ಷರು, ಸಿಬ್ಬಂದಿ, ಶೋಷಣೆಗೊಳಪಟ್ಟ ಮಕ್ಕಳು ಹಾಗೂ ಆ ಹುಡುಗಿಯ ತಂದೆ ಹಾಗೂ ಚಿಕ್ಕಪ್ಪನನ್ನು ವಿಚಾರಣೆಗೊಳಪಡಿಸ ಬೇಕೆಂದು ಅವರು ಮನವಿ ಮಾಡಿದ್ದಾರೆ. ಅಲ್ಲದೇ, ಆರೋಪಿಗಳಿಂದ ಅತ್ಯಾಚಾರಿಕ್ಕೊಳಪಟ್ಟ ಅಪ್ರಾಪ್ತ ಸಹೋದರಿಯರ ತಾಯಿಯ ಮೇಲೆ ಸುಳ್ಳು ದೂರನ್ನು ಹೊರಿಸಿ, ವಿಚಾರಣೆಯ ನೆಪದಲ್ಲಿ ಚಿತ್ರದುರ್ಗ ಪೊಲೀಸರು ಆಕೆಯನ್ನು ಕರೆದುಕೊಂಡು ಹೋಗಿ ಒಂದು ವಾರವಾಗಿದೆ. ಪೊಲೀಸರ ಈ ಅಮಾನವೀಯ ನಡೆಯಿಂದ ದೂರುದಾರಳಾದ ಮಹಿಳೆ ಆತಂಕದಲ್ಲಿದ್ದಾಳೆ. ಅಲ್ಲದೆ ಆಕೆಯ ಮಕ್ಕಳಿಬ್ಬರು ತಾಯಿಯಿಂದ ದೂರವಾಗಿ ಮಾನಸಿಕ ಕ್ಷೋಭೆಗೆ ಒಳಗಾಗಿರುತ್ತಾರೆ. ಆದುದರಿಂದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ಆಯೋಗವು ಸಮಾಲೋಚನಾ ಹಾಗೂ ಸತ್ಯಶೋಧನಾ ಸಮಿತಿಯೊಂದನ್ನು ಒಡನಾಡಿಗೆ ಕಳುಹಿಸಿ, ಮಕ್ಕಳೊಂದಿಗೆ ಆಪ್ತ ಸಮಾಲೋಚನೆ ನಡೆಸಿ, ಸಾಂತ್ವನ ಹಾಗೂ ಧೈರ್ಯ ತುಂಬುವ ಕಾರ್ಯವನ್ನು ಮಾಡುವುದರ ಮೂಲಕ ಪಡೆದ ಸತ್ಯಶೋಧನಾ ವರದಿಯನ್ನು ಸರ್ಕಾರ ಹಾಗೂ ನ್ಯಾಯಾಂಗದ ಮುಂದೆ ಮಂಡಿಸಬೇಕಾಗಿ ಮನವಿ ಮಾಡಿದ್ದಾರೆ.

ಸಮುದಾಯ ಆಧಾರಿತ ತಪಾಸಣಾ ಶಿಬಿರ

ಶಾಸಕ ಎಲ್.ನಾಗೇಂದ್ರ ಚಾಲನೆ



ಮೈಸೂರು, ನ. 16–ಬೆಂಗಳೂರು ಕರ್ನಾಟಕ ರಾಜ್ಯ ಏಡ್ಸ್ ಪ್ರಿವನ್‌ಷನ್ ಸೊಸೈಟಿ, ಜಿಲ್ಲಾ ಆಡಳಿತ, ಮೈಸೂರು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಮೈಸೂರು ಮತ್ತು ಇಎಸ್‌ಐ ಆಸ್ಪತ್ರೆ ಐಸಿಟಿಸಿ ವಿಭಾಗ, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆ ಹಾಗೂ ಸ್ವಯಂ ಸೇವಾ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹೆಬ್ಬಾಳಿನ ಬಸವನಗುಡಿ ದೇವಸ್ಥಾನದಲ್ಲಿ ಸಮುದಾಯ ಆಧಾರಿತ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಶಾಸಕ ಎಲ್. ನಾಗೇಂದ್ರ ಉದ್ಘಾಟಿಸಿ ಮಾತನಾಡಿ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ತಿಳಿಸಿ, ಎಲ್ಲರೂ ಇದರ ಉಪಯೋಗವನ್ನು ಪಡೆದುಕೊಳ್ಳಬೇಕು. ಶಿಬಿರದಲ್ಲಿ ಹಮ್ಮಿಕೊಂಡಿದ್ದ ಎಲ್ಲಾ ತರದ ತಪಾಸಣೆ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಶಿಬಿರದಲ್ಲಿ ಒಟ್ಟು 224 ಜನ ಭಾಗವಹಿಸಿದ್ದು, ಜಿಲ್ಲಾ ಆಸ್ಪತ್ರೆಯ ಎನ್‌ಸಿಡಿ ವಿಭಾಗದಿಂದ ಬಿಪಿ, ಶುಗರ್–224 ಜನರು, ತಂಬಾಕು ಚಿಕಿತ್ಸೆಗೆ 10 ಜನ, ಹೆಚ್‌ಐವಿ ಪರೀಕ್ಷೆಗೆ 148 ಜನ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯಿಂದ 125 ಜನರ ತಪಾಸಣೆ, ಋತು ವಾಕ್ ಭಾಷಾ ಕೇಂದ್ರ ಮತ್ತು ಶ್ರವಣ ಕೇಂದ್ರದಿಂದ 70 ಜನರಿಗೆ ಇಎನ್‌ಟಿ ಪರೀಕ್ಷೆ ಮಾಡಲಾಯಿತು. ಶಿಬಿರದಲ್ಲಿ ತಪಾಸಣೆ ನಂತರ ಅವಶ್ಯಕತೆ ಇರುವ ಜನರಿಗೆ ಮಾತ್ರೆ, ಸಿರಪ್ ನೀಡಿ ಉನ್ನತ ಪರೀಕ್ಷೆಗೆ ಇಎಸ್‌ಐ ಆಸ್ಪತ್ರೆಗೆ ಬರಲು ವೈದ್ಯರು ಸಲಹೆ ನೀಡಿದ್ದಾರೆ. ಪಾಲಿಕೆ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಡಾ.ವರದರಾಜು, ಡಾ. ಶಿವಕುಮಾರ್ ಹೆಚ್.ಎನ್., ಡಾ.ಚಂದ್ರಕಲಾ, ರಾಮೇಗೌಡ, ಶ್ರೀಧರ್, ಕೆ. ಟಿ. ಅನಿತಾ, ನಾಗೇಂದ್ರಪ್ರಸಾದ್, ರಜನಿಶಂಕರ್, ಸುಬ್ರಹ್ಮಣ್ಯ, ಗೀತಾ, ವಸುಮತಿ, ಪುಟ್ಟರಾಜು, ಸವಿತಾ ಬಿ.ಗೋಪಾಲ್, ಸಿದ್ದೇಶ್ವರಪ್ಪ ಮತ್ತಿತರರು ಭಾಗವಹಿಸಿದ್ದರು.

ಮೈಸೂರಲ್ಲಿ ಅಕ್ರಮ ಗ್ಯಾಸ್ ರೀ ಫಿಲ್ಲಿಂಗ್: ಓರ್ವನ ಬಂಧನ

ಮೈಸೂರು, ನ.16– ಅಕ್ರಮವಾಗಿ ಗ್ಯಾಸ್ ಫಿಲ್ಲಿಂಗ್ ಮಾಡುತ್ತಿದ್ದ ಓರ್ವನನ್ನು ಬಂಧಿಸಿರುವ ಉದಯಗಿರಿ ಠಾಣಾ ಪೊಲೀಸರು ಮೂರು ಸಿಲಿಂಡರ್ ಹಾಗೂ ರೀ ಫಿಲ್ಲಿಂಗ್ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ.



ಉದಯಗಿರಿ ಠಾಣಾ ವ್ಯಾಪ್ತಿಯ ನೆಹರು ನಗರದ ಮನೆಯೊಂದರಲ್ಲಿ ಆಟೋಗಳಿಗೆ ಗ್ಯಾಸ್ ರೀ ಫಿಲ್ಲಿಂಗ್ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಪೊಲೀಸರ ಸಹಕಾರದೊಂದಿಗೆ ಆಹಾರ ಮತ್ತು ನಾಗರೀಕ ಪೂರೈಕಾ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿದಾಗ ಮನೆಯೊಂದರ ಮುಂದೆ ಆಟೋಗೆ ಗ್ಯಾಸ್ ರೀ ಫಿಲ್ಲಿಂಗ್ ಮಾಡುತ್ತಿದ್ದು, ಕಂಡು ಬಂದಿದೆ. ರಫೀಕ್ ಖಾನ್ ಎಂಬಾತನ್ನು ಬಂಧಿಸಿದ ಉದಯಗಿರಿ ಪೊಲೀಸ್ ಠಾಣೆ ಪೊಲೀಸರು ಎಲೆಕ್ಟ್ರಾನಿಕ್ ತೂಕದ ಯಂತ್ರ, ಮೂರು ಗೃಹ ಬಳಕೆಯ ಸಿಲಿಂಡರ್ ಹಾಗೂ ಇನ್ನಿತರ ವಸ್ತುಗಳನ್ನು ವಶಕ್ಕೆ ಪಡೆದು ಆಹಾರ ಇಲಾಖೆಯ ನಿರೀಕ್ಷಕರಾದ ಬಿ.ಸಿ.ಮಥಹನ್ ನೀಡಿದ ದೂರನ್ನು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ. ಉದಯಗಿರಿ ಪೊಲೀಸ್ ಠಾಣೆಯ ಎಎಸ್‌ಐ ಶಶಿಶೇಖರ್ ಹಾಗೂ ಇನ್ನಿತರರು ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಉತ್ತಮ ಜೀವನ ಶೈಲಿಯಿಂದ ಸಕ್ಕರೆ ಕಾಯಿಲೆ ನಿಯಂತ್ರಣ ಸಾಧ್ಯ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ



ಡಾ. ಹೆಚ್.ಸಿ. ಮಹದೇವಪ್ಪ

ಮೈಸೂರು, ನ. 16– ಮಧುಮೇಹ (ಸಕ್ಕರೆ ಕಾಯಿಲೆ) ಕಾಯಿಲೆಯಲ್ಲ. ಇದು ಗ್ಲುಕೋಸ್ ಮತ್ತು ಇನ್ಸುಲಿನ್‌ಗಳ ಏರುಪೇರಿನ ಅವ್ಯವಸ್ಥೆ ಸ್ಥಿತಿಯಾಗಿದ್ದು, ಅದನ್ನು ಉತ್ತಮ ಜೀವನಶೈಲಿಯಿಂದ ನಿಯಂತ್ರಿಸಬಹುದು ಎಂದು ಮಾಜಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಿಸಿದರು.



ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯ ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ವತಿಯಿಂದ ಏರ್ಪಡಿಸಿದ್ದ ವಿಶ್ವ ಸಕ್ಕರೆ ಕಾಯಿಲೆ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ತಮ್ಮದೇ ಉದಾಹರಣೆ ನೀಡುತ್ತ, ಕಳೆದ 25ವರ್ಷಗಳಿಂದ ಯಾವ ಔಷಧವನ್ನೂ ಸೇವಿಸದೆ ಜೀವನಶೈಲಿಯೊಂದರಿಂದಲೇ ತಮಗಿರುವ ಮಧುಮೇಹವನ್ನು ನಿಯಂತ್ರಿಸಿಕೊಂಡಿರುವುದಾಗಿ ಉದಾಹರಿಸಿದ ಸಚಿವರು, ಯೋಗ, ಮಿತಾ ಹಾರ, ಸಿರಿಧಾನ್ಯಗಳ ಬಳಕೆ ಇವುಗಳ ನ್ನೊಳಗೊಂಡ ಜೀವನಶೈಲಿಯಿಂದ ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸಬಹುದು ಎಂದರು.

ಸುಯೋಗ್ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿರುವ ಸಕ್ಕರೆ ಕಾಯಿಲೆ ರೋಗಿ ಗಳ ಸಂಘ ಇಡೀ ರಾಜ್ಯದಲ್ಲಿಯೇ ಒಂದು ವಿನೂತನ ಪ್ರಯೋಗವಾಗಿದ್ದು, ಸಕ್ಕರೆ ಕಾಯಿಲೆ ಬಗ್ಗೆ ಅರಿವು ಮೂಡಿಸುತ್ತಿರುವುದು ಪ್ರಶಂಸನೀಯ ಎಂದರು. ಸಕ್ಕರೆ ಕಾಯಿಲೆ ನಿಯಂತ್ರಣಕ್ಕೆ ಆಹಾರ ಕ್ರಮದ ಕುರಿತು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಮಾತನಾಡಿ, ಊಟ ಬಲ್ಲವನಿಗೆ ರೋಗವಿಲ್ಲ ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ನಾಣ್ನುಡಿ ಉದಾಹರಿಸಿ ಸಕ್ಕರೆ ಕಾಯಿಲೆ ನಿಯಂತ್ರಣದಲ್ಲಿ ಆಹಾರದ ಪಾತ್ರ ಅತಿ ಮುಖ್ಯ ಎಂದರಲ್ಲದೆ, ಕಸದ ಬುಟ್ಟಿಗೆ ಕಸ ಹಾಕುವಲ್ಲಿ ಯಾವ ಕಸ ಹಾಕಬೇಕು ಎಂದು ಎಚ್ಚರವಹಿಸುವ ನಾವು ನಮ್ಮದೇ ಆದ ಹೊಟ್ಟೆ ತುಂಬಿಸುವಲ್ಲಿ ಯಾವುದೇ ನಿಯಮ ಇರಿಸಿಕೊಳ್ಳದ ಪರಿಣಾಮ ಇಂದು ನಮ್ಮ ಹೊಟ್ಟೆ ಕಸದ ಬುಟ್ಟಿಗಿಂತ ಹೀನಾಯ ಸ್ಥಿತಿ ತಲುಪಿದ್ದು, ಇದೇ ಎಲ್ಲಾ ಅನಾರೋಗ್ಯಕ್ಕೂ ಮೂಲ ಎಂದರು. ಇದೇ ಸಂದರ್ಭ ಮಾಜಿ ಸಚಿವ ರಾದ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸುಯೋಗ್ ಆಸ್ಪತ್ರೆಯ ಎಂಡೋಕ್ರೈನಾಲ ಜಿಸ್ಟ್ ಡಾ.ರಘು ಅವರಿಗೆ ಸನ್ಮಾನಿಸಲಾಯಿತು. ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಕಾರ್ಯಾಧ್ಯಕ್ಷ ರಮೇಶ್ ಚಂದ್ರ ಸ್ವಾಗತಿಸಿದರು. ಅಧ್ಯಕ್ಷ ಎನ್.ಕೆ.ನುಂಜಪ್ಪ ಅಧ್ಯಕ್ಷತೆ ವಹಿಸಿದ್ದರು. ಸುಯೋಗ್ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ನಿರ್ದೇಶಕಿ ಡಾ.ಸೀಮಾ ಯೋಗಣ್ಣ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಬೆಳಗ್ಗೆ ನಡೆದ ವಾಕಥಾನ್ ಕಾರ್ಯಕ್ರಮವನ್ನು ನಗರ ಪೊಲೀಸ್ ಎಸಿಪಿ ಗಂಗಾಧರಸ್ವಾಮಿ ಟೇಪ್ ಕತ್ತರಿಸುವ ಮೂಲಕ ಚಾಲನೆ ನೀಡಿದರು. ಸುಯೋಗ್ ಡಯಾಬಿಟಿಕ್ಸ್ ಹೆಲ್ತ್ ಕ್ಲಬ್ ಸದಸ್ಯರು ಹಾಗೂ ಸುಯೋಗ್ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು, ಸಕ್ಕರೆ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸುವ ಅನೇಕ ಸಂದೇಶಗಳುಳ್ಳ ಫಲಕಗಳನ್ನು ಹಿಡಿದು ಘೋಷಣೆ ಕೂಗುತ್ತ ಸುಯೋಗ್ ಆಸ್ಪತ್ರೆಯಿಂದ ವಿವೇಕಾನಂದ ವೃತ್ತದವರೆಗೆ ವಾಕಥಾನ್ ಮಾಡಿದ್ದು ವಿಶೇಷವಾಗಿತ್ತು.

ಸಂಸದ ಶ್ರೀನಿವಾಸಪ್ರಸಾದ್– ಮಾಜಿ ಎಂಎಲ್ಸಿ ಸಿ.ರಮೇಶ್ ನಡುವೆ ವಾಕ್ಸಮರ



ತಿ.ನರಸೀಪುರ, ನ.16– ಇಲ್ಲಿನ ಲೋಕೋಪಯೋಗಿ ಇಲಾಖೆ ಅತಿಥಿಗೃಹದಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಿದ್ದ ವೇಳೆ ಸಂಸದ ವಿ. ಶ್ರೀನಿವಾಸ ಪ್ರಸಾದ್ ಮತ್ತು ವಿಧಾನಪರಿಷತ್ ಮಾಜಿ ಸದಸ್ಯ ಸಿ. ರಮೇಶ್ ನಡುವೆ ಏಕವಚನದಲ್ಲೇ ತೀವ್ರ ವಾಗ್ವಾದ ನಡೆದಿದೆ.

ತಿ.ನರಸೀಪುರದ ತಲಕಾಡು ಮುಖ್ಯರಸ್ತೆಯಲ್ಲಿ ನೂತನವಾಗಿ ನಿರ್ಮಿಸಿರುವ ಲೋಕೋಪಯೋಗಿ ಇಲಾಖೆ ಉಪವಿಭಾಗದ ಕಚೇರಿ ಮತ್ತು ಅತಿಗಣ್ಯರ ಅತಿಥಿಗೃಹವನ್ನು ಇಂದು ಉದ್ಘಾಟಿಸಿದ ನಂತರ ಶ್ರೀನಿವಾಸಪ್ರಸಾದ್ ಅವರು ಕಾಮಗಾರಿ ಬಗ್ಗೆ ವಿವರಿಸಲು ಸುದ್ದಿಗೋಷ್ಠಿ ನಡೆಸಲು ಮುಂದಾಗಿದ್ದರು.

ಈ ವೇಳೆ ಆಹ್ವಾನಪತ್ರಿಕೆಯೊಂದಿಗೆ ಅಲ್ಲಿಗೆ ಆಗಮಿಸಿದ ಸಿ. ರಮೇಶ್, 'ಒಂದೇ ಆಹ್ವಾನಪತ್ರಿಕೆಯಲ್ಲಿ ಇಬ್ಬರ ಹೆಸರನ್ನು ಬರೆದು ಮಾಜಿ ಎಂಎಲ್ಸಿಯಾದ ನನಗೆ ಅವಮಾನ ಮಾಡಿದ್ದೀಯಾ' ಎಂದು ಲೋಕೋಪಯೋಗಿ ಇಲಾಖೆಯ ಎಇಇ ನಟೇಶ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದಾಗ ಮಧ್ಯಪ್ರವೇಶಿಸಿದ ಸಂಸದ ಶ್ರೀನಿವಾಸಪ್ರಸಾದ್, 'ಶಿಷ್ಟಾಚಾರದ ಬಗ್ಗೆ ಅಧಿಕಾರಿಯನ್ನು ಪ್ರಶ್ನಿಸುವ ಹಕ್ಕು ನಿಮಗಿಲ್ಲ. ಅವರನ್ನು ಕೇಳಲು ನೀವ್ಯಾರು?' ಎಂದು ಸಿ. ರಮೇಶ್ ವಿರುದ್ಧ ಹರಿಹಾಯ್ದರು.

ಇದರಿಂದ ಕೆರಳಿದ ಸಿ. ರಮೇಶ್ 'ನಾನೇನೂ ನಿಮ್ಮನ್ನು ಕೇಳುತ್ತಿಲ್ಲ. ಸರ್ಕಾರಿ ಅಧಿಕಾರಿಯನ್ನು ಕೇಳುತ್ತಿದ್ದೇನೆ. ನಾನು ಮಾಜಿ ಶಾಸಕ. ನನಗೂ ಕೇಳುವ ಹಕ್ಕಿದೆ' ಎಂದರು. ಇದರಿಂದ ಆಕ್ರೋಶಗೊಂಡ ಪ್ರಸಾದ್ ಅವರು, 'ನೀವು ಹೆಚ್ಚು ಮಾತಾಡ್ಬೇಡಿ. ನೀವೇನು ಅಂತ ನಂಗೆ ಗೊತ್ತಿದೆ. ಇಲ್ಲೇನು ಕೀಟ್ಲೆ ಮಾಡೋಕೆ ಬಂದಿದ್ದೀರಾ?' ಎನ್ನುತ್ತಿದ್ದಂತೆ ರಮೇಶ್, 'ಇದು ಬಿಜೆಪಿ ಸರ್ಕಾರ. ನಾನು ಬಿಜೆಪಿ ಕಾರ್ಯಕರ್ತನೇ. ನೀವು ಈ ರೀತಿಯೆಲ್ಲಾ ಮಾತಾಡ್ಬೇಡಿ' ಎನ್ನುತ್ತಿದ್ದಂತೆಯೇ ಪಕ್ಷದ ಕಾರ್ಯಕರ್ತರು ರಮೇಶ್ ಅವರನ್ನು ಸುಮ್ಮನೆ ಕುಳಿತುಕೊಳ್ಳುವಂತೆ ಸಮಾಧಾನಪಡಿಸಲು ಮುಂದಾದರು. ಆದರೆ ರಮೇಶ್ ಕಾರ್ಯಕರ್ತರ ವಿರುದ್ಧವೂ ಹರಿಹಾಯ್ದಾಗ ಕೋಪೋದ್ರಿಕ್ತರಾದ ಪ್ರಸಾದ್‌ರು, 'ಅವರನ್ನು (ರಮೇಶ್) ಆಚೆ ಕಳಿಸ್ರಿ' ಎಂದರು. ಆಗ ಮತ್ತಷ್ಟು ಕೆರಳಿದ ರಮೇಶ್, 'ನೀವು ಎಂಪಿ ಆಗಿದ್ದೀರಾ ಅಂತ ಏನೇನೋ ಮಾತಾಡ್ಬೇಡಿ. ಪಕ್ಷದಲ್ಲಿ ನಾವೇನು ಮಾಡಿಲ್ವೇ? ಹಾಗೇ ನೀವು ಎಂಪಿ ಆಗ್ಬಿಟ್ರಾ?' ಎಂದು ಪ್ರಶ್ನಿಸುತ್ತಾ 'ನನಗೆ ಪಾರ್ಟಿನೇ ಬೇಡ' ಎಂದು ಹೇಳಿ ಹೊರ ನಡೆಯಲು ಮುಂದಾದರು. ಆಗ ಕಾರ್ಯಕರ್ತರು ಮತ್ತೆ ಅವರನ್ನು ಸಮಾಧಾನಪಡಿಸಲು ಮುಂದಾದಾಗ ಪ್ರಸಾದ್ ಅವರು, 'ಹೇ ಹೋಗ್ಲಿ ಬಿಡ್ರಿ' ಎಂದರು. ಮತ್ತೆ ಮಾತು ಮುಂದುವರೆಸಿದ ರಮೇಶ್ 'ನೀವು ಹೇಳಿದ್ರೂ ನಾನೇನು ಕೂರೋದಿಲ್ಲ. ಪಕ್ಷನೇ ಇಲ್ದೆ ನೀವೇನು ಎಂಪಿ ಆಗ್ಬಿಟ್ರಾ. ನೀವ್ ಒಬ್ಬರ್ರೆ ದೊಡ್ಡವ್ರು. ಉಳಿದವರೆಲ್ಲಾ ನಿಮ್ಮುಂದೆ ಏನು ಇಲ್ಲ ಅಲ್ವಾ?' ಎನ್ನುತ್ತಿದ್ದಂತೆಯೇ ಪ್ರಸಾದ್ ಅವರು 'ಹೇ ಆಯ್ತು ಹೋಗಪ್ಪ ನೀವೆಲ್ಲಾ ಬರೀ ಬ್ಲಾಕ್‌ಮೇಲ್ ಮಾಡೋಕೆ ಬರ್ತೀರಾ ಅಂತ ಕಾಣುತ್ತೆ' ಎಂದಾಗ ಮರು ಉತ್ತರ ನೀಡಿದ ರಮೇಶ್ 'ಈ ಮಾತೆಲ್ಲಾ ಬಿಟ್ಬಿಡಿ. ತಾಕತ್ತಿದ್ರೆ ನೀವಿದ್ದ ಪಕ್ಷದಲ್ಲೇ ಎಂಪಿ ಆಗ್ಬೇಕಿತ್ತು. ಬಿಜೆಪಿಗೆ ಯಾಕ್ ಬಂದ್ರಿ?' ಎಂದು ಪ್ರಶ್ನಿಸಿದರು. ಇದರಿಂದ ಮತ್ತೆ ಕೆರಳಿದ ಪ್ರಸಾದ್‌ರು 'ಹೇ ಹೋಗಪ್ಪ ಹೊರಗೆ' ಎಂದು ಆಕ್ರೋಶ ಹೊರಹಾಕಿದರು. ಆಗ ರಮೇಶ್ 'ನಾನೇನು ನಿಮ್ ಮನೆಗೆ ಬಂದಿಲ್ಲ. ಸರ್ಕಾರದ ಕಾರ್ಯಕ್ರಮಕ್ಕೆ ಬಂದಿದ್ದೀನಿ. ಸರ್ಕಾರಿ ಅಧಿಕಾರಿಗೆ ನಾನಿಲ್ಲಿರೋದು ಇಷ್ಟ ಇಲ್ಲ ಅಂತ ಕಾಣುತ್ತೆ. ಅದಕ್ಕೆ ಹೋಗ್ತಾಯಿದ್ದೀನಿ' ಎಂದು ಹೇಳಿ ಹೊರನಡೆದರು. ನಂತರ ಶ್ರೀನಿವಾಸಪ್ರಸಾದ್ ಸುದ್ದಿಗೋಷ್ಠಿ ಮುಂದುವರೆಸಿದರು.

ಈ ವೇಳೆ ಉಪಸ್ಥಿತರಿದ್ದ ಶಾಸಕ ಅಶ್ವಿನ್‌ಕುಮಾರ್, ಮಾಜಿ ಶಾಸಕ ಡಾ. ಭಾರತೀಶಂಕರ್, ಮುಡಾ ಮಾಜಿ ಅಧ್ಯಕ್ಷ ಸಿ. ಬಸವೇಗೌಡ, ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಸೇರಿದಂತೆ ಇತರೆ ಮುಖಂಡರು ಹಾಗೂ ಅಧಿಕಾರಿಗಳು ಇಬ್ಬರ ವಾಕ್ಸಮರವನ್ನು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದರು. ಮಧ್ಯೆ ಕೆಲ ಮುಖಂಡರು ಹಾಗೂ ಕಾರ್ಯಕರ್ತರು ಸಿ. ರಮೇಶ್ ಅವರನ್ನು ಸಮಾಧಾನಪಡಿಸಲು ಮುಂದಾದರು.

ಕುರಿಹುಂಡಿ ಗ್ರಾಪಂ ಅಧ್ಯಕ್ಷರಾಗಿ ರಮೇಶ್ ಆಯ್ಕೆ



ಮಲ್ಕುಂಡಿ, ನ.16– ನಂಜನಗೂಡು ತಾಲೂಕಿನ ಕುರಿಹುಂಡಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಅಭ್ಯರ್ಥಿ ರಮೇಶ್ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ವಿದ್ಯಾ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ಇಂದು ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ರಮೇಶ್, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ತರಗನಹಳ್ಳಿ ನಂಜುಂಡಸ್ವಾಮಿ ನಾಮಪತ್ರ ಸಲ್ಲಿಸಿದ್ದರು. ಬಿಜೆಪಿ ಅಭ್ಯರ್ಥಿ ರಮೇಶ್ 9 ಮತ ಪಡೆದು ಜಯಶೀಲರಾದರೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ತರಗನಹಳ್ಳಿ ನಂಜುಂಡಸ್ವಾಮಿ 8 ಮತ ಪಡೆದು ಪರಾಭವಗೊಂಡರು, ಚುನಾವಣೆ ಅಧಿಕಾರಿ ಚಂದ್ರು ಭಾಗವಹಿಸಿದ್ದರು.

ನೂತನ ಅಧ್ಯಕ್ಷ ರಮೇಶ್ ಮಾತನಾಡಿ, ಎಲ್ಲಾ ಸದಸ್ಯರೊಂದಿಗೆ ಜೊತೆ ಗೂಡಿ ಗ್ರಾಪಂ ವ್ಯಾಪ್ತಿಗೆ ಬರುವ ಗ್ರಾಮಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಹೇಳಿದರು.

ಬಿಜೆಪಿ ತಾಲೂಕು ಅಧ್ಯಕ್ಷ ಪಿ ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವ ಮೂರ್ತಿ, ಗ್ರಾಪಂ ಉಪಾಧ್ಯಕ್ಷೆ ಚಂದ್ರಕಲಾ, ಗ್ರಾಪಂ ಸದಸ್ಯರಾದ ಸಿದ್ದರಾಜು, ಸುರೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಂಜುನಾಥ್, ಮುಖಂಡರುಗಳಾದ ಶಿವಶಂಕರ್, ನಟರಾಜ್, ಬಸವರಾಜ್, ನಾಗರಾಜ್, ಗುರುಸ್ವಾಮಿ, ಆನಂದ್ ಸೇರಿದಂತೆ ಪ್ರಮುಖರು ಹಾಜರಿದ್ದರು.

ಸಾಲಬಾಧೆ: ಕೆರೆಗೆ ಬಿದ್ದು ಗೃಹಿಣಿ ಆತ್ಮಹತ್ಯೆ



ಹನಗೋಡು, ನ.16– ಸಮೀಪದ ವೀರನಹೊಸಹಳ್ಳಿ ಗ್ರಾಮದಲ್ಲಿ ರೈತ ಮಹಿಳೆ ಸಾಲಬಾಧೆಗೆ ಹೆದರಿ ಸೋಮವಾರ ಸಂಬಂಧಿಕರ ಮನೆಗೆ ಹೋಗಿ ಬರುವುದಾಗಿ ಹೇಳಿ ಹೋಗಿ ಪಿರಿಯಾಪಟ್ಟಣದ ಹತ್ತಿರವಿರುವ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಂದು ಬೆಳಗ್ಗೆ ಬೆಳಕಿಗೆ ಬಂದಿದೆ.

ಗ್ರಾಮದ ಲಕ್ಕೇಗೌಡರ ಪತ್ನಿ ಲಕ್ಷ್ಮಮ್ಮ (65) ಮೃತ ದುರ್ದೈವಿ. ಮೃತರು ತಮ್ಮ ಜಮೀನಿನಲ್ಲಿ ಮುಸುಕಿನ ಜೋಳ, ರಾಗಿ ಮತ್ತು ಶುಂಠಿಯನ್ನು ಬೆಳೆದಿದ್ದರು. ಬೇಸಾಯಕ್ಕೆಂದು ಮೃತನ ಪತಿ ಲಕ್ಕೆಗೌಡ ಹನಗೋಡಿನ ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ 7 ಲಕ್ಷ ಸಾಲ ಮಾಡಿದ್ದರು. ಅಲ್ಲದೆ ಲೇವಾದೇವಿದಾರರಿಂದ ಐದು ಲಕ್ಷ ಸಾಲ ಮಾಡಿದ್ದರು. ಬೆಳೆಯಲ್ಲಿ ನಷ್ಟ ಉಂಟಾದ ಹಿನ್ನೆಲೆಯಲ್ಲಿ ಮಾಡಿದ ಸಾಲವನ್ನು ತೀರಿಸಲಾಗದೆ ಅನಾರೋಗ್ಯ ಪೀಡಿತ ಪತಿಯ ಚಿಕಿತ್ಸೆಗೆ ಹಣ ಹೊಂದಿಸಲಾಗದೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಪುತ್ರ ಶಿವು ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮೃತರು ಪತಿ, ಓರ್ವ ಪುತ್ರ, ಪುತ್ರಿ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಮನೆಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಭೇಟಿ ನೀಡಿ ಸಾಂತ್ವನ ಹೇಳಿದರು. ಅಂತ್ಯಕ್ರಿಯೆಯಲ್ಲಿ ಗ್ರಾಪಂ ಅಧ್ಯಕ್ಷ ಶುಭಾಶ್, ಪಂಚಾಯಿತಿ ಸದಸ್ಯರಾದ ವೆಂಕಟೇಶ್, ಕುಮಾರ್, ಶ್ರೀನಿವಾಸ್ ಮುಂತಾದವರು ಪಾಲ್ಗೊಂಡಿದ್ದರು.

ರಾಜ್ಯದ ಅಭಿವೃದ್ಧಿಗೆ ಸಹಕಾರ ಕ್ಷೇತ್ರದ ಪಾತ್ರ ಪ್ರಮುಖ

ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ವಿ. ರಾಜೀವ್ ಅಭಿಪ್ರಾಯ



ಹೆಚ್.ಡಿ.ಕೋಟೆ, ನ.16– ರಾಜ್ಯದ ಅಭಿವೃದ್ಧಿಗೆ ಸಹಕಾರ ಕ್ಷೇತ್ರ ಪ್ರಮುಖ ಪಾತ್ರ ವಹಿಸಿದೆ ಎಂದು ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎಚ್.ವಿ ರಾಜೀವ್ ಅಭಿಪ್ರಾಯಪಟ್ಟರು.

ಪಟ್ಟಣದ ಹ್ಯಾಂಡ್‌ಪೋಸ್ಟ್‌ನ ಮೈಮುಲ್ ಉಪ ಕಚೇರಿ ಸಭಾಂಗಣದಲ್ಲಿ ಬುಧವಾರ ಅಖಿಲ ಭಾರತ ಸಹಕಾರ ಸಪ್ತಾಹ 2022 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಒಂದು ಊರು ಅಭಿವೃದ್ಧಿ ಆಗಬೇಕಾದರೆ ಶಾಲೆ, ಪಂಚಾಯಿತಿ ಹೇಗೆ ಮುಖ್ಯವೋ ಅದೇ ರೀತಿ ಸಹಕಾರ ಸಂಘ ಕೂಡ ಅಷ್ಟೇ ಮುಖ್ಯ. ಇಚ್ಛಾಶಕ್ತಿ ಇದ್ದರೆ ಏನು ಬೇಕಾದರೂ ಸಾಧನೆ ಮಾಡಬಹುದು ಎಂದರು.

ಹಾಲಿಗೆ ಎರಡು ರೂಪಾಯಿ ಸಹಾಯಧನವನ್ನು ಪ್ರಥಮ ಬಾರಿಗೆ ನೀಡಿದವರು ಮುಖ್ಯಮಂತ್ರಿ ಆಗಿದ್ದ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರ್ಕಾರ. ಮತ್ತೆ ಈಗ 3 ರೂ ಹೆಚ್ಚುವರಿಯಾಗಿ ಮಾಡುತ್ತಿರುವುದು ಕೂಡ ಬಿಜೆಪಿ ಸರ್ಕಾರ. ಹಾಗಾಗಿ ಬಿಜೆಪಿ ಸರ್ಕಾರ ಹಾಲು ಉತ್ಪಾದಕರ ಸಹಕಾರ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುತ್ತಿದೆ ಎಂದು ತಿಳಿಸಿದರು.

ನಾವು ಎಷ್ಟು ವರ್ಷ ಆಡಳಿತ ಮಾಡಿದೆವು ಎಂಬುದು ಮುಖ್ಯವಲ್ಲ. ಆಡಳಿತ ಅವಧಿಯಲ್ಲಿ ಎಷ್ಟು ಎತ್ತರಕ್ಕೆ ಕೊಂಡೊಯ್ದಿದ್ದೇವೆ ಎಂಬುದು ಮುಖ್ಯ ಎಂದರು.

ಸಮಾಜದಲ್ಲಿ ಈ ಹಿಂದೆ ಪುರುಷ ಪಾರುಪತ್ಯ ಜಾಸ್ತಿ ಇತ್ತು, ಆದರೆ ಎಚ್.ಡಿ. ಕೋಟೆ ತಾಲೂಕಿನಲ್ಲಿ 80 ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘ ಅಸ್ತಿತ್ವದಲ್ಲಿರುವುದನ್ನು ನೋಡಿದರೆ ಪ್ರಸ್ತುತ ಯಾರ ಪಾರುಪತ್ಯದಲ್ಲಿ ನಾವು ಇದ್ದೇವೆ ಎಂಬುದು ಗಮನಿಸಬಹುದು ಎಂದರು. ಮೈಮುಲ್ ನಿರ್ದೇಶಕ ಈರೇಗೌಡ ಮಾತನಾಡಿ, ಸಹಕಾರ ವಿಚಾರ ಬಂದಾಗ ಎಲ್ಲಾ ಪಕ್ಷದವರು ಒಂದು ವೇದಿಕೆಗೆ ಬರಬೇಕು. ಇಲ್ಲದಿದ್ದರೆ ಆರ್ಥಿಕವಾಗಿ ಮುಂದೆ ಬರಲು ಸಾಧ್ಯವಿಲ್ಲ. ರಾಜ್ಯದಲ್ಲಿ ರೈತರ ಪರವಾಗಿ ಯಾವುದಾದರೂ ಒಕ್ಕೂಟ ಕೆಲಸ ಮಾಡುತ್ತಿದೆ ಎಂದರೆ ಅದು ಮೈಮುಲ್ ಮಾತ್ರ. ಅದು ಎಲ್ಲರ ಸಹಕಾರದಿಂದ ಎಂದರು.

ನ.20 ರಂದು ಮೈಸೂರಿನಲ್ಲಿ ನಡೆಯುವ ಸಹಕಾರ ಸಪ್ತಾಹ ಸಮಾರೋಪ ಸಮಾರಂಭಕ್ಕೆ ತಾಲೂಕಿನ ಎಲ್ಲಾ ಒಕ್ಕೂಟದವರು ಭಾಗವಹಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಮೈಮುಲ್ ನಿರ್ದೇಶಕಿ ದಾಕ್ಷಾಯಿಣಿ ಬಸವರಾಜಪ್ಪ, ಟಿ.ಎ.ಪಿ.

6 ತಾಲೂಕಿನಲ್ಲಿ ಸಹಕಾರ ಸಂಘಗಳಲ್ಲಿ ಮಹಿಳೆಯರು ಎಷ್ಟು ಪ್ರೋತ್ಸಾಹದಿಂದ ಮುಂದುವರೆಸಿಕೊಂಡು ಹೋಗುತ್ತಿರುವುದು ಕಣ್ಮುಂದೆ ಇದೆ. ಮುಂದಿನ ದಿನಗಳಲ್ಲೂ ಸಹಕಾರ ಸಂಘಗಳಿಂದ ಸಿಗುವ ಎಲ್ಲಾ ಸವಲತ್ತುಗಳು, ಯೋಜನೆಗಳನ್ನು ಸದುಪಯೋಗ ಪಡಿಸಿಕೊಳ್ಳುವುದರ ಮೂಲಕ ಇನ್ನೂ ಹೆಚ್ಚಿನ ಜವಾಬ್ದಾರಿಯುತ ಕೆಲಸಗಳನ್ನು ಮಾಡಿಕೊಂಡು ಹೋಗಿ.

-ಎಚ್.ವಿ. ರಾಜೀವ್,
ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ

ಸಿ.ಎಂ.ಎಸ್ ಅಧ್ಯಕ್ಷ ಮೊತ್ತ ಬಸವರಾಜಪ್ಪ, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಬಿ. ಬಸವರಾಜು, ತೋಟಗಾರಿಕೆ ಬೆಳೆಗಾರರ ಸಹಕಾರ ಸಂಘದ ಅಧ್ಯಕ್ಷ ನಂದೀಶ್ ಕುಮಾರ್, ಪುರಸಭಾ ಸದಸ್ಯ ಪ್ರೇಮ್ ಸಾಗರ್, ಸಹಕಾರ ಸಂಘಗಳ ನಿಬಂಧಕರಾದ ಜಿ.ಆರ್.ವಿಜಯಕುಮಾರ್, ಸಹಾಯಕ ನಿಬಂಧಕರಾದ ಪ್ರಕಾಶ್ ರಾವ್, ಕೆ.ಐ.ಸಿ.ಎಂ ಉಪನ್ಯಾಸಕ ಎಂ.ವಿಶ್ವೇಶ್ವರಯ್ಯ, ಜಿಲ್ಲಾ ಸಹಕಾರ ಒಕ್ಕೂಟ ವ್ಯವಸ್ಥಾಪಕ ಪಿ.ಎಸ್.ಹರೀಶ್, ಸಹಕಾರ ಅಭಿವೃದ್ಧಿ ಅಧಿಕಾರಿ ರೇಣುಕಾ ಮೈಮುಲ್ ವಿಸ್ತರಣಾಧಿಕಾರಿ ಆಸಿಫ್ ಇಕ್ಬಾಲ್ ಇದ್ದರು.

ನಂಜನಗೂಡು ಕ್ಷೇತ್ರದಿಂದ ನಾನೂ ಟಿಕೆಟ್ ಆಕಾಂಕ್ಷಿ; ಡಾ.ಎಚ್.ಸಿ. ಮಹದೇವಪ್ಪ



ನಂಜನಗೂಡು, ನ.16– ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ನಂಜನಗೂಡು ವಿಧಾನ ಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಬಯಸಿದ್ದೇನೆ. ಹೀಗಾಗಿ ಕೆಪಿಸಿಸಿಗೆ ಟಿಕೆಟ್ ನೀಡುವಂತೆ ಅರ್ಜಿ ಸಲ್ಲಿಸಿದ್ದೇನೆ ಎಂದು ಕಾಂಗ್ರೆಸ್ ಮುಖಂಡ ಡಾ. ಎಚ್.ಸಿ. ಮಹದೇವಪ್ಪ ಹೇಳಿದರು.

ನಗರದ ಹೌಸಿಂಗ್ ಬೋರ್ಡ್ ಕಾಲೋನಿಯ ಉದ್ಯಾನವನದಲ್ಲಿ ಬುಧವಾರ ಬೆಂಬಲಿಗರ ಸಭೆ ನಡೆಸಿ ಅವರು ಮಾತನಾಡಿದರು. ಕ್ಷೇತ್ರದಿಂದ ಸ್ಪರ್ಧಿಸಲು ಎ ಮತ್ತು ಬಿ ಮಧ್ಯೆ ಸ್ಪರ್ಧೆ ಏರ್ಪಟ್ಟಿದೆ ಎಂದು ಪರೋಕ್ಷವಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಹಾಗೂ ತಮ್ಮ ನಡುವೆ ಪಕ್ಷದ ಟಿಕೆಟ್‌ಗಾಗಿ ಜಿದ್ದಾಜಿದ್ದಿ ನಡೆದಿರುವುದನ್ನು ಒಪ್ಪಿಕೊಂಡ ಮಹದೇವಪ್ಪ, ಪಕ್ಷದ ಹೈಕಮಾಂಡ್ ಗೆಲ್ಲುವ ಅವಕಾಶವಿರುವವರಿಗೆ ಟಿಕೆಟ್ ನೀಡುತ್ತದೆ ಎಂದರು.

ಎ ಮತ್ತು ಬಿ ಇಬ್ಬರನ್ನು ಬಿಟ್ಟು ಮತ್ತೊಬ್ಬರಿಗೆ ಟಿಕೆಟ್ ನೀಡಿದರೆ ಫಲಿತಾಂಶ ಪಾತಾಳ ತಲುಪುತ್ತದೆ ಎಂಬ ಅರಿವಿರುವುದರಿಂದ ಮತ್ತೊಬ್ಬರಿಗೆ ಅವಕಾಶವಾಗುವುದಿಲ್ಲ. ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲುವಿಗೆ ಕಾರ್ಯಕರ್ತರು ಶ್ರಮಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಬಿಜೆಪಿ ತೊರೆದು ಹಾಡ್ಯ ರಂಗಸ್ವಾಮಿ, ಕುಮಾರ, ಶಿವನಾಯಕ, ಚಿಕ್ಕನಾಯಕ, ತಂಬಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಕಾರ್ಯಕ್ರಮದಲ್ಲಿ ದೇವನೂರು ಮಹದೇವಪ್ಪ ಇಂಧನಬಾಬು, ಚಾಮರಾಜು, ಸ್ವಾಮಿ, ಮೂಗಶೆಟ್ಟಿ, ನಾಗೇಂದ್ರ, ಮಲ್ಲಾರಾಧ್ಯ, ಸೋಮಶೇಖರ್, ಮಹದೇವಪ್ಪ, ನಟರಾಜು, ರಾಜಣ್ಣ, ರವಿ, ಅಜ್ಗರ್, ನಾಸಿರ್ ಖಾನ್, ಮಣಿ, ಲಿಂಗರಾಜು, ಶಂಕರಪ್ಪ, ಉಮೇಶ್, ಗುರುಸ್ವಾಮಿ, ಸಿದ್ದರಾಜು, ಅನುಷ್, ಪರಶಿವಮೂರ್ತಿ, ಸೋಮಣ್ಣ, ಚೆನ್ನನಾಯಕ ಉಪಸ್ಥಿತರಿದ್ದರು.



ಕಂಪಲಾಪುರದ ಗೂಡ್ಸ್ ವಾಹನ ಮಾಲೀಕರು ಹಾಗೂ ಚಾಲಕರ ಸಂಘದಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಸರಗೂರಲ್ಲಿ ಎರಡನೇ ಅಪ್ಪಾಜಿ ಕ್ಯಾಂಟಿನ್ ಉದ್ಘಾಟನೆ



ಸರಗೂರು, ನ.16– ಪಟ್ಟಣದಲ್ಲಿ ಕೆ.ಎಂ.ಕೃಷ್ಣನಾಯಕ ಅವರು ಎಚ್.ಡಿ. ಕೋಟೆ ವಿಧಾನಸಭಾ ಕ್ಷೇತ್ರದ ಎರಡನೇ ಅಪ್ಪಾಜಿ ಕ್ಯಾಂಟಿನ್ ಅನ್ನು ಸರಗೂರು ಪಟ್ಟಣದಲ್ಲಿ ದಡದಹಳ್ಳಿ ಮಠದ ಷಡಾಕ್ಷರ ಸ್ವಾಮೀಜಿ, ಹಂಚೀಪುರ ಮಠದ ಚನ್ನಬಸವ ಸ್ವಾಮಿಜಿ, ಬಿಡುಗಲು ಪಡುವಲ ವಿರಕ್ತಮಠದ ಮಹದೇವಸ್ವಾಮಿ, ಅಂತರಸಂತೆ ಬುದ್ಧ ವಿಹಾರದ ಬಂತೇಜಿ ಅವರು ಉದ್ಘಾಟಿಸಿದರು.

ಜೆಡಿಎಸ್ ಮುಖಂಡ ಕೃಷ್ಣನಾಯಕ ಮಾತನಾಡಿ, ರಾಜಕೀಯ ಉದ್ದೇಶದಿಂದ ಈ ಕ್ಯಾಂಟಿನ್ ಮಾಡಿಲ್ಲ, ಶಾಲಾ ಕಾಲೇಜು ಮಕ್ಕಳಿಗೆ, ಕೂಲಿಕಾರ್ಮಿಕರಿಗೆ, ವಾಹನ ಚಾಲಕರಿಗೆ, ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲ ಆಗಲು ಪ್ರಾರಂಭಿಸಲಾಗಿದೆ.

ಮಾಜಿ ಪ್ರಧಾನಿಗಳಾದ ಎಸ್.ಡಿ.ದೇವೇಗೌಡರ ಆಶೀರ್ವಾದ ಹಾಗೂ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮವನ್ನು ಮಾಡುತ್ತಿದ್ದೇನೆ. ಕೋವಿಡ್ ಸಮಯದಲ್ಲಿ ಜನರಿಗೆ ಆಹಾರ ಕಿಟ್ ವಿತರಣೆ ನೀಡಲಾಗಿತ್ತು, ಇನ್ನು ಹಲವಾರು ಸೇವಾ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದೇನೆ. ಎಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ನಾನು ಸೇವೆ ಮಾಡಿಕೊಂಡು ಬರುತ್ತೇನೆ.

ಪಡುವಲ ವಿರಕ್ತಮಠದ ಮಹದೇವ ಸ್ವಾಮಿ ಮಾತನಾಡಿ, ತಾಲೂಕಿನ ದಡದಹಳ್ಳಿ ಮಠದ ಷಡಕ್ಷರಸ್ವಾಮೀಜಿ, ಹಂಚೀಪುರ ಮಠದ ಚನ್ನಬಸವಸ್ವಾಮೀಜಿ, ಜಕ್ಕಳ್ಳಿ ಮಠದ ನಂದೀಶ್ ಸ್ವಾಮಿ, ಅಂತರಸಂತೆ ಬುದ್ಧ ವಿಹಾರದ ಬಂತೇಜಿ ಅಪ್ಪಾಜಿಕ್ಯಾಂಟಿನ್ ಸಂಸ್ಥಾಪಕ ಕೆ.ಎಂ.ಕೃಷ್ಣನಾಯಕರವರಿಗೆ ಆಶೀರ್ವದಿಸಿ ಮಾತನಾಡಿದ ಅವರುಗಳು, ಬಡವರಿಗಾಗಿ ಪ್ರಾರಂಭಿಸಿದ್ದಾರೆ. 10 ರೂ.ಗೆ ತಿಂಡಿ, 10 ರೂ.ಗೆ ಊಟವನ್ನು ನೀಡುತ್ತಿದ್ದಾರೆ. ಈ ಕ್ಷೇತ್ರದ ಜನತೆ ಅಪ್ಪಾಜಿ ಕ್ಯಾಂಟಿನ್ ಉಪಯೋಗ ಪಡೆದುಕೊಳ್ಳಿ ಎಂದರು.

ಉದ್ಘಾಟನೆಗೆ ಮೊದಲು ಚಿಕ್ಕದೇವಮ್ಮ ಬೆಟ್ಟದಲ್ಲಿ ಪೂಜೆ ಸಲ್ಲಿಸಿ ನಂತರ ಸರಗೂರು ಪಟ್ಟಣದ ಪ್ರಮುಖ ಹೆಚ್.ಬಿ.ರಸ್ತೆಗೆ ಆಗಮಿಸಿ ನಂತರ ಪಾದಯಾತ್ರೆ ಮೂಲಕ ಕ್ಯಾಂಟಿನ್ ಬಳಿ ಆಗಮಿಸಲಾಯಿತು. ಪಾದಯಾತ್ರೆಯಲ್ಲಿ ಜಾನಪದ ಕಲಾತಂಡಗಳು, ವೀರಗಾಸೆ ಕುಣಿತ, ಪೂಜಾಕುಣಿತ, ಡೊಳ್ಳುಕುಣಿತ, ಮಂಗಳವಾದ್ಯ ಭಾಗವಹಿಸಿದ್ದವು.

ಕಂಚಮಳ್ಳಿ ಗ್ರಾಪಂ ಅಧ್ಯಕ್ಷೆ ವಿರುದ್ಧ ಅವಿಶ್ವಾಸ ನಿರ್ಣಯ ಕೋರಂ ಇಲ್ಲದೆ ರದ್ದು

ಹಂಪಾಪುರ, ನ.16– ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿಗೆ ಸೇರುವ ಕಂಚಮಳ್ಳಿ ಗ್ರಾಪಂ ಅಧ್ಯಕ್ಷೆ ರಮ್ಯ ಗೋವಿಂದೇಗೌಡ ಕುಟುಂಬದ ಹಸ್ತಕ್ಷೇಪ, ಆಡಳಿತ ದುರುಪಯೋಗದಿಂದ ಬೇಸತ್ತು ತಾಪಂ ಉಪಾಧ್ಯಕ್ಷರು ಹಾಗೂ ಸದಸ್ಯರು ಒಮ್ಮತದ ನಿರ್ಣಯದೊಂದಿಗೆ ಹುಣಸೂರು ಉಪಚುನಾವಣಾಧಿಕಾರಿಗೆ ಸಲ್ಲಿಸಿದ್ದ ಅವಿಶ್ವಾಸ ನಿರ್ಣಯ ಕೋರಂ ಇಲ್ಲದೆ ರದ್ದುಗೊಂಡಿದೆ.

ಅವಿಶ್ವಾಸ ನಿರ್ಣಯದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಅವರು ವಿಶ್ವಾಸ ಮಂಡನೆ ಪರ್ಯಾಲೋಚಿಸಲು ಸರ್ವ ಸದಸ್ಯರ ಸಭೆ ಕರೆದಿದ್ದರು. ಪ್ರಸ್ತುತ ಸಭೆಯಲ್ಲಿ ಅಧ್ಯಕ್ಷೆ ರಮ್ಯಾಗೋವಿಂದೇಗೌಡ ಪರ ಹೆಚ್.ಎಂ.ನಂಜುಂಡಸ್ವಾಮಿ, ಕುಮಾರ್, ರಾಮಾಚಾರಿ, ನಂಜುಂಡಸ್ವಾಮಿ, ಮಹದೇವಮ್ಮ ಇವರುಗಳು ಅಧ್ಯಕ್ಷರನ್ನು ಬೆಂಬಲಿಸಿ ಮಾತನಾಡಿ, ಅಧ್ಯಕ್ಷರು ಈವರೆಗೆ ಅನೇಕ ಜನಪರ ಹಾಗೂ ಗ್ರಾಮಪರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಪಂಚಾಯಿತಿಯನ್ನು ಪ್ರಗತಿ ಪಥದತ್ತ ನಡೆಸಿಕೊಂಡು ಬರುತ್ತಿದ್ದಾರೆ. ಅವರಿಗೆ ನಮ್ಮ ಸಂಪೂರ್ಣ ಬೆಂಬಲ ಇದ್ದೇ ಇದೆ. ಅಭಿವೃದ್ಧಿ ಕಾರ್ಯಗಳು ಉತ್ತಮವಾಗಿ ನಡೆಯುತ್ತಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿದ ಉಪವಿಭಾಗಾಧಿಕಾರಿ ರುಚಿ ಬಿಂದಾಲ್ ಅವರು, ಕೋರಂ ಇಲ್ಲದ ಕಾರಣ ಸಭೆಯನ್ನು ರದ್ದುಗೊಳಿಸಿ ಹಾಲಿ ಅಧ್ಯಕ್ಷೆ ರಮ್ಯಾಗೋವಿಂದೇಗೌಡ ಅವರೇ ಅಧ್ಯಕ್ಷರಾಗಿ ಮುಂದುವರೆಯುವಂತೆ ಆದೇಶಿಸಿ ಸಭೆಯನ್ನು ವಿಸರ್ಜಿಸಿದರು.

ಮೈಸೂರು ರೇಸುಗಳು–2022

1ನೇ ದಿನ, ಗುರುವಾರ 17–11–2022

ಇಂದಿನ ರೇಸಿಗೆ ನಮ್ಮ ಆಂಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ವೈನಾಡ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಮಿಸ್ ಚೈನಾ 2. ನ್ಯೂಸ್ ಮೇಕರ್ 3. ಲೈಕ್ ಮೈ ಡ್ಯಾಡಿ

II. ಫ್ಯಾಂಟಸಿ ಡ್ರೀಮ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1 ಕ್ಲೋವಿಸ್ 2. ಶಿವಾಲಿಕ್ ಆ್ಯಟಿಟ್ಯೂಡ್ 3. ಆರ್‌ಮಾಮೆಂಟ್

III. ಗದಗ್ ಪ್ಲೇಟ್ ಡಿ2–1400 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1 ಆರ್ಟಿಕಲ್ ಫಿಫ್ಟೀನ್ 2 ಕೇಸಿರಿ ಕ್ವೀನ್ 3. ಕ್ಯಾಟಲೀನಾ

IV. ಟ್ರೆಷರಸ್ ನೆಸ್ಟ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಎವಾಂಡರ್ 2. ಕಂಟ್ರೇಸ್ ಲೈಟ್ 3. ಅಸ್ಟ್ರಾಲಜರ್

V. ಗದಗ್ ಪ್ಲೇಟ್ ಡಿ1–1400 ಮೀ. ರೇಟೆಡ್ 20ರಿಂದ 45. ಮ.3.30ಕ್ಕೆ
1. ಬ್ರಾಕ್ಸ್‌ಟನ್ 2. ಮಿಲೋಸ್ 3. ಫ್ಲೆಮಿಂಗೋಡ್ಯಾಸರ್

VI. ಎಸ್.ಎಂ.ಅಟಾವುಲ್ಲಾಯಿ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 40 ರಿಂದ 65. ಸಂ.4.00ಕ್ಕೆ
1. ಇಂಡಿಯನ್ ಪೆಟ್ರಿಯಟ್ 2. ಪಿಂಕ್ ಜಾಸ್ಮಿನ್ 3. ಅಗಿಲಾ

VII. ಧಾರವಾಡ ಪ್ಲೇಟ್–1400 ಮೀ. ರೇಟೆಡ್ 60 ಮೇಲ್ವರ್ಗ. ಸಂ.4.30ಕ್ಕೆ
1. ಪ್ರಿನ್ಸ್ ಅಬಿರ್ 2. ಗ್ಯಾಲರಿ ಕ್ವೀನ್ 3. ಮೊಗಲ್

VIII. Lt.Col.C.ರುದ್ರಪ್ಪ ಮೆಮೋರಿಯಲ್ ಪ್ಲೇಟ್ –1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1 ಕೋಸ್ಟಲ್ ಕ್ರೂಜಿ 2 ಪ್ರಿನ್ಸ್ ಕಾರ್ಪೊರೇಟ್ 3. ನೋಟೋರಿಟಿ

ದಿನದ ಅತ್ಯುತ್ತಮ	: ಇಂಡಿಯನ್ ಪೆಟ್ರಿಯಟ್
ಡಬ್ಬಲ್	: ಆರ್ಟಿಕಲ್ ಫಿಫ್ಟೀನ್, ಪ್ರಿನ್ಸ್ ಅಬಿರ್
ಜಾಕ್‌ಪಾಟ್	: 4, 5, 6, 7 ಮತ್ತು 8
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 3, 4 ಮತ್ತು 5
III ಟ್ರಿಬಲ್	: 6, 7 ಮತ್ತು 8
ಎಕ್ಸ್‌ಆಕ್ಟ್	: 7 ಮತ್ತು 8

ಟಿಪ್‌ಸ್ಟರ್ ಪಿಜೆಸಿ

ಅರ್ಜಿ ಆಹ್ವಾನ

ನಂಜನಗೂಡು, ನ.16– ತಾಲೂಕು ಭಗೀರಥ ಉಪ್ಪಾರ ನೌಕರರ ಸಂಘದಿಂದ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ 80ಕ್ಕಿಂತ ಹೆಚ್ಚು ಅಂಕ ಪಡೆದ ತಾಲೂಕಿನ ಉಪ್ಪಾರ ಸಮಾಜದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ದೃಢೀಕೃತ ಅಂಕಪಟ್ಟಿ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ದೂರವಾಣಿ ಸಂಖ್ಯೆ ಹಾಗೂ ಭಾವಚಿತ್ರದೊಂದಿಗೆ ನ.30 ರೊಳಗೆ ಅರ್ಜಿ ಸಲ್ಲಿಸುವಂತೆ ಕೋರಲಾಗಿದೆ.

ಕೆಎಸ್‌ಆರ್‌ಪಿ 5ನೇ ಬೆಟಾಲಿಯನ್ ವಾರ್ಷಿಕ ಕ್ರೀಡಾಕೂಟಕ್ಕೆ ಯಶಸ್ವಿ ತೆರೆ



ಮೈಸೂರು, ನ.16(ಎಂಕೆ)– ನಗರದ ಕೆಎಸ್‌ಆರ್‌ಪಿ(ಕರ್ನಾಟಕ ರಾಜ್ಯ ಮೀಸಲು ಪಡೆ) ಪರೇಡ್ ಮೈದಾನದಲ್ಲಿ ನಡೆದ ಕೆಎಸ್‌ಆರ್‌ಪಿ 5ನೇ ಬೆಟಾಲಿಯನ್‌ನ ವಾರ್ಷಿಕ ಕ್ರೀಡಾಕೂಟ ಯಶಸ್ವಿಯಾಗಿ ಮುಕ್ತಾಯಗೊಂಡಿತು.


ಮೈಸೂರು ಅಂತರ ದಳಗಳ ('ಎ'ದಳ, 'ಬಿ', 'ಸಿ', 'ಡಿ', 'ಇ', 'ಎಫ್', 'ಕೇಂದ್ರ ಮತ್ತು 'ಟಿಟಿಟಿ' ದಳ)ಗಳ ನಡುವೆ ನಡೆದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ನೂರಾರು ಮಂದಿ ಪೊಲೀಸರು ಬಹುಮಾನ ಗಿಟ್ಟಿಸಿದರು.

100 ಮೀಟರ್ ಓಟದ ಸ್ಪರ್ಧೆಯಲ್ಲಿ ಸುಮಂತ್ ಪ್ರಥಮ, ವೈ.ಎಸ್.ಸಂಜಯ್ ದ್ವಿತೀಯ ಹಾಗೂ ಪ್ರಶಾಂತ್ ಕುಲಕರ್ಣಿ ತೃತೀಯ ಬಹುಮಾನ ಪಡೆದರೆ, ಹೆಚ್‌ಸಿ ಪುನರ್ ಮನನ ತರಬೇತಿ ಸಿಬ್ಬಂದಿ (ಟಿಟಿಟಿ)ಗಳಿಗೆ ನಡೆದ 100 ಮೀಟರ್ ಓಟದಲ್ಲಿ ಹೀರಾನಾಂಯ್ಕ ಪ್ರಥಮ, ಬಿ.ಪಿ.ಲಂಗೋಟಿ ದ್ವಿತೀಯ, ಪ್ರಮೋದ್ ತೃತೀಯ ಬಹುಮಾನ ಗೆದ್ದರು.

5000 ಮೀ ಓಟದಲ್ಲಿ ಎ.ಎಂ.ಮಲ್ಲೇಶ್ ಪ್ರಥಮ, ಶ್ರೀಶೈಲಾ ಎಂ.ಪೂಜಾರಿ ದ್ವಿತೀಯ, ಸಂಜಯ್‌ಕುಮಾರ್ ತೃತೀಯ ಬಹುಮಾನ ಪಡೆದರೆ, **ಗುಂಡು ಎಸೆತ** ಸ್ಪರ್ಧೆಯ ಎಆರ್‌ಎಸ್‌ಐ ವಿಭಾಗದಲ್ಲಿ ಜವರೇಗೌಡ ಪ್ರಥಮ, ದಿನೇಶ್ ದ್ವಿತೀಯ, ಎಂ.ಆರ್.ಅನಿಲ್‌ಕುಮಾರ್ ತೃತೀಯ ಸ್ಥಾನ ಪಡೆದರು. ಹಾಗೆಯೇ ಪುರುಷರ ವಿಭಾಗದಲ್ಲಿ ಮಧುಸೂದನ್ ಪ್ರಥಮ, ಎಂ.ಮಹದೇವಸ್ವಾಮಿ ದ್ವಿತೀಯ ಹಾಗೂ ಎಂ.ಆರ್.ಅನಿಲ್‌ಕುಮಾರ್ ತೃತೀಯ ಸ್ಥಾನ ಪಡೆದುಕೊಂಡರು.

ಕಬ್ಬಡಿಯಲ್ಲಿ 'ಎ'ದಳ ತಂಡ ಪ್ರಥಮ, 'ಇ'ದಳ ದ್ವಿತೀಯ ಸ್ಥಾನ ಗೆದ್ದರೆ, ಖೋ ಖೋ ಪಂದ್ಯದಲ್ಲಿ 'ಸಿ'ದಳ ತಂಡ ಪ್ರಥಮ ಹಾಗೂ 'ಎ'ದಳ ದ್ವಿತೀಯ ಬಹುಮಾನ ಗೆದ್ದರೆ, **ವಾಲಿಬಾಲ್**‌ನಲ್ಲಿ 'ಸಿ'ದಳ ತಂಡ ಪ್ರಥಮ, 'ಡಿ–ದಳ ದ್ವಿತೀಯ ಹಾಗೂ **ಹಗ್ಗ-ಜಗ್ಗಾಟದಲ್ಲಿ** 'ಕೇಂದ್ರ'ದಳ ತಂಡ ಪ್ರಥಮ, 'ಎಫ್'ದಳ ದ್ವಿತೀಯ ಬಹುಮಾನ ಗೆದ್ದುಕೊಂಡಿತು.

ಸೋಲು ಗೆಲುವಿನ ಮೆಟ್ಟಿಲು: ವಾರ್ಷಿಕ ಕ್ರೀಡಾಕೂಟ ಸಮಾರೋಪದ ಮುಖ್ಯ ಅತಿಥಿತಾಗಿ ಭಾಗವಹಿಸಿದ್ದ ಟೆರೆಷಿಯನ್ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಅಂಥೋನಿ ಮೊಸಸ್, ವಿಜೇತರಿಗೆ ಬಹುಮಾನ ವಿತರಿಸಿದರು. ಬಳಿಕ ಮಾತನಾಡಿದ ಅವರು, ಸೋಲು ಗೆಲುವಿನ ಮೆಟ್ಟಿಲು. ಸೋಲನ್ನು ಮನಸ್ಸಿಗೆ ಹಾಕಿಕೊಳ್ಳದೆ ಗೆಲ್ಲುವ ಪ್ರಯತ್ನವನ್ನು ನಿರಂತರವಾಗಿ ಮಾಡಿದರೆ ಗೆಲುವಿನ ಪ್ರತಿಫಲ ದೊರೆಯುತ್ತದೆ ಎಂದರು. ಕೆಎಸ್‌ಆರ್‌ಪಿ 5ನೇ ಬೆಟಾಲಿಯನ್‌ನ ಕಮಾಂಡೆಂಟ್ ಆರ್.ಜನಾರ್ಧನ್, ಸಹಾಯಕ ಕಮಾಂಡೆಂಟ್‌ಗಳಾದ ರಾಜು ಲಾಗೋಟಿ, ಮಹದೇವಸ್ವಾಮಿ, ನಿವೃತ್ತ ಪಿಎಸ್‌ಐ ಎಂ.ಬಾಬು ಮತ್ತಿತರರು ಉಪಸ್ಥಿತರಿದ್ದರು.







ಪುರಸಭಾ ಕಾರ್ಯಾಲಯ, ಗುಂಡ್ಲುಪೇಟೆ

ಚಾಮರಾಜನಗರ ಜಿಲ್ಲೆ–571111

Fax : 08229-222226, ಕಛೇರಿ : 08229–222226
E-mail : tmc_gundlupet@yahoo.com, Helpline : 08229-223377
Website : www.gundlupettown.gov.in

ಸಂಖ್ಯೆ: ಪುಗು/ಕಿಅ/ಪಿಆರ್/02/15ನೇಹಕಾ(2021–22)/2022–23 ದಿನಾಂಕ: 15.11.2022

ಟೆಂಡರ್ ಪ್ರಕಟಣೆ (3ನೇ ಕರೆ)
(ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಗುಂಡ್ಲುಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಡಬ್ಲ್ಯೂ–2 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್) ಷರತ್ತುಗಳಿಗೆ ಒಳಪಟ್ಟಂತೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆನ್‌ಲೈನ್‌ನಲ್ಲಿ ಗುತ್ತಿಗೆದಾರರು ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ; 22.11.2022 ಸಂಜೆ 4.30 ವರೆಗೆ, ಟೆಂಡರ್‌ನ್ನು ತೆರೆಯುವ ದಿನಾಂಕ; 24.11.2022.

1. ಗುಂಡ್ಲುಪೇಟೆ ಪುರಸಭೆಗೆ ಕಬಿನಿ ನೀರು ಸರಬರಾಜು ಮಾಡುವ ದೇಬೂರು ಪಂಪು ಸ್ಥಾವರದಲ್ಲಿ ಟ್ರಾನ್ಸ್‌ಫಾರ್ಮರ್ ಪ್ಲಾಟ್‌ಫಾರಂ ಎತ್ತರಿಸಿ, ಟ್ರಾನ್ಸ್‌ಫಾರ್ಮರ್ ಅಸೆಸರಿಸ್ ಅಳವಡಿಸುವುದು. ಹಾಗೂ ಸಿಂಧುವಳ್ಳಿ ಪಂಪು ಸ್ಥಾವರದಲ್ಲಿ ಟ್ರಾನ್ಸ್‌ಫಾರ್ಮರ್ ಅಸೆಸರಿಸ್ ಅಳವಡಿಸುವ ಕಾಮಗಾರಿ. ರೂ. 36.67 ಲಕ್ಷ. ಇಂಡೆಂಟ್: 129762.

ಮೇಲಿನ ಕಾಮಗಾರಿಗಳಿಗೆ ಕಾಲಾವಧಿ(ಮಳೆಗಾಲ ಸೇರಿ);– 05 ತಿಂಗಳು. ಮೇಲಿನ ಎಲ್ಲಾ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರ ದರ್ಜೆ:– 3ನೇ ದರ್ಜೆ ಮೇಲ್ಪಟ್ಟು. ಕಾಮಗಾರಿಗಳ ವಿವರಗಳನ್ನು www.eproc.karnataka.gov.in ಮತ್ತು ಇತರೆ ಷರತ್ತುಗಳ ಬಗ್ಗೆ ಸಂಬಂಧಪಟ್ಟ ತಾಂತ್ರಿಕ ಶಾಖೆಯಲ್ಲಿ ತಿಳಿದುಕೊಳ್ಳಬಹುದು.

ಸಹಿ/– ಪಿ.ಗಿರೀಶ್, ಅಧ್ಯಕ್ಷರು, ಪುರಸಭೆ, ಗುಂಡ್ಲುಪೇಟೆ
ಸಹಿ/– ಆರ್.ಹೇಮಂತರಾಜು, ಮುಖ್ಯಾಧಿಕಾರಿ ಪುರಸಭೆ, ಗುಂಡ್ಲುಪೇಟೆ.

ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., (ರಿ)

ಸ್ಥಾಪನೆ : 1994
ಪ್ರಧಾನ ಕಛೇರಿ : # 1414, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–04. ಮೊ : 0821-2330014, 2334140
ಶಾಖಾ ಕಛೇರಿ : # ಸಿ ಎ16, 2ನೇ ಹಂತ ವಿಜಯನಗರ, ಮೈಸೂರು–17. ಮೊ : 0821-2411556
Mail ID : agastyasociety.mysore@gmail.com GST No. 29AADAA7412N1ZI

"ಸಂಘದ ಸದಸ್ಯ ಬಾಂಧವರಿಗೆ ಸಹಕಾರ ಸಪ್ತಾಹದ ಶುಭಾಷಯಗಳು"

"ಸಹಕಾರ ಸಪ್ತಾಹ ಮತ್ತು ಕನ್ನಡರಾಜ್ಯೋತ್ಸವ"ದ ಅಂಗವಾಗಿ ಸಂಘದ ವತಿಯಿಂದ ಆಯೋಜಿಸಿರುವ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ರಾಜ್ಯ/ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿರುವ ಹಾಗೂ ಯಾವುದೇ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿ ಪ್ರಶಸ್ತಿಗೆ ಭಾಜನರಾದವರಿಗೆ ಮತ್ತು ಸಂಘದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ದಿನಾಂಕ : 17/11/2022 ರಂದು ಹಮ್ಮಿಕೊಳ್ಳಲಾಗಿದೆ.

ಸ್ಥಳ : ಗಾನಭಾರತೀ (ರಿ), ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಮಯ : ಸಂಜೆ 4:00 ಗಂಟೆಗೆ

ಶುಭಕೋರುವವರು:– ಶ್ರೀ ಸಿ ವಿ ಪಾರ್ಥಸಾರಥಿ ಅಧ್ಯಕ್ಷರು, ಶ್ರೀ ಹೆಚ್ ಎಸ್ ಪ್ರಶಾಂತ್ ತಾತಾಚಾರ್ ಉಪಾಧ್ಯಕ್ಷರು, ಶ್ರೀ ಎಂ ಡಿ ಗೋಪಿನಾಥ್ ಖಜಾಂಚಿ

ನಿರ್ದೇಶಕರು: ಶ್ರೀ ಕೆ ನಾಗರಾಜ, ಶ್ರೀ ಪ್ರೀತನ್ ಎಂ ಆರ್, ಶ್ರೀ ಎನ್ ಪಣಿರಾಜ್, ಶ್ರೀ ಎಸ್ ಎನ್ ನಾಗಶಂಕರ, ಶ್ರೀ ಎಂ ಆರ್ ಬಾಲಕೃಷ್ಣ, ಶ್ರೀ ರಂಗನಾಥ್ ಎನ್ ಎಸ್, ಶ್ರೀ ಕೆ ಎನ್ ಅರುಣ್, ಶ್ರೀ ನಾಗೇಂದ್ರ, ಶ್ರೀಮತಿ ರೇಖಾ, ಶ್ರೀಮತಿ ಎಂ ಎನ್ ಸೌಮ್ಯ, ಶ್ರೀಮತಿ ಎಸ್ ರಾಜಮ್ಮ (ಕೋ–ಆಪ್ಟ್), ಶ್ರೀ ಜಿ ಎನ್ ಸತೀಷ್ (ಕೋ–ಆಪ್ಟ್) ಹಾಗೂ ಶ್ರೀಮತಿ ಎನ್ ವೀಣಾ ಪ್ರಭಾರ ಕಾರ್ಯದರ್ಶಿ ಮತ್ತು ಸಿಬ್ಬಂದಿ ವರ್ಗದವರು.

